ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜನವರಿ 2 ಮಂಗಳವಾರ 2024
ಸಂಪುಟ: 44 | ಸಂಚಿಕೆ: 256 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಡಿಸಿಎಂ ಡಿಕೆಶಿಗೆ ಮತ್ತೊಮ್ಮೆ ಸಂಕಷ್ಟ

● ಕೇರಳ ಮೂಲದ 'ಜೈ ಹಿಂದ್' ಚಾನೆಲ್‌ಗೆ ಹೂಡಿಕೆ ವಿವರ ಸಲ್ಲಿಸಲು ಸಿಬಿಐ ನೋಟಿಸ್ ● ರಾಜ್ಯ ಸರ್ಕಾರ ಸಿಬಿಐ ತನಿಖೆ ವಾಪಸ್ ಪಡೆಯುವ ನಿರ್ಧಾರ ಕೈಗೊಂಡರೂ 'ಬೆನ್ನತ್ತಿರುವ ಕೇಂದ್ರೀಯ ತನಿಖಾ ದಳ'



ಬೆಂಗಳೂರು, ಜ.1(ಕೆಎಂಶಿ)– ಲೋಕ ಸಭಾ ಚುನಾವಣಾ ಹೊಸ್ತಿಲಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಮತ್ತೊಮ್ಮೆ ಮತ್ತೊಮ್ಮೆ ಸಂಕಷ್ಟ ಎದುರಾಗಿದೆ.

ಸರ್ಕಾರದ ಅನುಮತಿ ಇಲ್ಲದೆ, ಸಿಬಿಐ ಯಾವುದೇ ಪ್ರಕರಣ ದಾಖಲಿಸುವಂತಿಲ್ಲ ಎಂದು ಕರ್ನಾಟಕ ಸರ್ಕಾರ ತೀರ್ಮಾನ ಕೈಗೊಂಡು ಆದೇಶ ಹೊರಡಿಸಿದ್ದರೂ, ಹೂಡಿಕೆಗೆ ಸಂಬಂಧಿಸಿದಂತೆ ಶಿವಕುಮಾರ್ ಮತ್ತು ಅವರ ಕುಟುಂಬ ವರ್ಗದವರ ವಿಚಾರಣೆಯನ್ನು ಕೇಂದ್ರ ತನಿಖಾ ದಳ ಮುಂದುವರೆಸಿದೆ. ಕೇರಳ ● 9ನೇ ಪುಟಕ್ಕೆ

ನನ್ನನ್ನು ಒಳಗೆ ಹಾಕಿಕೊಳ್ಳಬೇಕು ಎಂದಿದ್ದರೆ, ಹಾಕಿಕೊಳ್ಳಲಿ...!

ಬೆಂಗಳೂರು: ನನ್ನ ಗಳಿಕೆಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ನೀಡಿದ್ದರೂ ಸಿಬಿಐ ಮತ್ತೆ ನೋಟಿಸ್ ಜಾರಿ ಮಾಡುತ್ತಿರುವುದು ರಾಜಕೀಯ ಷಡ್ಯಂತ್ರ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೂರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವು ಕಾಣದ ಕೈಗಳು ಈ ಷಡ್ಯಂತ್ರದ ಹಿಂದಿದ್ದು, ತಮ್ಮನ್ನು ರಾಜಕೀಯವಾಗಿ ಕಟ್ಟಿ ಹಾಕುವ ಪ್ರಯತ್ನ ನಡೆಸಿದ್ದಾರೆ. ಸಿಬಿಐ ತನಿಖೆ ಪೂರ್ಣಗೊಳಿಸುವ ಹಂತದಲ್ಲಿದೆ ಎಂದು ಕೊಂಡು ನನ್ನನ್ನು ವಿಚಾರಣೆಗೆ ಕರೆಸಬೇಕಿತ್ತು, ಈ ಹಂತದಲ್ಲಿ ದುರುದ್ದೇಶದ ರಾಜಕೀಯ ಮನಗಂಡು ಸಿಬಿಐ ತನಿಖೆಗೆ ನೀಡಿದ್ದ ಪ್ರಕರಣವನ್ನು ಕರ್ನಾಟಕ ಸರ್ಕಾರ ಹಿಂದಕ್ಕೆ ಪಡೆದಿದೆ. ಇಷ್ಟಾದರೂ ನನ್ನನ್ನು ಸಿಬಿಐನವರು ಕರೆಯುತ್ತಿದ್ದಾರೆ. ಅವರ ನೋಟಿಸ್ ಅನ್ನು ಪ್ರಶ್ನಿಸಿದ್ದೇನೆ. ನಾನು ಹೋಗುತ್ತಿಲ್ಲ, ಅವರು ನನ್ನನ್ನು ಒಳಕ್ಕೆ ಹಾಕಿಕೊಳ್ಳಬೇಕು ಎಂದಿದ್ದರೆ, ಹಾಕಿಕೊಳ್ಳಲಿ. ನಾನೇನು ಹೆದರುವುದಿಲ್ಲ. ನೋಡೋಣ, ಅವರೇನು ಮಾಡುತ್ತಾರೋ ಮಾಡಿಕೊಳ್ಳಲಿ. ಅಕ್ರಮ ಆದಾಯ ಪ್ರಕರಣದಲ್ಲಿ ನನಗೆ ಕಿರುಕುಳ ಮುಂದುವರೆಸಿದ್ದಾರೆ. ಸರ್ಕಾರ ಅನುಮತಿಯನ್ನು ಹಿಂದಕ್ಕೆ ಪಡೆದಿದ್ದರೂ ಸಿಬಿಐನವರು ಸಬ್ ರಿಜಿಸ್ಟ್ರಾರ್ ಕಚೇರಿ, ಸರ್ಕಾರಿ ಕಚೇರಿ, ಸಹಕಾರಿ ಸೊಸೈಟಿ, ನಾನು ಅಧ್ಯಕ್ಷನಾಗಿರುವ ಸಂಸ್ಥೆ ಸೇರಿದಂತೆ ಅನೇಕರಿಗೆ ನೋಟಿಸ್ ಕೊಟ್ಟಿದ್ದಾರೆ.

ಯಾವ ಲೆಕ್ಕಾಚಾರದ ಮೇಲೆ ಈ ನೋಟಿಸ್ ಕೊಡುತ್ತಿದ್ದಾರೆ ಎಂಬುದು ಗೊತ್ತಿಲ್ಲ, ಅವರ ಉದ್ದೇಶ ಏನೆಂಬುದೂ ತಿಳಿದಿಲ್ಲ. ಆದರೆ ಮೇಲ್ನೋಟಕ್ಕೆ ಅವರು ನನಗೆ ಹಾಗೂ ಪಕ್ಷಕ್ಕೆ ತೊಂದರೆ ನೀಡಲು ದೊಡ್ಡ ಷಡ್ಯಂತ್ರ ● 9ನೇ ಪುಟಕ್ಕೆ

ಕೆಬಿಜಿಯವರ
ಛೂಮಂತ್ರ... ಛೂಮಂತ್ರ...



ಸದ್ಗುರು ಶ್ರೀ ಮಧುಸೂದನ ಸಾಯಿ–2

ಭಗವಾನ್ ಶ್ರೀ ಸತ್ಯ ಸಾಯಿ ಬಾಬಾರ ಅಪರ ಆತ್ಮವೆ?

■ ಪುಟ–4

ಅಯೋಧ್ಯೆ ಶ್ರೀರಾಮಮಂದಿರದ ಗರ್ಭಗುಡಿಯಲ್ಲಿ ಮೈಸೂರು ಶಿಲ್ಪಿ ಅರುಣ್ ಯೋಗಿರಾಜರ ರಾಮಲಲ್ಲಾ ಪ್ರತಿಷ್ಠಾಪನೆ ಬಹುತೇಕ ಖಚಿತ


" ರಾಮನ ಜನ್ಮಭೂಮಿಯಾದ ಕಾರಣ ಬಾಲರಾಮನ ವಿಗ್ರಹ ಪ್ರತಿಷ್ಠಾಪನೆ ಮಾಡಲಾಗುತ್ತಿದೆ. ಬಾಲರಾಮನ ವಿಗ್ರಹ ಎಲ್ಲಿಯೂ ದೊರೆತಿಲ್ಲ. ಹೀಗಾಗಿ ಸಾಕಷ್ಟು ಹೋಮ್ ವರ್ಕ್ ಮಾಡಿಕೊಳ್ಳಲಾಯಿತು. ಬಿಲ್ಲು ಮತ್ತು ಬಾಣ ಹಿಡಿದ ಭಂಗಿಯಲ್ಲಿ ಬಾಲರಾಮ ವಿಗ್ರಹ ಮೂಡಿಸಿದ್ದೇನೆ. ವಿಗ್ರಹ 51 ಇಂಚು ಇದೆ. ಬಾಲ ರಾಮನ ವಿಗ್ರಹ ಕೆತ್ತನೆಯ ಬಗ್ಗೆ ಮೂವರು ಕಲಾವಿದರೂ ಪರಸ್ಪರ ಮಾತನಾಡಿಲ್ಲ. ಇದು ನಾವೇ ಸ್ವತಃ ಕೈಗೊಂಡು ತೀರ್ಮಾನವಾಗಿತ್ತು. ಯಾರದ್ದೂ ಆಯ್ಕೆ ಯಾದರೂ ಸಂತಸವೇ. ಆಯ್ಕೆ ಆಗದ ಇನ್ನೆರಡು ವಿಗ್ರಹಗಳನ್ನೂ ಮಂದಿರದ ಆವರಣದಲ್ಲಿ ಪ್ರತಿಷ್ಠಾಪಿಸುವ ಯೋಜನೆಯನ್ನು ಟ್ರಸ್ಟ್ ಹಾಕಿಕೊಂಡಿದೆ. **–ಅರುಣ್ ಯೋಗಿರಾಜ್**



ಮೈಸೂರು,ಜ.1(ಪಿಎಂ)–ಅಯೋಧ್ಯೆ ಶ್ರೀರಾಮ ಮಂದಿರದ ಗರ್ಭಗುಡಿಯಲ್ಲಿ ರಾಮಲಲ್ಲಾನ (5 ವರ್ಷದ ಬಾಲರಾಮನ ವಿಗ್ರಹ) ವಿಗ್ರಹದ ಪ್ರತಿಷ್ಠಾಪನೆಗೆ ದಿನಗಣನೆ ಆರಂಭವಾಗಿದೆ. ಮೂರು ವಿಗ್ರಹಗಳು ಸಿದ್ಧಗೊಂಡಿದ್ದು, ಈ ಪೈಕಿ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರ ಕೆತ್ತನೆಯ ವಿಗ್ರಹದ ಆಯ್ಕೆ ಬಹುತೇಕ ಖಚಿತ ಎಂದು ಮೂಲಗಳಿಂದ ತಿಳಿದು ಬಂದಿದೆ ಅಂತೆಯೇ ಅರುಣ್ ಕುಟುಂಬಸ್ಥರೂ ಇದೇ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜ.22ರಂದು ರಾಮಮಂದಿರದ ಉದ್ಘಾಟನೆ ನೆರವೇರಲಿದ್ದು, ಮಂದಿರದ ಗರ್ಭ ಗುಡಿಯಲ್ಲಿ ರಾಮಲಲ್ಲಾ (ಬಾಲರಾಮ) ವಿಗ್ರಹ ಪ್ರಾಣ ಪ್ರತಿಷ್ಠಾಪನೆಯೂ ಇದೇ ವೇಳೆ ಆಗಲಿದೆ. ಕೆಲ ದಿನಗಳ ಹಿಂದೆಯಷ್ಟೇ ಅಯೋಧ್ಯಾ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ವತಿಯಿಂದ ಮಂದಿರದ ಗರ್ಭಗುಡಿಯ ಫೋಟೋ ಬಿಡುಗಡೆಯಾಗಿದೆ. ಆದರೆ ಸಿದ್ಧಗೊಂಡಿರುವ ಮೂರು ರಾಮಲಲ್ಲಾನ ವಿಗ್ರಹಗಳ ಚಿತ್ರ ಬಿಡುಗಡೆ ಮಾಡಿದಂತಿಲ್ಲ. ಅರುಣ್ ಯೋಗಿರಾಜ್ ಸೇರಿದಂತೆ ಮೂವರು ಶಿಲ್ಪಿಗಳು ತಲಾ ಒಂದರಂತೆ ಮೂರು ರಾಮಲಲ್ಲಾನ ವಿಗ್ರಹಗಳ ಕೆತ್ತನೆ ಮಾಡಿದ್ದಾರೆ. ರಾಮ ಮಂದಿರದ ಆವರಣದಲ್ಲೇ ಮೈಸೂರಿನ ಅರುಣ್ ಯೋಗಿರಾಜ್, ಬೆಂಗಳೂರಿನ ಗಣೇಶ್ ಭಟ್ ಮತ್ತು ರಾಜಸ್ಥಾನದ ಜೈಪುರದ ಸತ್ಯನಾರಾಯಣ ಪಾಂಡೆ ಕಳೆದ ಏಳು ತಿಂಗಳಿಂದ ಕೆತ್ತನೆ ಕೆಲಸ ಮಾಡಿ ತಮ್ಮ ಜವಾಬ್ದಾರಿ ಪೂರ್ಣಗೊಳಿಸಿದ್ದಾರೆ. ಮೂವರು ಶಿಲ್ಪಿಗಳು ಸಿದ್ಧಪಡಿಸಿರುವ ಮೂರು ಪ್ರತ್ಯೇಕ ● 9ನೇ ಪುಟಕ್ಕೆ

ಶಿಲ್ಪಿ ಅರುಣ್ ಕುಟುಂಬಸ್ಥರಲ್ಲಿ ಸಂಭ್ರಮ



51 ಇಂಚಿನ ಎತ್ತರದ 5 ವರ್ಷದ ರಾಮಲಲ್ಲಾ ವಿಗ್ರಹ ಸ್ಥಾಪನೆಗೆ ನಿರ್ಧಾರ

ಅಯೋಧ್ಯೆ: ಇದೇ ಜ.22ರಂದು ರಾಮಮಂದಿರದ ಪ್ರತಿಷ್ಠಾಪನೆಗೆ ಅಯೋಧ್ಯೆ ಸಜ್ಜಾಗುತ್ತಿದ್ದು, ಐದು ವರ್ಷದ ರಾಮ ಲಲ್ಲಾನನ್ನು ಪ್ರತಿಬಿಂಬಿಸುವ 51 ಇಂಚು ಎತ್ತರದ ರಾಮನ ವಿಗ್ರಹವನ್ನು ಪ್ರಾಣ ಪ್ರತಿಷ್ಠಾಪನೆಗಾಗಿ ಆಯ್ಕೆ ಮಾಡಲಾಗಿದೆ.

ಮೈಸೂರಿನ ಶಿಲ್ಪಿಯ ಮೂರ್ತಿ ಆಯ್ಕೆ?: ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರೈ ಮಾತನಾಡಿ, ಭಗವಾನ್ ರಾಮ ಲಲ್ಲಾನ ವಿಗ್ರಹದ ಆಯ್ಕೆಗಾಗಿ ಈ ಹಿಂದೆ ಟ್ರಸ್ಟ್‌ನ ಸಭೆ ನಡೆಸಲಾಗಿತ್ತು. ಭವ್ಯ ದೇವಾಲಯದ ಗರ್ಭಗುಡಿಯೊಳಗೆ ಈ ವಿಗ್ರಹವನ್ನು ಪ್ರತಿಷ್ಠಾಪಿಸಲಾಗುವುದು. ಮೂವರು ಶಿಲ್ಪಿಗಳು ಸ್ಪರ್ಧೆಯಲ್ಲಿದ್ದರು. 5 ವರ್ಷದ ಬಾಲರಾಮನ ರೂಪದಲ್ಲಿ ಭಗವಾನ್ ರಾಮನ ಅದ್ಭುತವಾಗಿ ರಚಿಸಲಾದ 51 ಇಂಚು ಎತ್ತರದ ವಿಗ್ರಹವನ್ನು ಆಯ್ಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ರಾಮನ ವಿಗ್ರಹದ ಕಣ್ಣುಗಳು ಕಮಲದ ದಳಗಳನ್ನು ಹೋಲುತ್ತವೆ. ಬಾಲರಾಮ ಮುಖವು ಚಂದ್ರನಂತೆ ಹೊಳೆಯುತ್ತದೆ. ತುಟಿಗಳ ಮೇಲೆ ಪ್ರಶಾಂತವಾದ ನಗುವಿದೆ. ಬಾಲರಾಮ ಉದ್ದನೆಯ ತೋಳುಗಳು ಗಮನ ಸೆಳೆಯುತ್ತವೆ. ರಾಮಲಲ್ಲಾ ಮೂರ್ತಿಯು ಒಂದು ಅಂತರ್ಗತ ದೈವಿಕ ಪ್ರಶಾಂತತೆಯ ನೋಟವನ್ನು ಹೊಂದಿದೆ. ಅತ್ಯಾಕರ್ಷಕವಾಗಿ ಕೆತ್ತಲಾದ ವಿಗ್ರಹದಲ್ಲಿ ರಾಜ ದಶರಥನ ಪುತ್ರ ಹಾಗೂ ವಿಷ್ಣುವಿನ ಅವತಾರವನ್ನು ನೋಡಬಹುದು. ರಾಮನ ಮಂದಿರದ ಗರ್ಭಗುಡಿಯಲ್ಲಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುವುದು. ವಿಗ್ರಹವನ್ನು ಪ್ರತಿಷ್ಠಾಪಿಸುವ ದೇವಾಲಯದ ಭಾಗ ಸಿದ್ಧವಾಗಿದೆ ಎಂದು ಚಂಪತ್ ರೈ ಮಾಹಿತಿ ನೀಡಿದ್ದಾರೆ.

ಕಾರು–ಬೈಕ್ ನಡುವೆ ಡಿಕ್ಕಿ: ಬಿಬಿಎ ವಿದ್ಯಾರ್ಥಿಗಳು ದುರ್ಮರಣ

ಹೊಸ ವರ್ಷಾಚರಣೆ ನಂತರ ಮನೆಗೆ ಮರಳುತ್ತಿದ್ದಾಗ ಸೋಮವಾರ ಮುಂಜಾನೆ ಹುಣಸೂರು ರಸ್ತೆಯ ಚದುರಂಗ ರಸ್ತೆ ಜಂಕ್ಷನ್‌ನಲ್ಲಿ ದುರಂತ

ಮೈಸೂರು, ಜ.1(ಆರ್‌ಕೆ)– ಕಾರು–ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಹೊಸ ವರ್ಷಾಚರಣೆ ಸಂತೋಷ ಕೂಟ ಮುಗಿಸಿ ಮನೆಗೆ ತೆರಳುತ್ತಿದ್ದ ಇಬ್ಬರು ವಿದ್ಯಾರ್ಥಿಗಳು ದುರ್ಮರಣಕ್ಕೀಡಾಗಿದ್ದಾರೆ. ಈ ದುರಂತ ಮೈಸೂರಿನ ಹುಣಸೂರು ರಸ್ತೆ ಚದುರಂಗ ರೋಡ್ ಜಂಕ್ಷನ್‌ನಲ್ಲಿ ಸೋಮವಾರ ಮುಂಜಾನೆ ಸಂಭವಿಸಿದೆ.

ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರ ಹೋಬಳಿ ಹರದೂರು ಬಳಿಯ ಕೌಲನಹಳ್ಳಿ ಗ್ರಾಮದ ಸಂಪತ್(22) ಹಾಗೂ ಹಾಸನ ನಗರದ ವೃತಿಕ್ ಧರಣಿ (23) ಸಾವನ್ನಪ್ಪಿದವರು. ಮೈಸೂರಿನ ಜಯಲಕ್ಷ್ಮೀಪುರಂನ ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಬಿಬಿಎ ಪದವಿ ವ್ಯಾಸಂಗ ಮಾಡುತ್ತಿದ್ದ ಸಂಪತ್ ಹಿನಕಲ್‌ನಲ್ಲಿ ಹಾಗೂ ವೃತಿಕ್ ಪಡುವಾರಹಳ್ಳಿಯಲ್ಲಿ ವಾಸವಾಗಿದ್ದರು. ಮೈಸೂರಿನ ಹೋಟೆಲೊಂದರಲ್ಲಿ ಭಾನುವಾರ ರಾತ್ರಿ



ಹೊಸ ವರ್ಷಾಚರಣೆ ಸಂತೋಷ ಕೂಟದಲ್ಲಿ ಪಾಲ್ಗೊಂಡಿದ್ದ ಅವರು, ಬೈಕ್‌ನಲ್ಲಿ ಹಿಂದಿರುಗುತ್ತಿದ್ದಾಗ ಐಶ್ವರ್ಯ ಪೆಟ್ರೋಲ್ ಬಂಕ್ ಕಡೆಯಿಂದ ಬಂದ ಕಾರು, ಹುಣಸೂರು ರಸ್ತೆಯ ಹಳೇ ತಹಸೀಲ್ದಾರ್ ಕಚೇರಿ ಬಳಿ ಜೆಸಿಐ ಕಡೆ ಚದುರಂಗ ರಸ್ತೆಗೆ ತಿರುಗುತ್ತಿದ್ದಾಗ ಸೋಮವಾರ ಮುಂಜಾನೆ ಡಿಕ್ಕಿ ಹೊಡೆದಿದೆ. ಕಾರು ಡಿಕ್ಕಿ ಹೊಡೆದ ರಭಸಕ್ಕೆ ಬೈಕ್ ಸವಾರರಾದ ಸಂಪತ್ ಮತ್ತು ವೃತಿಕ್ ತಲೆಗೆ ತೀವ್ರ ಗಾಯಗಳಾಗಿ, ಅತೀವ ರಕ್ತಸ್ರಾವದಿಂದ ಇಬ್ಬರೂ ಸ್ಥಳದಲ್ಲೇ ಮೃತಪಟ್ಟರು ಎಂದು ವಿವಿ ಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಲವ ತಿಳಿಸಿದ್ದಾರೆ.

ಬೈಕ್ ಸವಾರರು ಅಪಘಾತ ನಡೆದ ಸ್ಥಳದಿಂದ ಸುಮಾರು 15 ಅಡಿ ದೂರದಲ್ಲಿ ಬಿದ್ದಿದ್ದರು. ವಿಷಯ ತಿಳಿದ ತಕ್ಷಣ ರಾತ್ರಿ ಗಸ್ತಿನಲ್ಲಿದ್ದ ವಿವಿ ಪುರಂ ಸಂಚಾರ ಠಾಣೆ ಹಾಗೂ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿದರಾದರೂ, ಅಷ್ಟರಲ್ಲಿ ಸಂಪತ್ ಮತ್ತು ವೃತಿಕ್ ಸಾವನ್ನಪ್ಪಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ವಿವಿ ಪುರಂ ಸಂಚಾರ ಠಾಣೆ ಪೊಲೀಸರು, ಮಹಜರು ನಡೆಸಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಇಂದು ಬೆಳಗ್ಗೆ ದೇಹಗಳನ್ನು ವಾರಸುದಾರರಿಗೊಪ್ಪಿಸಿದರು.

ಈ ಅಪಘಾತ ಹೊರತುಪಡಿಸಿದರೆ ಮೈಸೂರು ನಗರದಾದ್ಯಂತ ಹೊಸ ವರ್ಷಾಚರಣೆಯಲ್ಲಿ ಯಾವುದೇ ಅಹಿತಕರ ಘಟನೆಗಳು ವರದಿಯಾಗಿಲ್ಲ.

ರಾಮಮಂದಿರ ನಿರ್ಮಾಣಕ್ಕೆ ನಮ್ಮ ಬೆಂಬಲವಿದೆ

ಸಹೋದ್ಯೋಗಿಗಳ ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾದ ಮುಖ್ಯಮಂತ್ರಿ ಸಿದ್ದರಾಮಯ್ಯ!



ಬೆಂಗಳೂರು: ವೋಟಿಗಾಗಿ ರಾಮ ಮಂದಿರ ಎಂಬ ಸಚಿವ ಡಿ.ಸುಧಾಕರ್ ಹೇಳಿಕೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿರುವಂತೆಯೇ ಇತ್ತ ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, 'ರಾಮಮಂದಿರ ನಿರ್ಮಾಣಕ್ಕೆ ನಮ್ಮ ಬೆಂಬಲ' ಎಂದು ಹೇಳಿದ್ದಾರೆ.

ಅಯೋಧ್ಯೆ ರಾಮಮಂದಿರ ಉದ್ಘಾಟನೆ ವಿಚಾರವನ್ನು ಬಿಜೆಪಿ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿದೆ ಎಂದು ಹಲವು ವಿರೋಧ ಪಕ್ಷದ ನಾಯಕರು ಆರೋಪಿಸಿರುವ ಬೆನ್ನಲ್ಲೇ, 'ನಮ್ಮ ಸರ್ಕಾರ ಮತ್ತು ಪಕ್ಷ ರಾಮಮಂದಿರದ ಪರವಾಗಿದೆ. ರಾಮಮಂದಿರಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ' ಎಂದು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಅಯೋಧ್ಯೆ ರಾಮಮಂದಿರ ವಿಚಾರಕ್ಕೆ ನಮ್ಮ ವಿರೋಧವಿಲ್ಲ. ಮಂದಿರ ನಿರ್ಮಾಣಕ್ಕೆ ನಮ್ಮ ವಿರೋಧವಿಲ್ಲ. ನಾವು ರಾಮಮಂದಿರದ ಪರವಾಗಿದ್ದೇವೆ. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣದ ಪರವಾಗಿ ತಮ್ಮ ಸರ್ಕಾರವಿದ್ದು, ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ.

ಉದ್ಘಾಟನೆಗೆ ಆಹ್ವಾನ ಬಂದಿಲ್ಲ: ಈ ಮಧ್ಯೆ, ಅಯೋಧ್ಯೆ ರಾಮ ಮಂದಿರ ಉದ್ಘಾಟನೆಗೆ ಆಹ್ವಾನ ಬಂದಿಲ್ಲ, ಆಹ್ವಾನ ಬಂದರೆ ಆಮೇಲೆ ● 9ನೇ ಪುಟಕ್ಕೆ

ಹೊಸ ವರ್ಷದ ಮೊದಲ ದಿನ ಮೈಸೂರಿನ ದೇವಾಲಯಗಳಲ್ಲಿ ಭಕ್ತ ಸಾಗರ



ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಮುಂದೆ ಭಾರಿ ಪ್ರಮಾಣದ ಭಕ್ತರ ದಂಡು

ಮೈಸೂರು, ಜ. 1(ಆರ್‌ಕೆ)– 2024ರ ಹೊಸ ವರ್ಷದ ಮೊದಲ ದಿನವಾದ ಸೋಮವಾರ ಮೈಸೂರಿನ ದೇವಾಲಯಗಳಲ್ಲಿ ಭಕ್ತರ ದಂಡೇ ನೆರೆದಿತ್ತು.

ನಿನ್ನೆ (2023ರ ಡಿಸೆಂಬರ್ 31) ಇಡೀ ರಾತ್ರಿ ಹೊಸ ವರ್ಷಾಚರಣೆ ಸಂಭ್ರಮದಲ್ಲಿ ಮಿಂದೆದ್ದ ಯುವ ಸಮೂಹ 2023ಕ್ಕೆ ವಿದಾಯ ಹೇಳಿ 2024ರ ಹೊಸ ವರ್ಷವನ್ನು ಸಡಗರದಿಂದ ಸ್ವಾಗತಿಸಿದ್ದರು. ಇಂದು ಬೆಳಗ್ಗೆ 6 ಗಂಟೆಯಿಂದಲೇ ಭಕ್ತರು ಹೊಸ ಬಟ್ಟೆ ಧರಿಸಿ ದೇವಸ್ಥಾನಗಳಿಗೆ ತೆರಳಿ ದೇವರ ದರ್ಶನ ಪಡೆದು, ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸಿದರು.

ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಸಾವಿರಾರು ಭಕ್ತರು, ಪ್ರವಾಸಿಗರು ಭೇಟಿ ನೀಡಿ ದೇವಿಯ ದರ್ಶನ ಪಡೆದರು. ಹೊಸ ವರ್ಷಾಚರಣೆಗೆಂದು ಮೈಸೂರಿಗೆ ಆಗಮಿಸಿ ವಾಸ್ತವ್ಯ ಹೂಡಿದ್ದ ಕೇರಳ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ದೇಶ–ವಿದೇಶಗಳ ಪ್ರವಾಸಿಗರು ಇಂದು ಚಾಮುಂಡಿಬೆಟ್ಟ, ಮೈಸೂರು ಅರಮನೆ, ಮೃಗಾಲಯಗಳಿಗೆ ಭೇಟಿ ನೀಡಿದ್ದರಿಂದ ಪ್ರವಾಸಿ ತಾಣಗಳಲ್ಲಿ ಭಾರಿ ದಟ್ಟಣೆ ಉಂಟಾಗಿತ್ತು. ಬೆಳಗ್ಗೆಯಿಂದ ರಾತ್ರಿವರೆಗೂ ಸಾಲುಗಟ್ಟಿ ನಿಂತು ದೇವರ ದರ್ಶನ ಮಾಡಿದ ಭಕ್ತರಿಗೆ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣ, ಅರ್ಚಕರು ಅಗತ್ಯ ಸೌಲಭ್ಯ ಕಲ್ಪಿಸಿ ಪ್ರಸಾದ ವಿನಿಯೋಗ ಮಾಡಿದರು.

ಅದೇ ರೀತಿ ಉತ್ತನಹಳ್ಳಿಯ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನ, ಅರಮನೆ ಆವರಣ, ಉತ್ತರ ದ್ವಾರದ ಕೋಟೆ ಆಂಜನೇಯ, ಗಣಪತಿ ದೇವಸ್ಥಾನಗಳು, ಇರ್ವಿನ್ ರಸ್ತೆಯ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನ, ದಿವಾನ್ಸ್ ರಸ್ತೆಯ ಶ್ರೀ ಅಮೃತೇಶ್ವರ, ಅಗ್ರಹಾರದ 101 ಗಣಪತಿ ದೇವಸ್ಥಾನ, ಒಂಟಿಕೊಪ್ಪಲಿನ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಾಲಯ, ಮಾತೃಮಂಡಳಿ ಸರ್ಕಲ್‌ನ ಚಂದ್ರಮೌಳೇಶ್ವರ ಸ್ವಾಮಿ ದೇವಾಲಯ, ವಿಜಯನಗರದ ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯ, ಜಯನಗರದ ಶ್ರೀ ಕೃಷ್ಣ ದೇವಾಲಯ, ಗೋಕುಲಂನ ಗಣಪತಿ ದೇವಸ್ಥಾನ ಸೇರಿದಂತೆ ಮೈಸೂರಿನ ಎಲ್ಲಾ ದೇವಾಲಯಗಳಲ್ಲಿ ಭಕ್ತರ ದಂಡೇ ನೆರೆದಿತ್ತು.



ವಿಜಯನಗರದ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಲಡ್ಡು ಪ್ರಸಾದ ವಿತರಣೆ

ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಾಲಯಕ್ಕೆ ಸಾವಿರಾರು ಭಕ್ತರು ಭೇಟಿ ನೀಡಿ, ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಎಲ್ಲಾ ದೇವಾಲಯಗಳ ಬಳಿ ಪಾರ್ಕಿಂಗ್ ಸ್ಥಳದಲ್ಲಿ ಜಾಗ ಸಿಗದ ಕಾರಣ ಪ್ರವಾಸಿಗರು ಮತ್ತು ಭಕ್ತವೃಂದ ವಾಹನ ನಿಲುಗಡೆಗೆ ಪರದಾಡುವಂತಾಯಿತು. ಕ್ರಿಸ್‌ಮಸ್, ಹೊಸ ವರ್ಷಾಚರಣೆಗೆಂದು ಮೈಸೂರಿಗೆ ಆಗಮಿಸಿದ್ದ ಪ್ರವಾಸಿಗರು ಇಂದು ಮಧ್ಯಾಹ್ನದ ನಂತರ ತಮ್ಮ ಊರುಗಳಿಗೆ ಹಿಂದಿರುಗಿದರು. ಸಾವಿರಾರು ಭಕ್ತರು ಭೇಟಿ ನೀಡಿದ ಹಿನ್ನೆಲೆಯಲ್ಲಿ ಚಾಮುಂಡಿ ಬೆಟ್ಟದ ರಸ್ತೆ, ಲಲಿತಮಹಲ್ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಆದ ಕಾರಣ ಕೆಲ ಕಾಲ ಸಂಚಾರಕ್ಕೆ ಅಡಚಣೆ ಉಂಟಾಯಿತು.

ನಿರಾಶ್ರಿತರಿಗೆ ಹೊದಿಕೆ ವಿತರಿಸುವ ಮೂಲಕ ಹೊಸ ವರ್ಷ ಸ್ವಾಗತಿಸಿದ ಕೆಎಂಪಿಕೆ ಟ್ರಸ್ಟ್



ಮೈಸೂರು,ಜ.1–2024 ಹೊಸ ವರ್ಷ ಆಚರಣೆ ಹಿನ್ನೆಲೆಯಲ್ಲಿ ಸರಸ್ವತಿಪುರಂನಲ್ಲಿರುವ ಸಾನ್ನಿಧ್ಯ ವೃದ್ಧಾಶ್ರಮದಲ್ಲಿರುವ ನಿರಾಶ್ರಿತರಿಗೆ ಹೊದಿಕೆ ವಿತರಿಸುವ ಮೂಲಕ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ 2024ರ ಹೊಸ ವರ್ಷವನ್ನು ವಿಶೇಷವಾಗಿ ಸ್ವಾಗತಿಸಿದೆ.

ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಕೆಎಂಪಿಕೆ ಟ್ರಸ್ಟ್ ಸದಸ್ಯರು ಈಗಾಗಲೇ ಹತ್ತು ದಿನಗಳ ಕಾಲ ಪ್ರತಿದಿನ ರಾತ್ರಿ ಮೈಸೂರು ನಗರದ ಕೆಲವು ಪ್ರದೇಶಗಳಿಗೆ ಭೇಟಿ ನೀಡಿ ಫುಟ್‌ಪಾತ್ ಹಾಗೂ ಲಾರಿ ಕೆಳಗಡೆ ಜೀವನ ಸಾಗಿಸುತ್ತಿರುವ ನಿರಾಶ್ರಿತರಿಗೆ ಸ್ಥಳಕ್ಕೆ ತೆರಳಿ ಹೊದಿಕೆ ನೀಡಿ ಮಾನವೀಯತೆ ಮೆರೆದಿದ್ದಾರೆ. ಇತ್ತೀಚಿನ ದಿನಗಳಲ್ಲಿ ಯುವಕರು ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋಗಿ ಮೋಜು ಮಸ್ತಿ ಮಾಡಲು ಸ್ನೇಹಿತರೊಡನೆ ಮೈಮರೆತು ಮದ್ಯಪಾನ ಮಾಡಿ ಕುಣಿದು ಕುಪ್ಪಳಿಸುವ ಇಂತಹ ಸಂದರ್ಭದಲ್ಲೂ ನಿರಾಶ್ರಿತರಿಗೆ ಹೊದಿಕೆ ವಿತರಿಸುವ ಮೂಲಕ ಹೊಸ ವರ್ಷವನ್ನು ಅರ್ಥಪೂರ್ಣವಾಗಿ ಆಚರಿಸಿ ಸಮಾಜಕ್ಕೆ ಸಂದೇಶ ನೀಡಿರುವುದು ಶ್ಲಾಘನೀಯ ಎಂದರು.

ಸಮಾಜಸೇವಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ಹವಾಮಾನ ಏರುಪೇರು, ಥಂಡಿ ಶೀತಗಾಳಿ ಹೆಚ್ಚಿರುವ ಹಿನ್ನೆಲೆಯಲ್ಲಿ ಅಶಕ್ತರು ನಿರಾಶ್ರಿತರಿಗೆ ನೆರವಾಗಲು ಹೊದಿಕೆ ನೀಡುತ್ತಿರುವುದು ಅರ್ಥಪೂರ್ಣವಾಗಿದೆ, ನಗರ ಮಟ್ಟದಲ್ಲಿ ವೃದ್ಧಾಶ್ರಮಗಳಿಗೆ ಸರ್ಕಾರಗಳು ತೆರಿಗೆ ವಿನಾಯಿತಿ, ಉಚಿತ ವಿದ್ಯುತ್ ನೀರು ಪೂರೈಕೆ ಸಹಾಯಧನ ಸೌಲಭ್ಯಗಳು ನೀಡಲು ಮುಂದಾಗಬೇಕು ಎಂದರು

ಇದೇ ಸಂದರ್ಭದಲ್ಲಿ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕಡಕೊಳ ಜಗದೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಬೈರತಿ ಲಿಂಗರಾಜು, ಸುಚೇಂದ್ರ, ರಂಗನಾಥ್, ಚಕ್ರಪಾಣಿ ಸೇರಿದಂತೆ ಇನ್ನಿತರರು ಹಾಜರಿದ್ದರು.



ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರು ಸ್ಥಗಿತಗೊಳಿಸುವಂತೆ ಆಗ್ರಹಿಸಿ ಮೈಸೂರಿನ ಪುರಭವನದಲ್ಲಿ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್ ನೇತೃತ್ವದಲ್ಲಿ ಶಾಂತಿಯುತ ಧರಣಿ ಸತ್ಯಾಗ್ರಹ 59ನೇ ದಿನವಾದ ಸೋಮವಾರವೂ ನಡೆಯಿತು. ಈ ವೇಳೆ ಸ.ರ.ಸುದರ್ಶನ ಮಾತನಾಡಿ, ಸಿದ್ದರಾಮಯ್ಯ ಸರ್ಕಾರ ಕಾವೇರಿ ನೀರಿನ ವಿಚಾರದಲ್ಲಿ ಕನ್ನಡಿಗರಿಗೆ ಅನ್ಯಾಯ ಮಾಡಿದ್ದಾರೆಂದು ಆರೋಪಿಸಿದರು. ಧರಣಿ ಸತ್ಯಾಗ್ರಹದಲ್ಲಿ ಬಿಜೆಪಿ ಮುಖಂಡರಾದ ಮಹೇಶ್‌ಗೌಡ, ಮಂಜುಳ, ಪುಷ್ಪ, ಅನಿಲ್ ರಾಜ್, ವಿಷ್ಣು, ಕುಮಾರ್, ಆಶಿಸ್, ಕಿರಣ್, ಎಂ.ಎಸ್.ಅಶೋಕ್, ಸೋಮಶೇಖರ, ಮಂಜುಳ ಲೋಕೇಶ್‌ಗೌಡ, ಶಿವಕುಮಾರ್, ಆಟೋ ಮಹದೇವ್, ಮಹದೇವಸ್ವಾಮಿ, ಕೃಷ್ಣಪ್ಪ, ಉಮಾಶಂಕರ, ರಾಜು ಪ್ರಭು, ಸಂಜಯ್, ಕಾವ್ಯ, ನಂದೀಶ್ ಇದ್ದರು.

ಕನ್ನಡ ಪತ್ರಿಕೆಗಳ ಕೊಂಡು ಓದಿ ಅಭಿಯಾನ...



ಮೈಸೂರು, ಜ. 1(ಆರ್‌ಕೆ)– ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ಸಂಯುಕ್ತಾಶ್ರಯದಲ್ಲಿ ಸೋಮವಾರ ಮೈಸೂರಿನ ಗಾಂಧಿ ವೃತ್ತದಲ್ಲಿ "ಕನ್ನಡ ಪತ್ರಿಕೆಗಳನ್ನು ಕೊಂಡು ಓದಿ" ಅಭಿಯಾನ ಆಯೋಜಿಸಲಾಗಿತ್ತು.


ಶಾಸಕ ಕೆ. ಹರೀಶ್‌ಗೌಡ ಓದುಗರಿಗೆ ಅರಿವು ಮೂಡಿಸುವ ಅಭಿಯಾನವನ್ನು ಉದ್ಘಾಟಿಸಿದರು. ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆ, ಇತಿಹಾಸ ಉಳಿವು ಹಾಗೂ ಕನ್ನಡ ನಾಡಿನ ಜನರ ಭಾವನೆಗಳಿಗೆ ಸ್ಪಂದಿಸಿ ಸಮಾಜದ ಕನ್ನಡಿಯಂತಿರುವ ಕನ್ನಡ ಪತ್ರಿಕೆಗಳನ್ನು ಕೊಂಡು ಓದುವ ಮೂಲಕ ಈ ಮಾಧ್ಯಮವನ್ನು ಪ್ರೋತ್ಸಾಹಿಸುವ ಜವಾಬ್ದಾರಿ ಎಲ್ಲ ಕನ್ನಡಿಗರ ಮೇಲಿದೆ ಎಂದು ಅವರು ನುಡಿದರು.

ಇದೇ ವೇಳೆ ನಿತ್ಯ ಪ್ರಕಟವಾಗುವ ಮೈಸೂರಿನ ಸ್ಥಳೀಯ ಸಣ್ಣ ಪತ್ರಿಕೆಗಳು, ಜಿಲ್ಲಾ, ಪ್ರಾದೇಶಿಕ ಹಾಗೂ ರಾಜ್ಯ ಮಟ್ಟದ ಕನ್ನಡ ದಿನಪತ್ರಿಕೆಗಳನ್ನು ಪ್ರದರ್ಶಿಸಲಾಯಿತಲ್ಲದೇ, ನಾಗರಿಕರಿಗೆ ಪ್ರತಿಗಳನ್ನು ವಿತರಿಸುವ ಮೂಲಕ ಕನ್ನಡ ಪತ್ರಿಕೆಗಳನ್ನು ಕೊಂಡು ಓದುವಂತೆ ಪ್ರೇರೇಪಿಸಲಾಯಿತು.

ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಕೆ.ಎಸ್. ಶಿವರಾಂ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸಮಾಜ ಸೇವಕ ರಘುರಾಂ ವಾಜಪೇಯಿ, ಕಸಾಪ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್, ಮಾಜಿ ಕಾರ್ಪೊರೇಟರ್‌ಗಳಾದ ರಾಜಲಕ್ಷ್ಮಿ, ಎಂ. ಶಿವಣ್ಣ, ಹಿರಿಯ ಪತ್ರಕರ್ತ ಟಿ. ಗುರುರಾಜ್, ಯೋಗೇಶ್ ಉಪ್ಪಾರ, ಲೋಕೇಶ್‌ಕುಮಾರ್, ಮೊಗಣ್ಣಾಚಾರ್, ರವಿ, ಮೊಗಣ್ಣ, ಮಹೇಂದ್ರ ಕಾಗಿನೆಲೆ ಸೇರಿದಂತೆ ಹಲವು ಕನ್ನಡಾಭಿಮಾನಿಗಳು, ಸಂಘ–ಸಂಸ್ಥೆಗಳ ಮುಖಂಡರು ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

ನಿಧನ

ವಿದುಷಿ ಜಿ.ಎನ್.ರೂಪಾ



ಮೈಸೂರು, ಜ.1– ಮೈಸೂರಿನ ಕುವೆಂಪುನಗರ ಪ್ರದೇಶದಲ್ಲಿ ಸುದೀರ್ಘ ಕಾಲ ಪತ್ರಿಕಾ ವಿತರಕರಾಗಿ ಕೆಲಸ ಮಾಡಿದ್ದ ರಮೇಶ್ ಪತ್ನಿ ವಿದುಷಿ ಜಿ.ಎನ್. ರೂಪಾ (47) ಸೋಮವಾರ ಮಧ್ಯಾಹ್ನ ನಿಧನರಾದರು. ಮೃತರ ಪುತ್ರ ರಾಹುಲ್ ಭಾರದ್ವಾಜ್ ವಕೀಲರಾಗಿ ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕುವೆಂಪುನಗರದ ಕುಮಾರ್ ಮೆಡಿಕಲ್ಸ್ ಬಳಿ ಇರುವ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಮಂಗಳವಾರ ಬೆಳಗ್ಗೆ 10 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಮಂಜುನಾಥ



ಮೈಸೂರಿನ ಹೆಬ್ಬಾಳು, ವಾಣಿವಿಲಾಸ ಬಡಾವಣೆ ನಿವಾಸಿ ಎಸ್.ಮಂಜುನಾಥ (54) ಅವರು ಸುದೀರ್ಘ ಅನಾರೋಗ್ಯದಿಂದಾಗಿ ಇಂದು ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇಂದು ಸಂಜೆ ಮಂಚೇಗೌಡನಕೊಪ್ಪಲು ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಶಾಸಕ ಕೆ.ಹರೀಶ್‌ಗೌಡ, ಕಾಂಗ್ರೆಸ್ ಮುಖಂಡ ರವಿ ಮಂಚೇಗೌಡನಕೊಪ್ಪಲು, ವಾಣಿವಿಲಾಸ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಲಂಕೇಗೌಡ, ನಿಕಟಪೂರ್ವ ಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ ಸೇರಿದಂತೆ ಹಲವರು ಮಂಜುನಾಥ ನಿಧನಕ್ಕೆ ತೀವ್ರ ಸಂತಾಪ ಸೂಚಿಸಿದ್ದಾರೆ.

ಸೂರ್ಯ ಚಂದ್ರ ಇರುವವರೆಗೂ ಶಿಲ್ಪಿ ಜಕಣಾಚಾರಿ ಅಮರ

ಮೈಸೂರು,ಜ.1– ನಾಡಿನ ಹೆಮ್ಮೆಯ ವಾಸ್ತುಶಿಲ್ಪಿ ಜಕಣಾಚಾರಿಯವರು ನಮ್ಮ ಪೀಳಿಗೆಗೆ ಮಾತ್ರವಲ್ಲದೇ, ಸೂರ್ಯ ಚಂದ್ರ ಇರುವವರೆಗೂ ಅಮರ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದರು.

ನಗರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಜಯಂತ್ಯುತ್ಸವ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ, ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಂಬೇಡ್ಕರ್, ಕುವೆಂಪು, ಬಸವಣ್ಣ ಅವರ ಸಾಲಿಗೆ ಸೇರುವ ಜಕಣಾಚಾರಿಯವರು ವಾಸ್ತುಶಿಲ್ಪದಲ್ಲಿ ನಾಡಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇಂತಹ ಮಹಾನ್ ವ್ಯಕ್ತಿಯ ಪ್ರತಿಮೆಯನ್ನು ನಿರ್ಮಿಸುವುದರ ಮೂಲಕ ಹಾಗೂ ರಸ್ತೆಗೆ ಅವರ ಹೆಸರಿಡುವ ಮೂಲಕ ಅವರ ಬಗ್ಗೆ ಮುಂದಿನ ಪೀಳಿಗೆ ತಿಳಿದುಕೊಳ್ಳುವಂತೆ ಮಾಡುವುದು ನಮ್ಮ ಕರ್ತವ್ಯ. ಇಂತಹ ಒಳ್ಳೆಯ ಕಾರ್ಯಕ್ಕೆ ಸಮುದಾಯದವರು ಒಗ್ಗಟ್ಟಾಗಿ ನಮ್ಮೊಟ್ಟಿಗೆ ಕೈ ಜೋಡಿಸಬೇಕು. ಮೈಸೂರಿನಾದ್ಯಂತ 75ರಿಂದ 80 ಸಾವಿರ ವಿಶ್ವಕರ್ಮ ಸಮುದಾಯದ ಜನರಿದ್ದಾರೆ. ನಿಮ್ಮಲ್ಲಿ ಒಗ್ಗಟ್ಟಿನ ಕೊರತೆಯಿದೆ. ಇದರಿಂದಲೇ ಸಮುದಾಯಕ್ಕೆ ಬೇಕಾದ ಸವಲತ್ತುಗಳನ್ನು ಪಡೆದುಕೊಳ್ಳುವಲ್ಲಿ ವಿಫಲರಾಗುತ್ತಿದ್ದೀರಿ. ಮುಖ್ಯಮಂತ್ರಿಗಳು ಸಮಾಜದ ಎಲ್ಲಾ ತಳವರ್ಗದವರಿಗೆ ಸೌಲಭ್ಯಗಳನ್ನು ರೂಪಿಸುತ್ತಾರೆ. ಆದರೆ ನಿಮ್ಮ ಸಮುದಾಯಕ್ಕೆ ಸಿಗಬೇಕಾದ ಎಲ್ಲಾ ಸೌಲಭ್ಯಗಳನ್ನು ಪಡೆಯಬೇಕಾದರೆ ಒಗ್ಗಟ್ಟಾಗಿ ಇರುವುದು ಬಹಳ ಮುಖ್ಯ ಎಂದು ಕಿವಿಮಾತು ಹೇಳಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಅಮರ ಶಿಲ್ಪಿ ಜಕಣಾಚಾರಿ ಅವರು ಇಲ್ಲದಿದ್ದರೆ ಸಮಾಜದಲ್ಲಿ ನಿಮ್ಮ ಸಮುದಾಯದ ಗುರುತಿಸುವಿಕೆ ಸಾಧ್ಯವಾಗುತ್ತಿರಲಿಲ್ಲ. ಜಕಣಾಚಾರಿಯವರ ಸಾಧನೆ, ಪ್ರತಿಭೆ ಶಿಲ್ಪವೈಶಿಷ್ಟ್ಯ ತಿಳಿಯಲು ಈ ಕಾರ್ಯಕ್ರಮ ಬಹಳ ಉಪಯೋಗಕಾರಿಯಾಗಿದೆ. ಇದು ಮುಂದಿನ ಪೀಳಿಗೆಗೂ ತಿಳಿಯಬೇಕು. ಎಲ್ಲರೂ ತಮಗೆ ಇಚ್ಛಿಸಿದ ಕೆಲಸವನ್ನು ಬಹಳ ಶ್ರದ್ಧೆಯಿಂದ ಮಾಡಬೇಕು. ಸಾಮಾಜಿಕವಾಗಿ, ಆರ್ಥಿಕವಾಗಿ ನಾವು ಬೆಳೆಯಬೇಕೆಂದರೆ ಸರ್ಕಾರದ ಜೊತೆಗೆ ಎಲ್ಲಾ ಸಮಾಜದ ಜನರು ಒಗ್ಗಟ್ಟಿನಲ್ಲಿರಬೇಕು ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್ ಮಾತನಾಡಿ, ಸಾಹಿತ್ಯಕ್ಕೆ ಕುವೆಂಪುವಾದರೆ, ಶಿಲ್ಪಕಲೆಗೆ ಜಕಣಾಚಾರಿ ಮೆರುಗು. ವಿದ್ಯಾರ್ಥಿಗಳು ಹಾಗೂ ಪೋಷಕರು ವಾಸ್ತುಶಿಲ್ಪದ ಅಧ್ಯಯನ ಮಾಡಲು ಮನಸ್ಸು ಮಾಡಬೇಕು. ಈ ಕಲೆಯನ್ನು ಎತ್ತರಕ್ಕೆ ಬೆಳೆಸಿ, ಮುಂದಿನ ತಲೆಮಾರು ತಿಳಿದುಕೊಳ್ಳುವಂತೆ ಮಾಡಬೇಕು. ಶಿಲ್ಪಕಲೆ ಎಂಬುದು ಎಲ್ಲರಿಗೂ ಬರುವಂತದಲ್ಲ. ಇದಕ್ಕೆ ಅದರದ್ದೇ ಆದಂತಹ ತಪಸ್ಸು, ಶ್ರದ್ಧೆ ಇರಬೇಕು. ಆಗ ಮಾತ್ರವೇ ಶಿಲ್ಪಕಲೆ ಒಲಿಯುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಟಿ.ಕೆ.ಕೆಂಪೇಗೌಡ ಮಾತನಾಡಿ, ನಾಡಿನಲ್ಲಿ ಶತಮಾನದಿಂದಲೂ ಹಲವಾರು ಸಂಗೀತಗಾರರು, ಸಂತರು, ಆಚಾರ್ಯರ ಕೊಡುಗೆಗಳು ದಾಖಲಾಗಿವೆ. ಜಗತ್ತಿಗೆ ನಮ್ಮ ತಲೆಮಾರುಗಳು ನಮ್ಮ ಸಂಸ್ಕೃತಿ ಹಾಗೂ ಪರಂಪರೆಯ ಬಗ್ಗೆ ತಿಳಿಸಿಕೊಡಬೇಕು. ಇಲ್ಲವಾದರೆ ನಾವು ನಮ್ಮ ಜ್ಞಾನದ ಅಸ್ತಿತ್ವ ಕಳೆದುಕೊಳ್ಳುತ್ತೇವೆ. ಇಂದಿನ ಯುವಕರಿಗೆ ಸೃಜನಾತ್ಮಕ ಸಂವಾದದ ಅಗತ್ಯವಿದೆ. ಸತ್ಯಂ ಶಿವಂ ಸುಂದರಂ ಎಂಬ ಜಪ ಮಾಡಿಕೊಂಡು ಒಂದು ಸಂಸ್ಕೃತಿಯನ್ನೇ ಸೃಷ್ಟಿಸಿ ಎಲ್ಲಾ ಕವಿ, ಕಲೆಗಾರರು ಹಾಗೂ ಶಿಲ್ಪಿಗಳಿಗೆ ಜಕಣಾಚಾರಿಯವರು ಸ್ಫೂರ್ತಿಯಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಗಣೇಶ್ವರ ಸ್ವಾಮೀಜಿ, ಮೈಸೂರು ಮಹಾನಗರ ಪಾಲಿಕೆ ಆಡಳಿತ ವಿಭಾಗದ ಉಪ ಆಯುಕ್ತ ಜಿ.ಎಸ್.ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಸೇರಿದಂತೆ ಅಮರಶಿಲ್ಪಿ ಜಕಣಾಚಾರಿ ಜಯಂತ್ಯುತ್ಸವ ಸಮಿತಿ ಪದಾಧಿಕಾರಿಗಳು ಭಾಗವಹಿಸಿದ್ದರು.



ಕಲಾಮಂದಿರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಜಯಂತ್ಯುತ್ಸವ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಗಣ್ಯರು ಅಮರಶಿಲ್ಪಿ ಜಕಣಾಚಾರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮಾಂಗಲ್ಯ ಭಾಗ್ಯ ಉಚಿತ ಸಾಮೂಹಿಕ ವಿವಾಹಕ್ಕೆ ಅರ್ಜಿ

ಮೈಸೂರು.ಜ.1– ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಜ.31ರಂದು 'ಮಾಂಗಲ್ಯ ಭಾಗ್ಯ ಉಚಿತ ಸಾಮೂಹಿಕ ವಿವಾಹ' ಕಾರ್ಯಕ್ರಮವನ್ನು ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿ ಸನ್ನಿಧಿಯಲ್ಲಿ ಏರ್ಪಡಿಸಲಾಗಿದೆ. ಆಸಕ್ತ ಫಲಾನುಭವಿಗಳು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಕಚೇರಿಯ ಮುಜರಾಯಿ ಶಾಖೆ ಹಾಗೂ ಆಯಾ ತಾಲೂಕು ಕಚೇರಿಗಳಲ್ಲಿ ಹಾಗೂ ಪ್ರವರ್ಗ 'ಎ' ಮತ್ತು 'ಬಿ' ದೇವಸ್ಥಾನಗಳಲ್ಲಿ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆಯನ್ನು ಪಡೆದು ಜ.13ರೊಳಗೆ ಅರ್ಜಿಗಳನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಅಥವಾ ತಾಲೂಕು ಕಚೇರಿಗಳನ್ನು ಸಂಪರ್ಕಿಸಬಹುದು ಎಂದು ಅಪರ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಕ್ರೀಡಾ ಶಾಲೆಗೆ ಬಾಲಕ, ಬಾಲಕಿಯರ ಆಯ್ಕೆ ಪ್ರಕ್ರಿಯೆ

ಮೈಸೂರು,ಜ.1– 2024–25ನೇ ಸಾಲಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖಾ ವತಿಯಿಂದ ನಡೆಸುತ್ತಿರುವ ರಾಜ್ಯ ಕ್ರೀಡಾ ಶಾಲೆ, ಕ್ರೀಡಾ ನಿಲಯಗಳಿಗೆ ಕಿರಿಯರ, ಹಿರಿಯರ ವಿಭಾಗದಲ್ಲಿ ಬಾಲಕ, ಬಾಲಕಿಯರಿಗೆ ಮತ್ತು ಪ್ರಥಮ ಹಂತದ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುವುದು.

ಮೈಸೂರು ಜಿಲ್ಲಾ ಕ್ರೀಡಾಶಾಲೆ: ಮೈಸೂರು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿರುವ ಜಿಲ್ಲಾ ಕ್ರೀಡಾಶಾಲೆಯ 5ನೇ ತರಗತಿಗೆ ಆಯ್ಕೆ ಬಯಸುವ ಕ್ರೀಡಾಪಟುಗಳಿಗೆ 10 ವರ್ಷದೊಳಗಿನ ಮತ್ತು 2024–25ನೇ ಶೈಕ್ಷಣಿಕ ಸಾಲಿಗೆ 5ನೇ ತರಗತಿಗೆ ಪ್ರವೇಶ ಪಡೆಯಲು ಅರ್ಹತೆ ಪಡೆಯುವ ಬಾಲಕ, ಬಾಲಕಿಯರಿಗೆ ಅಥ್ಲೆಟಿಕ್ಸ್ ಮತ್ತು ಜಿಮ್ನಾಸ್ಟಿಕ್ಸ್ ಕ್ರೀಡೆಗಳಲ್ಲಿ ಪ್ರಥಮ ಹಂತದ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುವುದು.



ಕಿರಿಯರ ವಿಭಾಗ–ಯುವಕ, ಯುವತಿಯರಿಗೆ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖಾ ವತಿಯಿಂದ ರಾಜ್ಯ ಕ್ರೀಡಾಶಾಲೆ, ಕ್ರೀಡಾ ನಿಲಯಗಳಿಗೆ 14 ವರ್ಷ ದೊಳಗಿನ ಮತ್ತು 2024–25ನೇ ಶೈಕ್ಷಣಿಕ ಸಾಲಿಗೆ 8ನೇ ತರಗತಿಗೆ ಪ್ರವೇಶ ಪಡೆಯಲು ಅರ್ಹತೆ ಪಡೆಯುವ ಕಿರಿಯರ ವಿಭಾಗದ ಬಾಲಕ, ಬಾಲಕಿಯರಿಗೆ ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಸೈಕ್ಲಿಂಗ್, ಫುಟ್‌ಬಾಲ್, ಜಿಮ್ನಾಸ್ಟಿಕ್, ಹಾಕಿ, ಜೂಡೋ, ವಾಲಿಬಾಲ್, ಕುಸ್ತಿ, ಆರ್ಚರಿ ಮತ್ತು ಫೆನ್ಸಿಂಗ್ ಈ ಕ್ರೀಡೆಗಳಲ್ಲಿ ಪ್ರಥಮ ಹಂತದ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು.

ಹಿರಿಯರ ವಿಭಾಗ–ಯುವಕ, ಯುವತಿಯರಿಗೆ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ರಾಜ್ಯ ಕ್ರೀಡಾಶಾಲೆ, ಕ್ರೀಡಾನಿಲಯಗಳಿಗೆ 18 ವರ್ಷದೊಳಗಿನ ಮತ್ತು 2024–25ನೇ ಸಾಲಿನ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿಗೆ ಸೇರಲು ಅರ್ಹತೆ ಹೊಂದಿರುವ ಹಿರಿಯರ ವಿಭಾಗದ ಯುವಕ, ಯುವತಿಯರು ಕ್ರೀಡಾ ವಸತಿನಿಲಯಗಳಿಗೆ ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಸೈಕ್ಲಿಂಗ್, ಫುಟ್‌ಬಾಲ್, ಜಿಮ್ನಾಸ್ಟಿಕ್, ಹಾಕಿ, ಜೂಡೋ, ವಾಲಿಬಾಲ್, ಕುಸ್ತಿ, ಆರ್ಚರಿ ಮತ್ತು ಫೆನ್ಸಿಂಗ್ ಈ ಕ್ರೀಡೆಗಳಲ್ಲಿ ಪ್ರಥಮ ಹಂತದ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು.



ಮೈಸೂರು ಮಹಾನಗರ ಪಾಲಿಕೆ ನೌಕರರ ಸಹಕಾರ ಸಂಘದ 2024ರ ವರ್ಷದ ಕ್ಯಾಲೆಂಡರ್ ಅನ್ನು ಪಾಲಿಕೆ ಕಚೇರಿ ಆವರಣದಲ್ಲಿ ಬಿಡುಗಡೆಗೊಳಿಸಲಾಯಿತು. ಸಂಘದ ಅಧ್ಯಕ್ಷ ಜವರೇಗೌಡ, ಉಪಾಧ್ಯಕ್ಷ ಸಿ.ರವಿಶಂಕರ್, ಖಜಾಂಚಿ ಎನ್.ಪುಟ್ಟಸ್ವಾಮಿ ಹಾಗೂ ನಿರ್ದೇಶಕರು ಚಿತ್ರದಲ್ಲಿದ್ದಾರೆ.

ಕನ್ನಡ ಸಾಹಿತ್ಯಕ್ಕೆ ವಿಶ್ವ ಮಾನ್ಯತೆ ತಂದುಕೊಟ್ಟ ಕವಿ ಕುವೆಂಪು

ನಾಡಿನ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅಭಿಮತ



ಮೈಸೂರು,ಜ.1–ಕುವೆಂಪು ಅವರ ವೈಚಾರಿಕತೆ, ವೈಜ್ಞಾನಿಕ ಮನೋಭಾವ, ಜಾತ್ಯಾತೀತ ಪರಿಕಲ್ಪನೆಗಳು ರಾಜ್ಯದ ಪ್ರಗತಿಗೆ ಅಮೂಲ್ಯ ಕಾಣಿಕೆ ನೀಡಿವೆ. ತಮ್ಮ ಸಾಹಿತ್ಯದ ಮೂಲಕ ಕನ್ನಡ ನಾಡು–ನುಡಿ ಮತ್ತು ವ್ಯಕ್ತಿಯ ಬೌದ್ಧಿಕ ಬೆಳವಣಿಗೆಗೆ ದೊಡ್ಡ ಕಾಣಿಕೆ ನೀಡುವುದರ ಮೂಲಕ ಕನ್ನಡ ಸಾಹಿತ್ಯಕ್ಕೆ, ಕನ್ನಡಕ್ಕೆ ವಿಶ್ವ ಮಾನ್ಯತೆ ತಂದು ಕೊಟ್ಟ ಕವಿ ಕುವೆಂಪು ಎಂದು ಹಿರಿಯ ವಿದ್ವಾಂಸ ಡಾ.ಸಿಪಿ ಕೃಷ್ಣಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ನೇತೃತ್ವದಲ್ಲಿ ಆಯೋಜಿಸಿದ್ದ ಕುವೆಂಪುರವರ 119ನೇ ಜನ್ಮ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ವರ್ತಮಾನದ ಕನ್ನಡದ ಸಮಸ್ಯೆಗಳಿಗೆ ಕುವೆಂಪು ಸಾಹಿತ್ಯದಲ್ಲಿ ಪರಿಹಾರಗಳಿವೆ. ಕನ್ನಡ ನಾಡಿನಲ್ಲಿ ಕನ್ನಡಿಗರ ಬದುಕು ಹಸನಾಗಲಿಕ್ಕೆ ಅವರು ನೀಡಿರುವ ವಿಶ್ವಮಾನವ ಸಂದೇಶ ಮಹತ್ವದ ಮೈಲಿಗಲ್ಲಾಗಿದೆ. ಕುವೆಂಪುರವರದು ಮಕ್ಕಳ ಸಾಹಿತ್ಯದಿಂದ ಮಹಾಕಾವ್ಯದವರೆಗೆ ವಿಸ್ತರಿಸಿದ್ದು ಬಹುಮುಖ ನೆಲೆಗಳಲ್ಲಿ ನಿಂತಿವೆ. ಆ ಮೂಲಕ ಬಹು ಮುಖ್ಯ ಸಾಹಿತ್ಯದ ದಿಕ್ಸೂಚಿಯಾಗಿದೆ ಎಂದು ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಕಾವಲು ಪಡೆ ಅಧ್ಯಕ್ಷ ಮೋಹನ್‌ಕುಮಾರ್‌ಗೌಡ, ಸಂಸ್ಕೃತಿ ಪೋಷಕ ಡಾ.ರಘುರಾಂ ವಾಜಪೇಯಿ, ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ. ವೈ.ಡಿ.ರಾಜಣ್ಣ, ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ಸಂಸ್ಥಾಪಕ ಅಧ್ಯಕ್ಷ ಬೆಟ್ಟೇಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಇ.ಸಿ. ನಿಂಗರಾಜ್‌ಗೌಡ, ಮಹಾಸಭಾದ ಗೌರವ ಸಲಹೆಗಾರ ಡಾ.ಚಂದ್ರಶೇಖರ್, ಬಿ.ಸಿ. ಲಿಂಗರಾಜು, ಕೋಶಾಧ್ಯಕ್ಷ ಎಂ.ಎನ್ ಚಂದ್ರಶೇಖರ್, ಉಪಾಧ್ಯಕ್ಷೆ ಲಕ್ಷ್ಮಿ ದೇವಿ, ನಿರ್ದೇಶಕರಾದ ರವಿಕುಮಾರ್, ನಾಗೇಂದ್ರ ಜ್ಯೋತಿ, ಶಾರದಾ, ಚಂದ್ರಕಲಾ, ಶಶಿಕಲಾ, ಸಮಾಜ ಸೇವಕ ವಿಕ್ರಂ ಅಯ್ಯಂಗಾರ್, ಮೈಸೂರು ಕೋ ಆಪ–ರೇಟಿವ್ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಸಂಸದ ಪ್ರತಾಪ್ ಸಿಂಹರಿಗೆ ಕಾಂಗ್ರೆಸ್ ಎದಿರೇಟು

ಲೋಕಸಭಾ ಚುನಾವಣೆಯಲ್ಲಿ ಡಾ.ಯತೀಂದ್ರ ಸ್ಪರ್ಧಿಸಲ್ಲ

ಕೆಪಿಸಿಸಿ ವಕ್ತಾರ ಲಕ್ಷ್ಮಣ ಸ್ಪಷ್ಟನೆ

ಮೈಸೂರು,ಜ.1(ಬಿಎಲ್‌ಯು)– ವಿನಾಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಆಧಾರರಹಿತ ಆರೋಪ ಮಾಡುತ್ತಿರುವ ಸಂಸದ ಪ್ರತಾಪ್ ಸಿಂಹ ಸಣ್ಣಪುಟ್ಟ ವಿಚಾರಗಳನ್ನು ರಾಜಕೀಯಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆರೋಪಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯ ಮಂತ್ರಿ ಸಿದ್ದರಾಮಯ್ಯ ಟಾರ್ಗೆಟ್ ಮಾಡಲು ಪ್ರತಾಪ್ ಸಿಂಹರೇನು ರಾಷ್ಟ್ರೀಯ ನಾಯಕರು ಅಲ್ಲ, ಅಂತರ ರಾಷ್ಟ್ರೀಯ ನಾಯಕರೂ ಅಲ್ಲ ಎಂದು ತಿರುಗೇಟು ನೀಡಿದರು.

ಪ್ರತಾಪ್ ಸಿಂಹ ಸಹೋದರ ವಿಕ್ರಂ ಸಿಂಹ ಹಾಸನ ಜಿಲ್ಲೆ ಬೇಲೂರು ತಾಲೂಕಿನ ಜಯಮ್ಮ ಹಾಗೂ ಆಕೆಯ ತಮ್ಮ ಆನಂದ್ ಎಂಬುವರ 3.16 ಎಕರೆ ಜಮೀನನ್ನು ಶುಂಠಿ ಬೆಳೆಯಲು ಒಂದು ತಿಂಗಳ ಗುತ್ತಿಗೆ ಕರಾರು ಮಾಡಿಕೊಂಡಿದ್ದರು. ಒಂದು ತಿಂಗಳಲ್ಲಿ ಯಾರಾದರೂ ಶುಂಠಿ ಬೆಳೆಯಲು ಸಾಧ್ಯವೇ, ಸಕಲೇಶಪುರ ಶುಂಠಿ ಬೆಳೆಗೆ ಯೋಗ್ಯವಾದ ಸ್ಥಳವೇ ಎಂದು ಲಕ್ಷ್ಮಣ್ ಪ್ರಶ್ನಿಸಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ತಮ್ಮ ಪುತ್ರ ಡಾ.ಯತೀಂದ್ರ ಸ್ಪರ್ಧೆ ಮಾಡುವುದಿಲ್ಲ ಎಂದು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯರು ಸ್ಪಷ್ಟಪಡಿಸಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ತಮಗೆ ಆಸಕ್ತಿ ಇಲ್ಲ ಎಂದು ಡಾ.ಯತೀಂದ್ರ ಕೂಡ ತಿಳಿಸಿದ್ದಾರೆ. ಹಾಗಾಗಿ ಡಾ.ಯತೀಂದ್ರ ಈ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲ. ಕೆಪಿಸಿಸಿ ವಕ್ತಾರನಾಗಿ ನಾನು ಕಾಂಗ್ರೆಸ್ ಪಕ್ಷದ ಪರವಾಗಿ ಅಧಿಕೃತವಾಗಿ ಈ ಸ್ಪಷ್ಟನೆ ನೀಡುತ್ತಿದ್ದೇನೆ ಎಂದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಕಾಂಗ್ರೆಸ್ ಮುಖಂಡರಾದ ಪ್ರದೀಪ್‌ಕುಮಾರ್, ಮೈಸೂರು ಬಸವಣ್ಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.1.2024 ಮಂಗಳವಾರ, ಮಳೆ ನಕ್ಷತ್ರ: ಪೂಷಾ 29.12.2023ರಿಂದ 10.01.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.
- **ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ:** ವಿದ್ವಾನ್ ಎಂ.ಕೆ.ಶೆಲ್ವ ನಾರಾಯಣರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಸಂಜೆ 6.45ರಿಂದ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಕಲ್ಲಾಪುರ ಪವಮಾನಾಚಾರ್ಯರಿಂದ ಭಗವದ್ಗೀತೆ 14ನೇ ಅಧ್ಯಾಯದ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.
- **ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರಿ ಸಂಘ :** ಸೌಹಾರ್ದ ಸಹಕಾರಿ ದಿನಾಚರಣೆ, ದಿನಚರಿ, ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಉದ್ಘಾಟನೆ: ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ದಿನಚರಿ ಬಿಡುಗಡೆ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಕ್ಯಾಲೆಂಡರ್ ಬಿಡುಗಡೆ : ಮೈಸೂರು, ಕೊಡಗು, ಮಂಡ್ಯ ಒಕ್ಕೂಟದ ಅಧ್ಯಕ್ಷ ಎಸ್. ನಾರಾಯಣರಾವ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಂ.ಎಸ್.ರಾಜೇಂದ್ರಕುಮಾರ್, ಮುಖ್ಯ ಅತಿಥಿಗಳು: ಶಿವಕುಮಾರ್ ಬಿರಾದಾರ್, ಎಂ. ಸುಬ್ರಹ್ಮಣ್ಯ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಸಂಜೆ 4ಕ್ಕೆ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ.
- **ಮೈಸೂರು ವಿಶ್ವವಿದ್ಯಾನಿಲಯ, ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಕರ್ನಾಟಕ ಉಚ್ಚ ನ್ಯಾಯಾಲಯ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ ದಾಸ್ ಅವರಿಂದ ವಿದ್ಯಾರ್ಥಿಗಳತ್ತ ಸಂವಿಧಾನ ಕುರಿತು ಉಪನ್ಯಾಸ, ಅಧ್ಯಕ್ಷತೆ : ಯುವರಾಜ ಕಾಲೇಜು ಪ್ರಾಂಶುಪಾಲ ಪ್ರೊ. ಹೆಚ್.ಸಿ. ದೇವರಾಜೇಗೌಡ, ಸ್ಥಳ: ಯುವರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ– ಲೇಖನ ಮತ್ತು ಪ್ರಸ್ತುತಿ– ಟಿ.ಎಸ್. ಗೋಪಾಲ್, 6.40 ಪದಸಂಸ್ಕೃತಿ–ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 8.30 ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.45 ಕರೆಗೊಂದು ಗೀತೆ, 10.00 ಭಾರ್ಗವಿ ಕೆ. –ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಶ್ರೀ ರಕ್ಷಾ, ಆರ್.ಕೆ. ಶ್ರೀಕಂಠನ್, 1.20 ಭಾವಗೀತೆಗಳು, 3.00 ಬಿ.ವಿ. ರಾಮನ್ ಮತ್ತು ಬಿ.ವಿ. ಲಕ್ಷ್ಮಣ್–ಯುಗಳ ಗಾಯನ, 4.00 ಕಥಾ ಕಾಲಕ್ಷೇಪ– ಶಿವಲೀಲೆ ಸುಗುಣಮಣಿ, ಪ್ರಸ್ತುತಿ– ವಿದ್ವಾನ್ ಆರ್ ಗುರುರಾಜುಲು ನಾಯ್ಡು, 6.50 ಕೃಷಿರಂಗ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುವವರು ಕೃಷಿಕ ದಂಪತಿ ಹೆಚ್.ಎಸ್. ರವಿ ಹಾಗೂ ವಿ. ಶೀಲಾ, 9.30 ಡಾ. ಕೆ.ಜೆ. ಯೇಸುದಾಸ್–ಹಾಡುಗಾರಿಕೆ, 10.00 ಗಮಕ ವ್ಯಾಖ್ಯಾನ

ಹೊಸ ವರ್ಷದಂದೇ ಇತಿಹಾಸ ಬರೆದ ಇಸ್ರೋ
ಎಕ್ಸ್‌ಪೋಸ್ಯಾಟ್ ಉಡಾವಣೆ ಯಶಸ್ವಿ



ಶ್ರೀಹರಿಕೋಟಾ: ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಹೊಸ ವರ್ಷದ ಮೊದಲ ದಿನವೇ ಐತಿಹಾಸಿಕ ಉಡಾವಣೆ ಮಾಡಿದ್ದು, ಎಕ್ಸ್‌ಪೋಸ್ಯಾಟ್ ಉಪಗ್ರಹವನ್ನು ಹೊತ್ತ ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್‌ಸಿ58 ನೌಕೆ ಯಶಸ್ವಿಯಾಗಿ ನಭಕ್ಕೆ ಹಾರಿದೆ.

ಆಂಧ್ರಪ್ರದೇಶದ ಶ್ರೀಹರಿಕೋಟದಿಂದ ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್ ಮೂಲಕ ಉಪಗ್ರಹವನ್ನು ಉಡಾವಣೆ ಮಾಡಲಾಗಿದ್ದು, ಆ ಮೂಲಕ ಇಸ್ರೋ ಹೊಸ ವರ್ಷದ ದಿನವೇ ಇತಿಹಾಸ ಸೃಷ್ಟಿಸಿದೆ. ದೇಶದ ಮೊದಲ ಎಕ್ಸ್–ರೇ ಪೋಲರಿಮೀಟರ್ ಉಪಗ್ರಹ ಎಕ್ಸ್‌ಪೋಸ್ಯಾಟ್ ಅನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಗಿದ್ದು, ಇದರ ಜೊತೆಗೆ ಪಿಎಸ್‌ಎಲ್‌ವಿ ಇತರ ಹತ್ತು ಉಪಗ್ರಹಗಳನ್ನು ಹೊತ್ತೊಯ್ದಿದೆ. ಈ ಉಪಗ್ರಹಗಳನ್ನು ಸ್ಟಾರ್ಟ್‌ಅಪ್ಸ್, ಶೈಕ್ಷಣಿಕ ಸಂಸ್ಥೆಗಳು ಮತ್ತು ಇಸ್ರೋ ಕೇಂದ್ರಗಳು ನಿರ್ಮಾಣ ಮಾಡಿವೆ.

10 ಉಪಗ್ರಹಗಳ ಯಶಸ್ವಿ ಉಡಾವಣೆ: ಸ್ಟಾರ್ಟ್‌ಅಪ್ಸ್, ಶೈಕ್ಷಣಿಕ ಸಂಸ್ಥೆಗಳು ಮತ್ತು ಇಸ್ರೋ ಕೇಂದ್ರಗಳು ಅಭಿವೃದ್ಧಿಪಡಿಸಿರುವ ಇತರ 10 ಉಪಗ್ರಹಗಳನ್ನೂ ಈ ಪಿಎಸ್‌ಎಲ್ ಹೊತ್ತೊಯ್ದಿದೆ. ಟೇಕ್‌ಮೀ2 ಸ್ಪೇಸ್‌ನ ರೇಡಿಯೇಶನ್ ಶೀಲ್ಡಿಂಗ್ ಎಕ್ಸ್‌ಪೆರಿಮೆಂಟಲ್ ಮಾಡ್ಯೂಲ್, ಮಹಿಳೆಯರಿಗಾಗಿ ಎಲ್‌ಬಿಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ತಯಾರಿಸಲಾಗಿರುವ ವುಮೆನ್ ಇಂಜಿನಿಯರ್ಡ್ ಸ್ಯಾಟಲೈಟ್, ಕೆ.ಜೆ.ಸೋಮಯ್ಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅವರ ಬಿಲೀಫ್‌ಸಾ–ಟಿ0 ಹವ್ಯಾಸಿ ರೇಡಿಯೋ ಉಪಗ್ರಹ, ಇನ್‌ಸ್ಪೆಕ್ಟಿಟಿ ಸ್ಪೇಸ್ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್‌ನ ಗ್ರೀನ್ ಇಂಪಲ್ಸ್ ಟ್ರಾನ್ಸ್ಮಿಟರ್, ಧ್ರುವಾ ಸ್ಪೇಸ್ ಪ್ರೈವೇಟ್ ಲಿಮಿಟೆಡ್‌ನಿಂದ ಲಾಂಚಿಂಗ್ ಎಕ್ಸ್‌ಪೆಡಿಷನ್ಸ್ ಫಾರ್ ಅಸ್ಪಿರಿನ್ಗ್ ಟೆಕ್ನಾಲಜೀಸ್ –ಟೆಕ್ನಾಲಜಿ ಡೆಮೋನ್ಸ್ಟ್ರೇಟೋರ್, ಬೆಲಟ್ರಿಕ್ಸ್ ಏರೋಸ್ಪೇಸ್ ಪ್ರೈವೇಟ್ ಲಿಮಿಟೆಡ್‌ನಿಂದ ರುದ್ರ 0.3 ಮತ್ತು ಅರ್ಕಾ–200, ಪಿಆರ್‌ಎಲ್‌ನಿಂದ ಡಸ್ಟ್ ಎಕ್ಸ್‌ಪೆರಿಮೆಂಟ್, ವಿಎಸ್‌ಎಸ್‌ಸಿ ಮತ್ತು ಇಸ್ರೋದಿಂದ ಇಸ್ರೋ ಫ್ಯುಯೆಲ್ ಸೆಲ್ ಪವರ್ ಸಿಸ್ಟಮ್ ಹಾಗೂ ಹೈ ಎನರ್ಜಿ ಸೆಬ್ ಉಪಗ್ರಹಗಳನ್ನು ಪಿಎಸ್‌ಎಲ್‌ವಿ ಹೊತ್ತೊಯ್ದಿದೆ.

ಏನಿದು ಎಕ್ಸ್‌ಪೋಸ್ಯಾಟ್

ಎಕ್ಸ್‌ಪೋಸ್ಯಾಟ್ ಮಿಷನ್ ಅನ್ನು ತೀವ್ರವಾದ ಎಕ್ಸ್–ರೇ ಮೂಲಗಳ ಧ್ರುವೀಕರಣವನ್ನು ತನಿಖೆ ಮಾಡಲು ವಿನ್ಯಾಸಗೊಳಿಸಲಾಗಿದ್ದು, 2021ರಲ್ಲಿ ಬಿಡುಗಡೆಯಾದ ನಾಸಾದ ಇಮೇಜಿಂಗ್ ಎಕ್ಸ್–ರೇ ಪೋಲರಿಮೆಟ್ರಿ ಎಕ್ಸ್‌ಪ್ಲೋರರ್ ನಂತರ ಈ ಮಿಷನ್ ಭಾರತದ ಮೊದಲ ಮೀಸಲಾದ ಪೋಲರಿ ಮೀಟರ್ ಮಿಷನ್ ಮಾತ್ರವಲ್ಲದೆ ವಿಶ್ವದ ಎರಡನೆಯ ಉಪಗ್ರಹವಾಗಿದೆ.

ವಿಶೇಷತೆಗಳು

ಯುಆರ್ ರಾವ್ ಉಪಗ್ರಹ ಕೇಂದ್ರದ ಸಹಯೋಗದೊಂದಿಗೆ ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಆರ್‌ಆರ್‌ಐ) ಅಭಿವೃದ್ಧಿಪಡಿಸಿದ ಈ ಉಪಕರಣಗಳು ಆಕಾಶ ವಸ್ತುಗಳ ಭೌತಶಾಸ್ತ್ರದ ಬಗ್ಗೆ ಹೊಸ ಒಳನೋಟಗಳನ್ನು ನೀಡುವ ನಿರೀಕ್ಷೆಯಿದೆ. ಕ್ಷಕಿರಣಗಳ ಧ್ರುವೀಕರಣವನ್ನು ಅಳೆಯುವ ಮೂಲಕ, ವಿಜ್ಞಾನಿಗಳು ಈ ದೂರದ ಮೂಲಗಳ ರೇಖಾಗಣಿತ ಮತ್ತು ಹೊರಸೂಸುವಿಕೆಯ ಕಾರ್ಯವಿಧಾನಗಳ ಬಗ್ಗೆ ನಿರ್ಣಾಯಕ ಮಾಹಿತಿ ಊಹಿಸಬಹುದಾಗಿದೆ.

ಇದರ ಕ್ರಿಯೆ

ಪಲ್ಸಾರ, ಕಪ್ಪು ಕುಳಿ ಎಕ್ಸ್–ರೇ ಬೈನರಿಗಳು, ಸಕ್ರಿಯ ಗ್ಯಾಲಕ್ಸಿಯ ನ್ಯೂಕ್ಲಿಯಸ್‌ಗಳು, ನ್ಯೂಟ್ರಾನ್ ನಕ್ಷತ್ರಗಳು ಮತ್ತು ಉಷ್ಣವಲ್ಲದ ಸೂಪರ್ ನೋವಾ ಅವಶೇಷಗಳನ್ನು ಒಳಗೊಂಡಂತೆ ವಿಶ್ವದಲ್ಲಿ ತಿಳಿದಿರುವ 50 ಪ್ರಕಾಶಮಾನವಾದ ಮೂಲಗಳನ್ನು ಅಧ್ಯಯನ ಮಾಡುವ ಗುರಿಯನ್ನು ಎಕ್ಸ್‌ಪೋಸ್ಯಾಟ್ ಮಿಷನ್ ಹೊಂದಿದೆ. ಉಪಗ್ರಹವನ್ನು 500–700 ಕಿಮೀ ವೃತ್ತಾಕಾರದ ಕಡಿಮೆ ಭೂಮಿಯ ಕಕ್ಷೆಯಲ್ಲಿ ಇರಿಸಲಾಗುವುದು, ಕನಿಷ್ಠ 5 ವರ್ಷಗಳ ಮಿಷನ್ ಸಕ್ರಿಯವಾಗಿರಲಿದೆ. ಕಪ್ಪು ಕುಳಿಗಳ ಕುರಿತು ಇದು ಅಧ್ಯಯನ ಮಾಡಲಿದೆ.

ಆರ್‌ಬಿಐ ಅಧಿಕಾರಿ ಎಂದು ನಂಬಿಸಿ ಒಂದಕ್ಕೆ ಮೂರು ಪಟ್ಟು ಹಣ ನೀಡುವುದಾಗಿ ರೈತನಿಗೆ 5.25 ಲಕ್ಷ ವಂಚನೆ

ಮೈಸೂರು, ಜ. 1– ಆರ್‌ಬಿಐ ಅಧಿಕಾರಿ ಎಂದು ಪರಿಚಯಿಸಿಕೊಂಡು ತಮ್ಮ ಬಳಿ ಅಪಾರ ಪ್ರಮಾಣದ ಕಪ್ಪು ಹಣ ಇರುವುದಾಗಿಯೂ ಅದನ್ನು ಅಧಿಕೃತ ಮಾಡಿಕೊಳ್ಳಲು 1ಕ್ಕೆ 3 ಪಟ್ಟು ಹಣ ನೀಡುವುದಾಗಿ ಆಮಿಷವೊಡ್ಡಿ ಚಿಕ್ಕಬಳ್ಳಾಪುರ ಜಿಲ್ಲೆಯ ರೈತನಿಗೆ 5.25 ಲಕ್ಷ ರೂ. ವಂಚಿಸಲಾಗಿದೆ.

ವಿವರ: ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲೂಕು ಬೊಮ್ಮನಹಳ್ಳಿ ಗ್ರಾಮದ ರೈತ ಬಿ.ವಿ. ಸಂತೋಷ್‌ಕುಮಾರ್(36) ವಂಚನೆಗೊಳಗಾದವರಾಗಿದ್ದು, ಇವರಿಗೆ 8519884336 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿಯು ತನ್ನನ್ನು ಮೈಸೂರಿನ ಆರ್‌ಬಿಐ ಅಧಿಕಾರಿ ಸಾಗರ್ ಎಂಬುವರ ಕಾರು ಚಾಲಕ ಸತೀಶ್ ಅಲಿಯಾಸ್ ರಾಜಣ್ಣ ಎಂದು ಪರಿಚಯಿಸಿಕೊಂಡಿದ್ದಾನೆ. ಕೆಲವು ದಿನಗಳ ಕಾಲ ಅವರೊಂದಿಗೆ ಮೊಬೈಲ್ ಮೂಲಕ ಮಾತನಾಡಿ, ಸ್ನೇಹ ಬೆಳೆಸಿದ ಆತ, ಸಂತೋಷ್‌ಕುಮಾರ್ ನಡೆಸುತ್ತಿರುವ ಕೋಳಿ ಫಾರಂ ಅನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುವುದಾಗಿ ನಂಬಿಸಿದ್ದಾನೆ.

ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ನಡೆಸಿದ ದಾಳಿ ವೇಳೆ ಸಿಕ್ಕಿಬಿದ್ದ ಅಪಾರ ಪ್ರಮಾಣದ ಕಪ್ಪುಹಣ ಆರ್‌ಬಿಐ ಅಧಿಕಾರಿ ಸಾಗರ್ ಬಳಿ ಇರುವುದಾಗಿಯೂ, ಅವರು ಅದನ್ನು ಅಧಿಕೃತ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು, ಒಂದಕ್ಕೆ ಮೂರು ಪಟ್ಟು ಹಣ ನೀಡುವುದಾಗಿ ತಿಳಿಸಿದ್ದಾನೆ. ತಮ್ಮ ಬಳಿ ಅಪಾರ ಪ್ರಮಾಣದ ಹಣ ಇದೆ ಎಂದು ನಂಬಿಸಲು ಕಳೆದ ಸೆ. 27ರಂದು ಸಂತೋಷ್ ಕುಮಾರ್ ಅವರಿಗೆ 50 ಸೆಕೆಂಡ್ ವಿಡಿಯೋ ಮೂಲಕ ಕಂತೆ ಕಂತೆ ಹಣ ತೋರಿಸಲಾಗಿದೆ.

ಅದನ್ನು ಅವರು ನಂಬದಿದ್ದಾಗ ಆರ್‌ಬಿಐ ಅಧಿಕಾರಿ ಸಾಗರ್ ಹಾಗೂ ಅವರ ಚಾಲಕ ಸತೀಶ್ ಎಂದು ಪರಿಚಯಿಸಿಕೊಂಡಿದ್ದ ಇಬ್ಬರೂ ವ್ಯಕ್ತಿಗಳ ಜೊತೆ ಸೇರಿ ಸಂತೋಷ್‌ಕುಮಾರ್ ಅವರನ್ನು ಬೆಂಗಳೂರಿನ ಮೆಜೆಸ್ಟಿಕ್ ಬಳಿ ಇರುವ ಶ್ರೀ ವರ್ಧಮಾನ್ ಪ್ಯಾಲೇಸ್ ಎಂಬ ಲಾಡ್ಜ್‌ಗೆ ಅ.2ರಂದು ಕರೆಸಿಕೊಂಡು ಮಾತುಕತೆ ನಡೆಸಿದ್ದಾರೆ. ತಮ್ಮ ಬಳಿ ಇರುವುದು ಕಪ್ಪು ಹಣವೇ ಹೊರತು ನಕಲಿ ಹಣ ಅಲ್ಲ. ನಮಗೆ ನೀವು ಎಷ್ಟು ಹಣ ಕೊಡುತ್ತೀರೋ ಅದರ ಮೂರು ಪಟ್ಟು ಹಣವನ್ನು ನಾವೇ ನಿಮ್ಮ ಬ್ಯಾಂಕ್ ಖಾತೆಗೆ ಜಮೆ ಮಾಡುತ್ತೇವೆ ಎಂದು ನಂಬಿಸಿದ್ದಾರೆ.

ಅವರ ಮಾತುಗಳನ್ನು ನಂಬಿದ ಸಂತೋಷ್‌ಕುಮಾರ್ ಅವರು ಅ.16ರಂದು ಮೈಸೂರಿನ ಸಂಗಂ ಟಾಕೀಸ್ ಸಮೀಪ ವಿರುವ ಶ್ರೇಯಸ್ ಡಿಲಕ್ಸ್ ಲಾಡ್ಜ್‌ನ ಕೊಠಡಿಯಲ್ಲಿ ಈ ಮೂವರಿಗೆ 5.25 ಲಕ್ಷ ರೂ.ಗಳನ್ನು ನೀಡಿದ್ದಾರೆ. 3 ಪಟ್ಟು ಹಣವನ್ನು ತರುವುದಾಗಿ ತಿಳಿಸಿ 5.25 ಲಕ್ಷ ಪಡೆದು ಹೋದ ವ್ಯಕ್ತಿಗಳು ಮತ್ತೆ ರೂಂಗೆ ಬರಲಿಲ್ಲ. ಅವರ ಮೊಬೈಲ್‌ಗೆ ಕರೆ ಮಾಡಿದಾಗ ದಸರಾ ಟ್ರಾಫಿಕ್ ಹೆಚ್ಚಾಗಿರುವುದರಿಂದ ಕೆಲ ಸಮಯದ ನಂತರ ಹಣ ತಂದು ಕೊಡುವುದಾಗಿ ತಿಳಿಸಿದ್ದಾರೆ. ಬಳಿಕ ಸತೀಶ್‌ನ ಮೊಬೈಲ್ ಸ್ವಿಚ್ ಆಫ್ ಆಗಿದೆ. ಕೆಲ ಸಮಯದ ನಂತರ ಬೇರೆ ನಂಬರ್‌ನಿಂದ ಕರೆ ಮಾಡಿದ ಸತೀಶ್ ಆದಷ್ಟು ಬೇಗ 3 ಪಟ್ಟು ಹಣ ತಂದು ಕೊಡುವುದಾಗಿ ತಿಳಿಸಿದ್ದಾನೆ. ಇವರ ವರ್ತನೆಯಿಂದ ಅನುಮಾನಗೊಂಡ ಸತೀಶ್‌ಕುಮಾರ್, ತಮಗೆ 3 ಪಟ್ಟು ಹಣ ಬೇಡ, ನಾನು ಕೊಟ್ಟ ಹಣ ವಾಪಸ್ ಕೊಡಿಯೆಂದು ಕೇಳಲಾಗಿ ಅ. 29ರಂದು ರಾತ್ರಿ 8 ಗಂಟೆ ನಂತರ ಆತನ ಮೊಬೈಲ್ ಸ್ವಿಚ್‌ಆಫ್ ಆಗಿದೆ.

ಈ ಸಂಬಂಧ ಸಂತೋಷ್‌ಕುಮಾರ್ ಅವರು ನವೆಂಬರ್ 4ರಂದು ಚಿಂತಾಮಣಿ ಗ್ರಾಮಾಂತರ ಠಾಣೆಗೆ ದೂರು ಸಲ್ಲಿಸಿದ್ದರು. ಘಟನೆ ನಡೆದಿರುವುದು ಮೈಸೂರು ಆಗಿರುವುದರಿಂದ ಈ ಪ್ರಕರಣವನ್ನು ಚಿಂತಾಮಣಿ ಪೊಲೀಸರು ಲಷ್ಕರ್ ಠಾಣೆ ವರ್ಗಾಯಿಸಿದ್ದು, ಡಿ.29ರಂದು ಪ್ರಕರಣ ದಾಖಲಿಸಿಕೊಂಡಿರುವ ಇಲ್ಲಿನ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.



ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಕುಲಪತಿ ಪ್ರೊ.ಲೋಕನಾಥ್, ಸಿಂಡಿಕೇಟ್ ಸದಸ್ಯರಾದ ಗೋಕುಲ್ ಗೋವರ್ಧನ್ ಬಿಡುಗಡೆ ಮಾಡಿದರು. ಈ ವೇಳೆ ಮಹಾರಾಜ ಕಾಲೇಜಿನ ಪ್ರಾಧ್ಯಾಪಕ ಕುಮಾರ್ ಉಪಸ್ಥಿತರಿದ್ದರು.

ಕೆನಡಾ ಮೂಲದ ಗ್ಯಾಂಗ್‌ಸ್ಟರ್ ಗೋಲ್ಡಿ ಬ್ರಾರ್ ಭಯೋತ್ಪಾದಕ ಎಂದು ಘೋಷಿಸಿದ ಸರ್ಕಾರ

ನವದೆಹಲಿ,ಜ.1–ಭಾರತದಲ್ಲಿ ಹತ್ಯೆಗಳನ್ನು ನಡೆಸಲು ಗಡಿಯಾಚೆಯಿಂದ ಡ್ರೋನ್‌ಗಳ ಮೂಲಕ ಉನ್ನತ ದರ್ಜೆಯ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಮತ್ತು ಸ್ಫೋಟಕಗಳ ಕಳ್ಳಸಾಗಣೆಯಲ್ಲಿ ತೊಡಗಿಸಿಕೊಂಡಿರುವ ಕೆನಡಾ ಮೂಲದ ದರೋಡೆಕೋರ ಗೋಲ್ಡಿ ಬ್ರಾರ್ ಭಯೋತ್ಪಾದಕ ಎಂದು ಕೇಂದ್ರ ಸರ್ಕಾರ ಸೋಮವಾರ ಘೋಷಿಸಿದೆ. ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯಿದೆ(UAPA) ಅಡಿಯಲ್ಲಿ ಸತ್ವಿಂದರ್ ಸಿಂಗ್ ಅಲಿಯಾಸ್ ಸತೀಂದರ್ಜಿತ್ ಸಿಂಗ್ ಅಲಿಯಾಸ್ ಗೋಲ್ಡಿ ಬ್ರಾರ್ ಭಯೋತ್ಪಾದಕ ಎಂದು ಕೇಂದ್ರ ಗೃಹ ಸಚಿವಾಲಯ ಅಧಿಸೂಚನೆಯಲ್ಲಿ ತಿಳಿಸಿದೆ.

ಜಪಾನಲ್ಲಿ ಭೂಕಂಪ, ಸುನಾಮಿ: ಮಾಹಿತಿಗೆ ನಿಯಂತ್ರಣ ಕೊಠಡಿ ಸ್ಥಾಪಿಸಿದ ಭಾರತ

ನವದೆಹಲಿ: ಪ್ರಬಲ ಭೂಕಂಪಗಳ ಸರಣಿಯಿಂದ ತತ್ತರಿಸಿರುವ ಜಪಾನ್ ಸೋಮವಾರ ಸುನಾಮಿ ಎಚ್ಚರಿಕೆ ನೀಡಿದೆ. ರಿಕ್ಟರ್ ಮಾಪಕದಲ್ಲಿ 7.6ರ ತೀವ್ರತೆಯ ಭೂಕಂಪ ಸಂಭವಿಸಿದೆ ಎಂದು ಹೇಳಲಾಗಿದೆ. ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಟೋಕಿಯೊದಲ್ಲಿನ ಭಾರತೀಯ ರಾಯಭಾರ ಕಚೇರಿಯು ಭೂಕಂಪ ಮತ್ತು ಸುನಾಮಿಯ ಅಪಾಯದ ಬಗ್ಗೆ ಮಾಹಿತಿ ನೀಡಲು ತುರ್ತು ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದೆ.



ಜಪಾನ್‌ನಲ್ಲಿ 46,260ಕ್ಕೂ ಹೆಚ್ಚು ಭಾರತೀಯರು ವಾಸಿಸುತ್ತಿದ್ದಾರೆ ಎಂದು ಹೇಳಲಾಗಿದೆ. ಸ್ವದೇಶಕ್ಕೆ ಮರಳಲು ಬಯಸುವ ಭಾರತದ ಕುಟುಂಬಗಳು ಅಥವಾ ಜಪಾನ್‌ನಲ್ಲಿ ಸಹಾಯವನ್ನು ಬಯಸುವವರು ಸಹ ನಿಯಂತ್ರಣ ಕೊಠಡಿಯನ್ನು ಸಂಪರ್ಕಿಸಬಹುದು. ಸ್ಥಳಾಂತರ ಆದೇಶಗಳನ್ನು ನಿಕಟವಾಗಿ ಅನುಸರಿಸುವಂತೆ ಜಪಾನ್‌ನ ಪ್ರಧಾನಿ ಫ್ಯೂಮಿಯೊ ಕಿಶಿಡಾ ಜನರನ್ನು ಕೇಳಿಕೊಂಡಿದ್ದಾರೆ. ಭೂಕಂಪವು ಸಮುದ್ರದಲ್ಲಿ ಉಬ್ಬರವಿಳಿತಕ್ಕೆ ಕಾರಣವಾಗಿದ್ದು, ಕೆಲವು ಜಪಾನ್‌ನ ಸಮುದ್ರದುದ್ದಕ್ಕೂ ಸುಮಾರು 1 ಮೀಟರ್ ಎತ್ತರದಲ್ಲಿವೆ ಎಂದು ವರದಿಗಳು ತಿಳಿಸಿವೆ. ಈ ಅಲೆಗಳು 3 ಮೀಟರ್ ಎತ್ತರದವರೆಗೆ (10 ಅಡಿಗಿಂತ ಸ್ವಲ್ಪ ಕಡಿಮೆ) ಏರಬಹುದು ಎಂದು ಸುನಾಮಿ ಎಚ್ಚರಿಕೆಯಲ್ಲಿ ಹೇಳಲಾಗಿದೆ. ಜಪಾನ್‌ನ ಹವಾಮಾನ ಏಜೆನ್ಸಿ ಇಶಿಕಾವಾ, ನಿಗಾಟಾ ಮತ್ತು ಟೊಯಾಮಾ ಸುತ್ತಮುತ್ತ ಸುನಾಮಿ ಎಚ್ಚರಿಕೆ ನೀಡಿದೆ. ಈಶಾನ್ಯ ಜಪಾನ್‌ನ ಕೆಲವು ಭಾಗಗಳಲ್ಲಿ ಮಾರ್ಚ್ 2011ರ ಭೂಕಂಪ ಮತ್ತು ಸುನಾಮಿ ನಂತರ ಕಂಡು ಬಂದ ಮೊದಲ ಎಚ್ಚರಿಕೆಯಾಗಿದೆ. ಭೂಕಂಪದ ಪರಿಣಾಮ ಪ್ರದೇಶಗಳಲ್ಲಿ ಕೆಲವು ಮನೆಗಳಿಗೆ ಹಾನಿಯಾಗಿದೆ.

ಮೈಸೂರು ಜಿಲ್ಲಾ, ನಗರ ಬಿಜೆಪಿ ಘಟಕದ ಅಧ್ಯಕ್ಷ ಸ್ಥಾನಕ್ಕೆ ತೀವ್ರ ಪೈಪೋಟಿ

ಮೈಸೂರು, ಜ.1(ಎಸ್‌ಬಿಡಿ)– ಮೈಸೂರು ಜಿಲ್ಲೆ ಬಿಜೆಪಿ ಪಾಳಯದಲ್ಲಿ ನಗರ ಮತ್ತು ಗ್ರಾಮಾಂತರ ಅಧ್ಯಕ್ಷ ಸ್ಥಾನಕ್ಕೆ ಭಾರಿ ಪೈಪೋಟಿ ಏರ್ಪಟ್ಟಿದೆ.

ಬಿಜೆಪಿ ಹಾಲಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ(ಹಾಲಿ ಶಾಸಕ) ಹಾಗೂ ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಅಧಿಕಾರಾವಧಿ ಮುಕ್ತಾಯವಾಗುತ್ತಿರುವ ಹಿನ್ನೆಲೆಯಲ್ಲಿ ನಿಯೋಜಿತ ವೀಕ್ಷಕರು ಆಕಾಂಕ್ಷಿಗಳ ಪಟ್ಟಿ ಮಾಡಿದ್ದು, ನಗರಾಧ್ಯಕ್ಷ ಸ್ಥಾನಕ್ಕೆ ಸುಮಾರು 15 ಮಂದಿ ಹಾಗೂ ಗ್ರಾಮಾಂತರ ಅಧ್ಯಕ್ಷ ಸ್ಥಾನಕ್ಕೆ ಬರೋಬ್ಬರಿ 25 ಮುಖಂಡರು ಆಕಾಂಕ್ಷಿಗಳಾಗಿದ್ದಾರೆ. ಅಲ್ಲದೆ ಹಾಲಿ ಹಾಗೂ ಮಾಜಿ ಶಾಸಕರ ಹೆಸರನ್ನೂ ಶಿಫಾರಸ್ಸು ಮಾಡಲಾಗಿದೆ.

ಮೈಸೂರು ಗ್ರಾಮಾಂತರ ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳ ಅಭಿಪ್ರಾಯ ಸಂಗ್ರಹಿಸಲು ವೀಕ್ಷಕರಾಗಿ ನಿಯೋಜನೆಗೊಂಡಿರುವ ಬಿಜೆಪಿ ರಾಜ್ಯ ಉಪಾಧ್ಯಕ್ಷ ತಮ್ಮೇಶ್ ಗೌಡ ಹಾಗೂ ನಗರಾಧ್ಯಕ್ಷ ಸ್ಥಾನದ ಆಕಾಂಕ್ಷಿಗಳ ಅಭಿಪ್ರಾಯ ಸಂಗ್ರಹಕ್ಕೆ ನಿಯೋಜನೆಗೊಂಡಿರುವ ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಮೂರು ದಿನಗಳ ಹಿಂದೆ ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಪ್ರತ್ಯೇಕ ಸಭೆ ನಡೆಸಿ, ಮಂಡಲ ಅಧ್ಯಕ್ಷರು ಹಾಗೂ ಅದಕ್ಕೂ ಮೇಲ್ಪಟ್ಟ ಪದಾಧಿಕಾರಿಗಳು ಮತ್ತು ಕೋರ್ ಕಮಿಟಿ ಅಭಿಪ್ರಾಯ ಸಂಗ್ರಹಿಸಿದ್ದಾರೆ.

ಆಕಾಂಕ್ಷಿಗಳು ನಿಗದಿತ ನಮೂನೆಯಲ್ಲಿ ವಿವರ ನಮೂದಿಸಿ ವೀಕ್ಷಕರಿಗೆ ಸಲ್ಲಿಸುವ ಮೂಲಕ ಅವಕಾಶ ಕೋರಿದ್ದಾರೆ. ಅರ್ಜಿ ಸಲ್ಲಿಸದ ಕೆಲವರನ್ನು ಶಿಫಾರಸ್ಸಿನ ಆಧಾರದಲ್ಲೂ ಪರಿಗಣಿಸಿ, ಪಟ್ಟಿ ಸಿದ್ಧಪಡಿಸಿದ್ದಾರೆ. ಆಕಾಂಕ್ಷಿಗಳ ಪಟ್ಟಿಯನ್ನು ಬಿಜೆಪಿ ರಾಜ್ಯ ಘಟಕಕ್ಕೆ ಸಲ್ಲಿಸಿದ ನಂತರ ಅಂತಿಮವಾಗಿ ನಗರ ಹಾಗೂ ಗ್ರಾಮಾಂತರ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಲಾಗುತ್ತದೆ.


ನಗರಾಧ್ಯಕ್ಷ ಆಕಾಂಕ್ಷಿಗಳು: ಕೃಷ್ಣರಾಜ ಕ್ಷೇತ್ರದ ಶಾಸಕರಾಗಿ ಆಯ್ಕೆಯಾದ ನಂತರವೂ ನಗರಾಧ್ಯಕ್ಷ ಜವಾಬ್ದಾರಿಯನ್ನೂ ಸಮರ್ಥವಾಗಿ ನಿಭಾಯಿಸುತ್ತಿರುವ ಟಿ.ಎಸ್.ಶ್ರೀವತ್ಸ ಅವರನ್ನೇ ಮತ್ತೊಂದು ಅವಧಿಗೆ ಮುಂದುವರೆಸಬೇಕೆಂದು ವೀಕ್ಷಕರ ಮುಂದೆ ಹಲವರು ಒತ್ತಾಯಿಸಿದ್ದಾರೆ. ಚಾಮರಾಜ ಕ್ಷೇತ್ರದ ಮಾಜಿ ಶಾಸಕ ಎಲ್.ನಾಗೇಂದ್ರ ಅವರನ್ನು ನೇಮಕ ಮಾಡಬೇಕೆಂಬ ಆಗ್ರಹ ಕೇಳಿಬಂದಿದೆ. ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್, ಮಾಜಿ ಕಾರ್ಪೊರೇಟರ್‌ಗಳಾದ ಬಿ.ವಿ.ಮಂಜುನಾಥ್, ಸತೀಶ್, ನಗರ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಮುಖಂಡರಾದ ಸರ್ವಮಂಗಳಾ, ಮೂರ್ತಿ, ಕೇಬಲ್ ಮಹೇಶ, ಗಿರಿಧರ್ ಸೇರಿದಂತೆ 15 ಮಂದಿ ಆಕಾಂಕ್ಷಿಗಳಾಗಿದ್ದಾರೆ. ಚಾಮುಂಡೇಶ್ವರಿ ಮಂಡಲ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್ ಹೆಸರನ್ನೂ ಸೂಚಿಸಲಾಗಿದೆ.

ಗ್ರಾಮಾಂತರಕ್ಕೆ ದೊಡ್ಡ ಪಟ್ಟಿ: ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಅವರನ್ನೇ ಮುಂದುವರೆಸಬೇಕೆಂದು ಮನವಿ ಮಾಡಲಾಗಿದೆ. ಅಲ್ಲದೆ ನಂಜನಗೂಡು ಮಾಜಿ ಶಾಸಕ ಹರ್ಷವರ್ಧನ್ ಅವರನ್ನು ಗ್ರಾಮಾಂತರ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕೆಂಬ ಒತ್ತಾಯ ಗಟ್ಟಿಯಾಗಿ ಕೇಳಿಬಂದಿದೆ. ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ದೇವನೂರು ಪ್ರತಾಪ್, ಯೋಗಾನಂದ ಕುಮಾರ್, ಮುಖಂಡ ಸುಬ್ಬಣ್ಣ, ಹೆಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ಗುರುಸ್ವಾಮಿ, ಹುಣಸೂರಿನ ನಾಗಣ್ಣಗೌಡ, ಪಿರಿಯಾಪಟ್ಟಣ ಅಧ್ಯಕ್ಷ ರಾಜೇಗೌಡ, ನಂಜನಗೂಡಿನ ಕೃಷ್ಣಪ್ಪಗೌಡರು, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ರಮೇಶ್ ಕುಮಾರ್ ಸೇರಿದಂತೆ 25 ಮಂದಿ ಆಕಾಂಕ್ಷಿಗಳಿದ್ದಾರೆ. ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್, ಶಾಸಕ ಶ್ರೀವತ್ಸ, ಎರಡೂ ಘಟಕಗಳ ಪ್ರಧಾನ ಕಾರ್ಯದರ್ಶಿಗಳೂ ಸಭೆಯಲ್ಲಿ ಪಾಲ್ಗೊಂಡು ವೀಕ್ಷಕರಿಗೆ ಅಭಿಪ್ರಾಯ ತಿಳಿಸಿದ್ದಾರೆ.

ವೀಕ್ಷಕರಿಂದ ಆಕಾಂಕ್ಷಿಗಳ ಅಭಿಪ್ರಾಯ ಸಂಗ್ರಹ



ವಿಜಯೇಂದ್ರ ರಾಜ್ಯಾಧ್ಯಕ್ಷ ಆಗಿರುವುದು ಪ್ರಮುಖ ಕಾರಣ



ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷರಾಗಿರುವುದರಿಂದ ನಗರ ಹಾಗೂ ಗ್ರಾಮಾಂತರ ಅಧ್ಯಕ್ಷಗಾದಿಗೆ ಭಾರಿ ಪೈಪೋಟಿ ಸೃಷ್ಟಿಯಾಗಿದೆ. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ವಿಜಯೇಂದ್ರ ಅವರೊಂದಿಗೆ ಪಕ್ಷ ಸಂಘಟನೆಯಲ್ಲಿ ಸಕ್ರಿಯರಾಗಲು ಎಲ್ಲರೂ ಉತ್ಸುಕರಾಗಿದ್ದಾರೆ ಎಂಬುದು ಹಲವರ ಅಭಿಪ್ರಾಯ. 2016ರಲ್ಲಿ ಬಿ.ಎಸ್.ಯಡಿಯೂರಪ್ಪನವರು ರಾಜ್ಯಾಧ್ಯಕ್ಷರಾಗಿದ್ದಾಗಲೂ ಮೈಸೂರಿನಲ್ಲಿ ಇದೇ ರೀತಿ ಪೈಪೋಟಿ ಏರ್ಪಟ್ಟಿತ್ತು ಎಂದು ತಿಳಿಸಿದ್ದಾರೆ.

ಪ್ರಸಿದ್ಧ ಪಂಡಿತ್ ರೋಣು ಮಜುಂದಾರರಿಂದ ಜೆಎಸ್‌ಎಸ್ ಸಂಗೀತ ಸಭಾದಡಿ ಬಾನ್ಸುರಿ ವಾದನ

ಮೈಸೂರು, ಜ.1(ಎಸ್‌ಬಿಡಿ)– ಖ್ಯಾತ ಸಂಗೀತ ಪಿಟೀಲು ವಿದ್ವಾಂಸ ಎಸ್.ಮಹದೇವಪ್ಪ ಅವರ ಸ್ಮರಣಾರ್ಥ ಆಯೋಜಿಸಿದ್ದ ಧನ್ಯಾಸಿ ಸಂಗೀತ ಕಾರ್ಯಕ್ರಮದ ಅಂಗವಾಗಿ ಸುಪ್ರಸಿದ್ಧ ಬಾನ್ಸುರಿ ವಾದಕರಾದ ಪಂಡಿತ್ ರೋಣು ಮಜುಂದಾರ್ ಅವರು ಬಾನ್ಸುರಿ ವಾದನ ಕಛೇರಿ ನಡೆಸಿಕೊಟ್ಟರು.

ಜೆಎಸ್‌ಎಸ್ ಸಂಗೀತ ಸಭಾ ವತಿಯಿಂದ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಸೋಮವಾರ ಸಂಜೆ ನೆರೆದಿದ್ದ ಸಂಗೀತ ಪ್ರಿಯರಿಗೆ ರೋಣು ಮಜುಂದಾರ್ ಬಾನ್ಸುರಿ ವಾದನ ಮುದ ನೀಡಿತು. ಸಂಗೀತ ಲೋಕದಲ್ಲಿ ವಿಹರಿಸಿ, ನಿನಾದವನ್ನು ಆಸ್ವಾದಿಸಿದರು.



ಪಂಡಿತ್ ರೋಣು ಮಜುಂದಾರ್ ಅವರ ಬಾನ್ಸುರಿ ವಾದನ.

ಸುಪ್ರಸಿದ್ಧ ಬಾನ್ಸುರಿ ವಾದಕರಾದ ಪಂಡಿತ್ ರೋಣು ಮಜುಂದಾರ್ ಅವರು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಿಂದೂಸ್ಥಾನಿ ಕೊಳಲು ಸಂಗೀತ ಕಛೇರಿಗಳನ್ನು ನೀಡಿ, ಮನ್ನಣೆ ಗಳಿಸಿದ್ದಾರೆ. ಇವರ ಸಂಗೀತ ಸೇವೆಗೆ ಹಲವಾರು ಪ್ರಶಸ್ತಿ, ಪುರಸ್ಕಾರಗಳು ದೊರೆತಿದೆ.

ವಯೋಲಿನ್ ವಾದನ ತಂತ್ರಗಳ ಮೇಲೆ ವಿಶೇಷ ಅಧ್ಯಯನ ನಡೆಸಿದ್ದ ನಾಡಿನ ಶ್ರೇಷ್ಠ ಪಿಟೀಲು ವಿದ್ವಾನ್ ಎಸ್.ಮಹಾದೇವಪ್ಪನವರ ಸಂಸ್ಮರಣಾರ್ಥ ಪ್ರತಿ ವರ್ಷ ಜ.1ರಂದು ಸಂಗೀತ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಇವರ ಪುತ್ರರಾದ ಮೈಸೂರು ನಾಗರಾಜ್ ಹಾಗೂ ಡಾ.ಮೈಸೂರು ಮಂಜುನಾಥ್ ಕೂಡ ಅಂತಾರಾಷ್ಟ್ರೀಯ ಖ್ಯಾತಿಯ ವಯೋಲಿನ್ ವಾದಕರು. ಈ ಸಹೋದರರು ಸಂಗೀತದ ಮೂಲಕವೇ ತಮ್ಮ ಗುರುಗಳೂ ಆದ ತಂದೆಯವರ ಸ್ಮರಿಸುತ್ತಿದ್ದಾರೆ.



2024ರ ಹೊಸ ವರ್ಷದ ದಿನವಾದ ಸೋಮವಾರದಂದು ಮೈಸೂರಿನ ಫೋರಂ ಮಾಲ್‌ನಲ್ಲಿ ಡಾ.ರಾಜ್‌ಕುಮಾರ್ ಅಭಿಮಾನಿಗಳು ಹೊರ ತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಬಿಡುಗಡೆ ಮಾಡಿದರು. ಈ ವೇಳೆ ಸಂಘದ ಸೋಮಣ್ಣ, ಗೋಬಿ ರವಿ, ದುರ್ಗೆ ಇನ್ನಿತರರಿದ್ದರು.



ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ದೇವರಾಜ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಅಖಿಲ ಕರ್ನಾಟಕ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಹಿತರಕ್ಷಣಾ ಸಂಘ ಮತ್ತು ಮೈಸೂರು ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಒಕ್ಕೂಟದ ವತಿಯಿಂದ ಹೊರತಂದಿರುವ ನೂತನ ವರ್ಷದ ದಿನದರ್ಶಿಕೆಯನ್ನು ಸಾಹಿತಿ ಬನ್ನೂರು ಕೆ.ರಾಜು ಬಿಡುಗಡೆ ಮಾಡಿದರು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಮರಿಸ್ವಾಮಿ, ಪ್ರಾಂಶುಪಾಲರಾದ ಡಾ.ಎಂ.ಜಿ.ರಮಾನಂದ, ಎನ್.ವಿಜೇಂದ್ರ ಕುಮಾರ್, ಪಿ.ಎಸ್.ಜಾನ್, ಟಿ.ಎಸ್.ಸುದೀಪ್, ಬಾಲಸುಬ್ರಮಣ್ಯ, ನಾಗೇಗೌಡ, ಜನಾರ್ಧನ, ಉಪನ್ಯಾಸಕರ ಹಿತರಕ್ಷಣಾ ಸಂಘದ ಜಿಲ್ಲಾಧ್ಯಕ್ಷ ಕೋಟೆ ಜೆ.ವೆಂಕಟೇಶ್, ಗೌರವಾಧ್ಯಕ್ಷ ಫಣಿರಾಜ್, ಕಾರ್ಯಾಧ್ಯಕ್ಷ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಗ್ರಂಥಾಲಯದ ದುರಸ್ತಿ; ಪುಸ್ತಕ ಎರವಲು ಸೌಲಭ್ಯ

ಮೈಸೂರು,ಜ.1–ಮೈಸೂರು ಮಹಾನಗರಪಾಲಿಕೆ ವತಿಯಿಂದ ಕುವೆಂಪು ಜ್ಞಾನ ತಾಣ ಸೇವಾ ಕೇಂದ್ರ ಗ್ರಂಥಾಲಯದ ಕಟ್ಟಡದ ದುರಸ್ತಿ ಕಾಮಗಾರಿಯನ್ನು ಕೈಗೊಂಡಿರುವುದರಿಂದ, ಇದು ಪೂರ್ಣಗೊಳ್ಳುವವರೆಗೂ ಗ್ರಂಥಾಲಯದಲ್ಲಿ ಸದಸ್ಯತ್ವ ಹೊಂದಿರುವ ಸಾರ್ವಜನಿಕ ಓದುಗರು ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯನ್ನು ಹಾಗೂ ತಮ್ಮ ಸದಸ್ಯತ್ವ ಕಾರ್ಡ್ ಸಲ್ಲಿಸಿ ಪುಸ್ತಕ ಎರವಲು ಪಡೆಯುವ ಅವಕಾಶವನ್ನು ಕುವೆಂಪುನಗರ ಶಾಖಾ ಗ್ರಂಥಾಲಯದಲ್ಲಿ ಕಲ್ಪಿಸಲಾಗಿದೆ. ಹಾಗಾಗಿ ಕೇಂದ್ರ ಗ್ರಂಥಾಲಯ ಸದಸ್ಯರು ಈ ಸೇವೆಯನ್ನು ಪಡೆಯಬೇಕೆಂದು ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕ ಬಿ.ಮಂಜುನಾಥ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಗೆ ನೋಂದಣಿ

ಮೈಸೂರು: ದಿನಪತ್ರಿಕೆ ವಿತರಿಸುವ ಕಾರ್ಮಿಕರುಗಳಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ದೃಷ್ಟಿಯಿಂದ, ಎರಡು ಲಕ್ಷ ರೂಗಳ ಅಪಘಾತ ಪರಿಹಾರ ಸೌಲಭ್ಯ ಹಾಗೂ ಒಂದು ಲಕ್ಷ ರೂ.ಗಳವರೆಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸುವ ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆಯನ್ನು ಸರ್ಕಾರವು ಜಾರಿಗೊಳಿಸಿದ್ದು, ಈ ಯೋಜನೆಯ ಸದುಪಯೋಗ ಪಡೆಯಲು ದಿನಪತ್ರಿಕೆ ವಿತರಿಸುವ ಕಾರ್ಮಿಕರು ಇ–ಶ್ರಮ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಾರ್ಮಿಕ ಸಹಾಯವಾಣಿ 155214 (24x7) ಹಾಗೂ ಕಾರ್ಮಿಕ ಇಲಾಖೆಯನ್ನು ಸಂಪರ್ಕಿಸಬಹುದು ಎಂದು ಸಹಾಯಕ ಕಾರ್ಮಿಕ ಆಯುಕ್ತರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಪಾನ್‌ಗೆ ಅಪ್ಪಳಿಸಿದ ಸುನಾಮಿ ಮೊದಲ ಅಲೆಗಳು!

ಟೋಕಿಯೋ: ಇಂದು ಬೆಳಗ್ಗೆ ಈಶಾನ್ಯ ಜಪಾನ್‌ನಲ್ಲಿ ಸಂಭವಿಸಿದ ಪ್ರಬಲ ಭೂಕಂಪನದ ಬಳಿಕ ಜಪಾನ್ ಕರಾವಳಿಗೆ ಸುನಾಮಿಯ ಮೊದಲ ಅಲೆಗಳು ಅಪ್ಪಳಿಸಿವೆ ಎಂದು ಹೇಳಲಾಗಿದೆ.

ಸೋಮವಾರ ಮಧ್ಯ ಜಪಾನ್‌ನಲ್ಲಿ 7.5ತೀವ್ರತೆಯ ಪ್ರಬಲವಾದ ಭೂಕಂಪ ಸಂಭವಿಸಿದ್ದು, ಅಮೆರಿಕ ಭೂ ಸರ್ವೇಕ್ಷಣಾ ಇಲಾಖೆ ಸುನಾಮಿ ಎಚ್ಚರಿಕೆ ನೀಡಿತ್ತು. ಇದರ ಬೆನ್ನಲ್ಲೇ ಇದೀಗ ಜಪಾನ್ ಕರಾವಳಿ ತೀರಕ್ಕೆ 1ರಿಂದ 2 ಅಡಿ ಎತ್ತರದ ಸುನಾಮಿ ಅಲೆಗಳು ಅಪ್ಪಳಿಸಿವೆ ಎಂದು ಹೇಳಲಾಗಿದೆ. ಜಪಾನ್ ಇಶಿಕಾವಾ ಪ್ರಾಂತ್ಯದ ವಾಜಿಮಾ ನಗರಕ್ಕೆ 1.2 ಮೀಟರ್‌ನಿಂದ 2 ಮೀಟರ್‌ಗಳಷ್ಟು ಎತ್ತರದ ಸುನಾಮಿ ಅಲೆಗಳು ಅಪ್ಪಳಿಸಿರುವುದು ದೃಢಪಟ್ಟಿದೆ.

ಜಪಾನ್‌ನ ಕರಾವಳಿ ಪ್ರದೇಶ ನೋಟೋದಲ್ಲೂ ಮೊದಲ ಸುನಾಮಿ ಅಲೆಗಳು ಅಪ್ಪಳಿಸಿರುವ ಕುರಿತು ವರದಿಯಾಗಿದ್ದು, ಈ ಅಲೆಗಳ ಎತ್ತರ 5 ಮೀಟರ್‌ವರೆಗೂ ಹೆಚ್ಚಾಗುವ ಸಾಧ್ಯತೆಗಳಿವೆ ಎಂದು ಹೇಳಲಾಗಿದೆ. ಜಪಾನ್ ಇಶಿಕಾವಾ ಪ್ರಿಫೆಕ್ಚರ್‌ನಲ್ಲಿರುವ ನೋಟೊ ಪ್ರದೇಶದಲ್ಲಿ ಭೂಕಂಪನದ ಬಳಿಕ ಸುನಾಮಿ ಭೀತಿ ಆವರಿಸಿದೆ. ಹೀಗಾಗಿ ಮುಂಜಾಗ್ರತಾ ಕ್ರಮವಾಗಿ ಅಧಿಕಾರಿಗಳು ಈ ಸುತ್ತಮುತ್ತಲಿನ ಜನರಿಗೆ ಎತ್ತರದ ನೆಲಕ್ಕೆ ಸ್ಥಳಾಂತರಿಸುವಂತೆ ರಾಷ್ಟ್ರೀಯ ಪ್ರಸಾರಕ ಎನ್‌ಎಚ್‌ಕೆ ಎಚ್ಚರಿಕೆ ನೀಡಿದೆ.

ರಷ್ಯಾ, ಉತ್ತರ ಕೊರಿಯಾಗೂ ಸುನಾಮಿ ಭೀತಿ: ಇನ್ನು ಜಪಾನ್ ಮಾತ್ರವಲ್ಲದೆ ನೆರೆಯ ರಾಷ್ಟ್ರಗಳಾದ ಉತ್ತರ ಕೊರಿಯಾ ಮತ್ತು ರಷ್ಯಾದಲ್ಲೂ ಸುನಾಮಿ ಎಚ್ಚರಿಕೆ ನೀಡಲಾಗಿದೆ. ಹೀಗಾಗಿ ಉಭಯ ರಾಷ್ಟ್ರಗಳಲ್ಲಿ ಸುನಾಮಿ ಅಲರ್ಟ್ ಘೋಷಣೆ ಮಾಡಲಾಗಿದ್ದು, ಅಧಿಕಾರಿಗಳು ಕರಾವಳಿ ಪ್ರಾಂತ್ಯದಲ್ಲಿನ ಜನರನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸುವ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ. 2011ರಲ್ಲಿ ಭೂಕಂಪದ ನಂತರ ಸುನಾಮಿಯಿಂದಾಗಿ 16 ಸಾವಿರ ಮಂದಿ ಸಾವನ್ನಪ್ಪಿದ್ದರು. ಮಾರ್ಚ್ 2011ರಲ್ಲಿ, 9 ತೀವ್ರತೆಯ ವಿನಾಶಕಾರಿ ಸುನಾಮಿ ಸಂಭವಿಸಿದೆ. ಆಗ ಎದ್ದ ಸುನಾಮಿ ಅಲೆಗಳು ಫುಕುಶಿಮಾ ಪರಮಾಣು ಸ್ಥಾವರವನ್ನು ನಾಶಪಡಿಸಿದ್ದವು.

ಮೆಲ್ಲಹಳ್ಳಿ ಸರ್ಕಾರಿ ಶಾಲೆಯಲ್ಲಿ ಕುವೆಂಪು ಜಯಂತಿ



ಮೈಸೂರು, ಜ. 1– ತಾಲೂಕಿನ ಮೆಲ್ಲಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವತಿಯಿಂದ ವಿಶ್ವಮಾನವ ದಿನಾಚರಣೆಯ ಅಂಗವಾಗಿ ಕುವೆಂಪು ಸಂಸ್ಮರಣೆ, ವಿದ್ಯಾರ್ಥಿಗಳಿಂದ ಕುವೆಂಪು ವಿರಚಿತ ಆಯ್ದ ಕವಿತೆಗಳ ವಾಚನ ಹಾಗೂ ಗಾಯನ ಕಾರ್ಯಕ್ರಮ ನಡೆಯಿತು. ಕುವೆಂಪು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಹಾಗೂ ಸಾಹಿತಿ ಟಿ. ಸತೀಶ್ ಜವರೇಗೌಡ, ಕನ್ನಡ ಸಾಹಿತ್ಯದ ಸರ್ವ ಪ್ರಕಾರದಲ್ಲಿ ಬರೆವಣಿಗೆಯ ಕೃಷಿ ಮಾಡಿರುವ ಕುವೆಂಪು ಅವರ ವಿಶ್ವಮಾನವ ಸಂದೇಶವನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು ಎಂದರು.

ಮುಖ್ಯ ಶಿಕ್ಷಕಿ ಪಿ.ಎನ್. ವೀಣಾ ಮಾತನಾಡಿ, ಸಾಹಿತ್ಯ ಲೋಕದ ಮಹಾನ್ ಚೇತನಗಳು ಬರೆದಿರುವ ಪುಸ್ತಕಗಳನ್ನು ವಿದ್ಯಾರ್ಥಿಗಳು ಓದಬೇಕು. ಅವರ ವಿಚಾರ ಮತ್ತು ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕನ್ನಡ ಭಾಷಾ ಶಿಕ್ಷಕ ರಂಗಸ್ವಾಮಿ ಕುವೆಂಪು ಕುರಿತು ಅವರ ಶಿಷ್ಯ ಜಿ.ಎಸ್.ಶಿವರುದ್ರಪ್ಪ ಬರೆದ ಕವನ ವಾಚಿಸಿದರು. ವೇದಿಕೆಯಲ್ಲಿ ಶಿಕ್ಷಕರಾದ ಸುನೀಲ್ ಕುಮಾರ್, ಕೆ. ಕಲ್ಪನಾ, ಸಂಗೀತ ಶಿಕ್ಷಕಿ ಶ್ರೀದೇವಿ, ಅತಿಥಿ ಶಿಕ್ಷಕರಾದ ರೂಪ, ಪುನೀತ್‌ಕುಮಾರ್ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಸಪ್ಲೈಯರ್ : ಏನು ಕೊಡಲಿ ಸಾರ್?
ಈತ : ಚಕ್ಕುಲಿ ತಗೊಂಡು ಬಾ.
ಸಪ್ಲೈಯರ್ : ಅದರ ಜೊತೆಗೆ ಏನು ತರಲಿ ಸಾರ್?
ಈತ : ಚಕ್ಕುಲಿ ಹೋದ ಸಲ ಇದ್ದ ಹಾಗೆಯೇ ಇದ್ದರೆ, ಅದರ ಜೊತೆಗೆ ಸುತ್ತಿಗೆನೂ ತಗೊಂಡು ಬಾ!

ಮೈಸೂರು ಮಿತ್ರ

ಮಂಗಳವಾರ, 2 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಯಾರು ತನ್ನ ಸಹಾಯವನ್ನು ಸ್ವತಃ ಮಾಡಿಕೊಳ್ಳಬಲ್ಲನೋ ಅಂಥವನಿಗೆ ದೇವರ ಸಹಾಯ ಇರುತ್ತದೆ. ಸೋಮಾರಿಗೆ ಸಾಯುವುದರಲ್ಲೇ ಆನಂದವಿದೆ.

–ಮಹಾತ್ಮಾ ಗಾಂಧೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಳಿವುದೇ ಕಾಯ, ಉಳಿವುದೇ ಕೀರ್ತಿ

ನಿಮ್ಮ ಪತ್ರಗಳು

ಮಾನವೀಯ ಮೌಲ್ಯಗಳು ಬದುಕಿಗೆ ಅಮೂಲ್ಯ

ಮಾನ್ಯರೆ,

ನಮ್ಮ ರೂಪ, ನಮ್ಮ ಬಣ್ಣ, ನಾವು ಧರಿಸುವ ಬಟ್ಟೆಗಳು, ನಾವು ಬಳಸೋ ಐಷಾರಾಮಿ ಮೊಬೈಲ್, ಬೈಕ್, ಕಾರ್ ಇನ್ನಿತರ ಪರಿಕರಗಳು ನಾವು ವಾಸಿಸುವ ವೈಭವಯುತ ಮನೆಗಳು. ನಾವು ಹೊಂದಿರುವ ಹಣ, ನಾನಾ ಆಹಾರ ಸೇವಿಸುವುದರಿಂದ ಬದುಕು ಸುಂದರ, ಶ್ರೇಷ್ಠ ಅಂದುಕೊಂಡರೆ ನಮ್ಮಂತಹ ಮೂರ್ಖರು ಮತ್ತೊಬ್ಬರಿಲ್ಲ. ಇವೆಲ್ಲವೂ ಶ್ರೀಮಂತಿಕೆಯ ಸಂಕೇತವಾಗಿದೆಯಷ್ಟೇ. ಜೀವನವೂ ಇಷ್ಟೇ ಆಗಿದ್ದರೆ ದೇವರು ಈ ಸುಂದರ ಪ್ರಕೃತಿಯನ್ನು ಸೃಷ್ಟಿಸಿ ಅದರಿಂದ ಬದುಕಿಗೆ ನೀತಿ ನಿಯಮಗಳನ್ನು ಕಲಿಸುತ್ತಿರಲಿಲ್ಲ. ಭೂ ತಾಯಿಯ ಋಣದಲ್ಲಿ ನಮ್ಮ ಹಸಿವು ನೀಗುತ್ತಲಿದೆ. ಮಾನವೀಯ ಮೌಲ್ಯಗಳು ಬದುಕಿಗೆ ಅಮೂಲ್ಯವಾದವು. ಇಂದಿನ ಮಕ್ಕಳಿಗೆ ಮಾನವೀಯ ಮೌಲ್ಯಗಳನ್ನು ಶಿಕ್ಷಣದ ಜೊತೆ ಕಲಿಸದಿದ್ದಲ್ಲಿ ಅವರಿಗೊಂದು ದಿನ ಬದುಕು ಬೇಸರವಾಗಿ ಮಾನಸಿಕವಾಗಿ ಕುಗ್ಗುವುದರಲ್ಲಿ ಸಂದೇಹವಿಲ್ಲ.

ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸದ ನಂತರ ಒಳ್ಳೆಯ ಸಂಬಳದ ಕೆಲಸ ಸಿಕ್ಕರೆ ಸಾಲದು. ಮಾನವೀಯ ಮೌಲ್ಯಗಳನ್ನು ಪೋಷಕರು ಚಿಕ್ಕಂದಿನಿಂದಲೇ ಕಲಿಸಬೇಕು. ದುಡಿಮೆಯೊಂದೇ ಬದುಕಿನ ಗುರಿಯಾಗಬಾರದು. ಹಿಂದಿನ ಕಾಲದಲ್ಲಿ ಪಟ್ಟಣಗಳಲ್ಲಿ ಧರ್ಮ ಛತ್ರಗಳನ್ನು ಆಯಾಯ ಪಟ್ಟಣದಲ್ಲಿ ಆರ್ಥಿಕವಾಗಿ ಸದೃಢವಾಗಿರುವವರು, ಮಾನವೀಯತೆ ಮನ ಉಳ್ಳವರು ವ್ಯವಸ್ಥೆ ಮಾಡುತ್ತಿದ್ದರು. ಇದರಿಂದ ಪಟ್ಟಣಕ್ಕೆ ಬರುವ ಅನೇಕ ಸಾಮಾನ್ಯ ಜನರಿಗೆ ಉಪಯೋಗವಾಗುತ್ತಿತ್ತು. ನಾವು ಆರ್ಥಿಕವಾಗಿ ಸಬಲರಾದಾಗ ನಮ್ಮಲ್ಲಿ ಕಿಂಚಿತ್ತಾದರು ಮರುಗುವ ಮನವಿರಬೇಕು.

ಜಗದ್ಗುರು ಬಸವಣ್ಣನವರು ಹೇಳಿರುವಂತೆ

"ದಯವಿಲ್ಲದ ಧರ್ಮವಾವುದಯ್ಯಾ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯ
ಕೂಡಲ ಸಂಗಯ್ಯನಂತಲ್ಲ ದೊಲ್ಲನಯ್ಯಾ."

ನಮ್ಮ ಸುತ್ತಮುತ್ತಲೇ ಸಹಾಯದ ನಿರೀಕ್ಷೆಯಲ್ಲಿ ಹತ್ತಾರು ಮನಗಳಿರುತ್ತವೆ. ಅದನ್ನು ಗುರುತಿಸಿಯೂ ಸುಮ್ಮನಿರಬಾರದು.

ಜೀವನದಲ್ಲಿ ಯಾರು ಕೂಡ ಹುಟ್ಟಿನಿಂದಲೇ ಬದುಕಿನ ಬವಣೆಗಳಿಗೆ ಎದೆಯೊಡ್ಡಿ ನಿಲ್ಲುವ ಸಾಮರ್ಥ್ಯವಿರುವುದಿಲ್ಲ. ಬದುಕಿನ ಪರಿಸ್ಥಿತಿ ಹಾಗೂ ಸಂಗತಿಗಳು ನಮ್ಮನ್ನು ಬಲಗೊಳಿಸುತ್ತ ಸಾಗುತ್ತವೆ. ನಮ್ಮಿಂದ ಒಬ್ಬರ ಬದುಕಿನಲ್ಲಿ ಬದಲಾವಣೆ ಬೆಳಕು ಮೂಡುತ್ತದೆ ಎಂದಾದರೆ ಮರುಗುವ ಬೆಳಕಿನ ಕಿಡಿ ತಾಕಿಸಿದರೆ ಒಳಿತಲ್ಲವೆ. ಜಗತ್ತು ಜಾಗತಿಕವಾಗಿ ಎಷ್ಟೇ ಅಭಿವೃದ್ಧಿ ಹೊಂದುತ್ತಿದ್ದರೂ ನಮ್ಮವರ ಮನದ ದನಿ ನಮಗೆ ಕೇಳಿಸದಾದರೆ ಬದುಕು ನಿರರ್ಥಕ.

–ಮಂಜೇಶ್ ದೇವಗಳ್ಳಿ, ಮೈಸೂರು

ಬಿಜೆಪಿ–ಜೆಡಿಎಸ್ ಮೈತ್ರಿಯಿಂದ ಪ್ರತಾಪ್ ಸಿಂಹರಿಗೆ ಮತ್ತಷ್ಟು ಬಲ

ಮಾನ್ಯರೆ,

ಮೈಸೂರು – ಕೊಡಗು ಲೋಕಸಭಾ ಕ್ಷೇತ್ರದ ಜನಪ್ರಿಯ ಸಂಸದರಾದ ಪ್ರತಾಪ್ ಸಿಂಹರವರು ತಮ್ಮ ಕ್ಷೇತ್ರ ವ್ಯಾಪ್ತಿಯಾದ್ಯಂತ ಅನೇಕ ಅಭಿವೃದ್ಧಿ ಕಾರ್ಯಗಳಿಂದಾಗಿ ಜನಾನುರಾಗಿಯಾಗಿದ್ದಾರೆ. ಹಾಗೂ ಲಕ್ಷಾಂತರ ಅಭಿಮಾನಿ ಬಳಗವನ್ನು ಹೊಂದಿದ್ದಾರೆ. ಒಬ್ಬ ಸಾಮಾನ್ಯ ಕುಟುಂಬದಿಂದ ಬಂದಿರುವ ಇವರು ಯಾವುದೇ ಗಾಡ್‌ಫಾದರ್ ಇಲ್ಲದೇ ತನ್ನ ಸ್ವಂತ ಶಕ್ತಿಯಿಂದ, ಕಾರ್ಯಕರ್ತರ ಶ್ರಮ ಹಾಗೂ ಮತದಾರರ ಆಶೀರ್ವಾದದಿಂದ ಇಂದು ಎರಡನೇ ಬಾರಿಗೆ ಸಂಸದರಾಗಿದ್ದಾರೆ ಹಾಗೂ ಮುಂದಿನ ಲೋಕಸಭಾ ಚುನಾವಣೆಗೆ ಅವರಿಗೆ ಜನಪ್ರಿಯತೆ ಜೊತೆಗೆ ಬಿಜೆಪಿ– ಜೆಡಿಎಸ್ ಮೈತ್ರಿಯಿಂದ ಆನೆ ಬಲ ಬಂದಂತಾಗಿದೆ.

–ಸಂತೋಷ, ಮೈಸೂರು

ಯುವಕರಿಗೆ ಪ್ರಿಯವಾಗಿರುವ ಮದ್ಯ, ಶೋಚನೀಯ

ಮಾನ್ಯರೆ,

ಮೈಸೂರಿನಲ್ಲಿ ಹೊಸ ವರ್ಷದ ಸಂಭ್ರಮಾಚರಣೆಗೆ ದಶಕೋಟಿ ಮೌಲ್ಯದ ಮದ್ಯ ಮಾರಾಟವಾಗಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಯಾವುದು ಆರೋಗ್ಯಕ್ಕೆ ಹಾನಿಕರ ಎಂದು ಹೇಳಲಾಗುತ್ತದೆಯೋ ಅದು ಇಂದಿನ ಪ್ರಿಯಕರ ಪಾನೀಯವಾಗಿರುವುದು ಶೋಚನೀಯ. ಇದರಿಂದಾಗಿಯೇ ಮದ್ಯ ಸರ್ಕಾರಗಳ ಖಜಾನೆ ತುಂಬುವ ಸರಕಾಗಿದೆ. ಈ ದೇಶದಲ್ಲಿ ಬಡವ, ಬಲ್ಲಿದರೆನ್ನದೇ ಎಲ್ಲರ ಬದುಕಿನಲ್ಲೂ ಮದ್ಯ ಎಂಬುದು ಶ್ರೀಸಾಮಾನ್ಯನ ಪಾನೀಯವಾಗಿರುವುದು ದುರದೃಷ್ಟಕರ. ಈಗ ಸಿನಿಮಾ, ಟಿವಿ ಸೀರಿಯಲ್‌ಗಳಲ್ಲಿ, ಹಿಂದಿನಂತೆ ಕಾಫಿ, ಟೀ ಕುಡಿಯಿರಿ ಎಂದು ಉಪಚರಿಸುವ ಕಾಲ ಹೋಗಿ ಅದರ ಬದಲು ಮದ್ಯವನ್ನು ಉಪಚಾರಕ್ಕಾಗಿ ನೀಡುವುದು ಸಾಮಾನ್ಯ ಸಂಗತಿಗಳಾಗಿದೆ. ಇದನ್ನು ಮುಂದುವರೆದ ನಾಗರಿಕ ಸಮಾಜವೆನ್ನಬಹುದೇನೋ! ಅಲ್ಲವೆ! ಇನ್ನು ಮುಂದಿನ ದಿನಗಳಲ್ಲಿ ಹಿಂದೆ ಯಾವುದು ಅನಾಗರಿಕವೆಂದು ಬಳಸಲು ಸಂಕೋಚವಾಗುತ್ತಿತ್ತೋ, ಅದು ಸಾಮಾನ್ಯವಾಗಬಹುದೇನೋ! ಕಾಲಾಯ ತಸ್ಮೈ ನಮಃ.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

80:20 ಅನುಪಾತದಲ್ಲಿ ಕನ್ನಡ ನಾಮಫಲಕ ಸಂಬಂಧ ಸುಗ್ರೀವಾಜ್ಞೆ ಹೊರಡಿಸಲಿ


ಮಾನ್ಯರೆ,

ರಾಜ್ಯದ ಎಲ್ಲಾ ವಾಣಿಜ್ಯ ಕೇಂದ್ರಗಳು, ಅಂಗಡಿ–ಮುಂಗಟ್ಟುಗಳು, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳ ನಾಮಫಲಕಗಳಲ್ಲಿ ಶೇ.60 ರಷ್ಟು ಕನ್ನಡ, ಉಳಿದ ಶೇ.40 ಇತರ ಭಾಷೆಗಳಲ್ಲಿ ಇರಬೇಕು ಎಂದು ಸುಗ್ರೀವಾಜ್ಞೆ ಹೊರಡಿಸಬೇಕಿದೆ.

60:40 ಅನುಪಾತದ ಕಾಯ್ದೆ 2018 ರಿಂದಲೂ ಜಾರಿಯಲ್ಲಿದೆ. ಆದರೆ ಅದು ಕಟ್ಟುನಿಟ್ಟಾಗಿ ಜಾರಿಗೆ ತರಲು ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲ. ಈಗ ಮೊನ್ನೆ ಬೆಂಗಳೂರಿನಲ್ಲಿ ಕನ್ನಡ ಚಳವಳಿಗಾರರು ಪ್ರತಿಭಟನೆ ನಡೆಸಿದ ನಂತರ ಈ ಕಾಯ್ದೆಗೆ ತಿದ್ದುಪಡಿ ಮಾಡಿ, ಸುಗ್ರೀವಾಜ್ಞೆ ಮೂಲಕ ಜಾರಿಗೆ ತರುವುದಾಗಿ ಹೇಳಿದ್ದಾರೆ.

ಈ ಕಾಯ್ದೆಗೆ ತಿದ್ದುಪಡಿ ತಂದು ಕನ್ನಡಕ್ಕೆ ಶೇ.80 ರಷ್ಟು ಕಡ್ಡಾಯ ಮಾಡಿ ಮತ್ತು ಉಳಿದ ಭಾಷೆಗಳಿಗೆ ಶೇ.20 ರಷ್ಟು ಇರುವಂತೆ, 80:20 ಅನುಪಾತ ಇರುವಂತೆ, 2018ರ ನಾಮಫಲಕಗಳ ಕಾಯ್ದೆಗೆ ತಿದ್ದುಪಡಿ ತಂದು ರಾಜ್ಯ ಸರ್ಕಾರ ತಕ್ಷಣವೇ ಸುಗ್ರೀವಾಜ್ಞೆ ಹೊರಡಿಸದಿದ್ದರೆ ಭರವಸೆ ಭರವಸೆ ಆಗಿಯೇ ಉಳಿಯಲಿದೆ. ನಮ್ಮ ಪಕ್ಕದ ತಮಿಳುನಾಡಿನಲ್ಲಿ ಸಾಮಾನ್ಯವಾಗಿ ಎಲ್ಲಾ ವಾಣಿಜ್ಯ ಕೇಂದ್ರ, ಅಂಗಡಿ, ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳ ನಾಮಫಲಕಗಳು ಶೇ.80 ಭಾಗ ತಮಿಳಿನಲ್ಲಿ, ಉಳಿದ 20 ಭಾಗ ಮಾತ್ರ ಬೇರೆ ಭಾಷೆಗಳಲ್ಲಿ ಇವೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು 40 ವರ್ಷಗಳ ಹಿಂದೆಯೇ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿದ್ದವರು. ಅವರು ಈ ಬಗ್ಗೆ ಚಿಂತಿಸಿ ಕಾಯ್ದೆಗೆ ಶೀಘ್ರ ತಿದ್ದುಪಡಿ ತರಲಿ.

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಸದ್ಗುರು ಶ್ರೀ ಮಧುಸೂದನ ಸಾಯಿ–2

ಭಗವಾನ್ ಶ್ರೀ ಸತ್ಯ ಸಾಯಿ ಬಾಬಾರ ಅಪರ ಆತ್ಮವೇ?

(ಡಿ. 31ರ ಸಂಚಿಕೆಯಿಂದ)

ಕೆ.ಬಿ.ಗಣಪತಿ (ಕೆಬಿಜಿ): ನೀವು ಅವರ ಉತ್ತರಾಧಿಕಾರಿಯಾಗಿ ಹೇಗೆ ಹೊರ ಹೊಮ್ಮಿದಿರಿ?

ಶ್ರೀ ಸತ್ಯ ಸಾಯಿಬಾಬಾ ಅವರು 2011ರಲ್ಲಿ ಕಾಲವಾದರು. ಸದ್ಗುರು ಶ್ರೀ ಮಧುಸೂದನ ಸಾಯಿ ಅವರು ಆಗ ಬೆಂಗಳೂರಿನಲ್ಲಿದ್ದರು. ಅವರು ನೆಲೆಸಿದ್ದ ಕೋಣೆಗೆ ಹೊಂದಿಕೊಂಡಂತೆ ಒಂದು ಪ್ರಾರ್ಥನಾ ಕೋಣೆಯಿತ್ತು. ಒಂದು ದಿನ ಅವರು ಅಲ್ಲಿ ಕುಳಿತು ಪ್ರಾರ್ಥನೆ ಸಲ್ಲಿಸುತ್ತಿದ್ದಾಗ ಶ್ರೀ ಸತ್ಯ ಸಾಯಿ ಬಾಬಾರ ಸೂಕ್ಷ್ಮ ಶರೀರ ಅವರ ಮುಂದೆ ಪ್ರತ್ಯಕ್ಷವಾಗಿ ಅವರ ಆಧ್ಯಾತ್ಮಿಕ ಮತ್ತು ಪ್ರಾಪಂಚಿಕ ಸತ್ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುವಂತೆ ಹೇಳಿತು.


ಶ್ರೀ ಮಧುಸೂದನರು ತಮಗೆ ಅಂತಹ ಯಾವುದೇ ಆಧ್ಯಾತ್ಮಿಕ ಶಕ್ತಿಯಾಗಲಿ ಇಲ್ಲವೇ ಪ್ರಭಾವಿ ವ್ಯಕ್ತಿಗಳ ಪರಿಚಯವೂ ಇಲ್ಲದಿರುವಾಗ ಅಂತಹ ಧರ್ಮ ಕಾರ್ಯಗಳನ್ನು ಹೇಗೆ ಮುಂದುವರೆಸಿಕೊಂಡು ಹೋಗುವುದು ಎಂದು ಕೇಳಿದರು. ಆಗ ಸತ್ಯ ಸಾಯಿ ಬಾಬಾರು, "ನೀನು ಚಿಂತಿಸಬೇಡ, ನಿನಗೆ ಬೆಂಬಲವಾಗಿ ನಿಂತು ಸಹಾಯ ಮಾಡುವ ಕೆಲವು ಸೂಕ್ತವಾದಂತಹ ವ್ಯಕ್ತಿಗಳನ್ನು ನಾನು ಸೂಚಿಸುತ್ತೇನೆ" ಎಂದು ಹೇಳಿದರು. ಹಾಗೆಯೇ ಅವರು ಪ್ರೊ. ನರಸಿಂಹಮೂರ್ತಿ ಮತ್ತು ಪ್ರೊ. ಶಶಿಧರ ಪ್ರಸಾದರು ಸೇರಿ ಹಲವರ ಹೆಸರುಗಳನ್ನು ಸೂಚಿಸಿದರು.

ಶ್ರೀ ಮಧುಸೂದನ ಸಾಯಿ ಅವರ ಈ ಮಾತುಗಳನ್ನು ಕೇಳಿದಾಗ ನಾನು ಯೇಸುಕ್ರಿಸ್ತರನ್ನು ನೆನೆಸಿಕೊಂಡೆ. ಅವರು ಓರ್ವ ಶಿಷ್ಯನಿಗೆ ತಮ್ಮ ಶುಭ ಸಂದೇಶಗಳನ್ನು ಸಾರುವಂತೆ ಸೂಚಿಸಿದರು. ಆದರೆ ಆ ಶಿಷ್ಯ ತಾನು ಅನಕ್ಷರಸ್ಥನಾಗಿದ್ದು ಆ ಕೆಲಸ ಕಷ್ಟ ಎಂದು ಹೇಳಿದ.

ಏಸುಕ್ರಿಸ್ತರು ಅವನಲ್ಲಿ ಧೈರ್ಯ ತುಂಬಿದರು; "ಹೆದರಬೇಡ, ನಾನು ನಿನಗೆ ಧ್ವನಿಯಾಗಿರುವೆ".

ಅದು ಹಾಗಿರಲಿ. ಮುಂದೆ ನಾನು ಕೇಳಿದೆ "ಆ ಸೂಕ್ಷ್ಮ ಶರೀರ ಅಥವಾ ಸತ್ಯ ಸಾಯಿಬಾಬಾರ ಆತ್ಮ ನಿಮಗೆ ಹೇಗೆ ಗೋಚರಿಸಿತು. ಅದು ನಿಂತಿತ್ತೇ ಇಲ್ಲ ಕುಳಿತಿತ್ತೇ?" ಅದು ನಿಂತಿತ್ತು ಎಂದು ಶ್ರೀ ಮಧುಸೂದನರು ತಿಳಿಸಿದರು. "ಯಾವ ಧಿರಿಸು ತೊಟ್ಟಿತ್ತು?" ನಾನು ಮುಂದುವರೆಸಿದೆ. "ಸಾಮಾನ್ಯವಾಗಿ ಸತ್ಯ ಸಾಯಿಬಾಬಾ ಧರಿಸುತ್ತಿದ್ದುದು", ಅವರು ಉತ್ತರಿಸಿದರು.

"ನೀವು ಅವರನ್ನು ಮುಟ್ಟಿದಿರಾ? ಅದು ಭೌತಿಕ ದೇಹವಾಗಿತ್ತಾ?"



ಪುಟ್ಟಪರ್ತಿ ಶ್ರೀ ಸತ್ಯ ಸಾಯಿ ಬಾಬಾ



ಶ್ರೀ ಮಧುಸೂದನ ಸಾಯಿ ಅವರೊಂದಿಗೆ ಡಾ. ಕೆ.ಬಿ.ಗಣಪತಿ

ಇಲ್ಲ, ನಾನು ಅವರನ್ನು ಮುಟ್ಟಲಿಲ್ಲ. ಅದು ಭೌತಿಕ ದೇಹವಾಗಿರಲಿಲ್ಲ. ಆದರೆ ಅವರನ್ನು ಕಣ್ಣಾರೆ ಕಂಡೆ". ಅವರು ತಮ್ಮ ಎರಡು ಬೆರಳುಗಳಿಂದ ವಿಕ್ಟರಿ ಚಿಹ್ನೆ ಮಾಡಿ ಅವರ ಕಣ್ಣಿನ ಬಳಿ ತಂದರು.

ಕೆಬಿಜಿ : ಶ್ರೀ ಕೃಷ್ಣನು, ಕುರುಕ್ಷೇತ್ರ ಯುದ್ಧವನ್ನು ಅಂಧ ದೊರೆ ಧೃತರಾಷ್ಟ್ರನಿಗೆ ಬಣ್ಣಿಸಲು ಸಾಧ್ಯವಾಗುವಂತೆ ಸಂಜಯ್‌ನಿಗೆ ವಿಶೇಷ ದೃಷ್ಟಿ ಕರುಣಿಸಿದಂತೆ, ಹಾಗೂ ಅರ್ಜುನನಿಗೆ ಶ್ರೀ ಕೃಷ್ಣನು ಪ್ರದರ್ಶಿಸಿದ ವಿಶ್ವರೂಪವನ್ನು ನೋಡಲು ದಿವ್ಯದೃಷ್ಟಿ ನೀಡಿದಂತೆ ಸತ್ಯ ಸಾಯಿಬಾಬಾರ ಸೂಕ್ಷ್ಮ ಶರೀರವನ್ನು ನೀವು ನೋಡಲು ಅವರು ನಿಮಗೆ ದಿವ್ಯದೃಷ್ಟಿಯನ್ನು ಅನುಗ್ರಹಿಸಿದರೆ?

ಸದ್ಗುರು ಮುಗುಳ್ನಗೆ ಬೀರಿ, "ಇಲ್ಲ, ನಾನು ಅವರನ್ನು ನನ್ನ ಸಹಜ ದೃಷ್ಟಿಯಲ್ಲೇ ಕಂಡೆ" ಎಂದು ಉತ್ತರಿಸಿದರು.

ಸಮಯ ಮಿಂಚಿ ಹೋಗುತ್ತಿತ್ತು. ಹೆಲಿಕಾಪ್ಟರ್ ಕಾಯುತ್ತಿತ್ತು. ಸದ್ಗುರುಗಳಿಗೆ ವಿಭೂತಿ, ಕೈಗಡಿಯಾರ, ಉಂಗುರ, ಸರ ಮತ್ತು ಇತರ ಸಣ್ಣ ಪದಾರ್ಥಗಳನ್ನು ಕೈಚಳಕದಿಂದ ಸೃಷ್ಟಿಸುವ ವಿದ್ಯೆ ಒಲಿದಿದೆಯೇ ಎಂದು ಕೇಳಲು ಮರೆತೆ. ಹಾಗೆಯೇ ಅವರಿಗೆ ರೋಗಗಳನ್ನು ಗುಣಪಡಿಸಲು ಸಾಧ್ಯವಿವುದೇ ಎಂದು ಕೇಳಲು ಸಹ ಮರೆತು ಹೋಯಿತು. ನಂತರ ಯಾರೋ ಹೇಳಿದರು ಅವರು ಮಿತವಾಗಿ ಈ ಪವಾಡವನ್ನು ಮಾಡುತ್ತಿರುತ್ತಾರೆ ಎಂದು. ಅದು ಇರಲಿ. ನಾನು ಅವರನ್ನು ಕಡೆಯದಾಗಿ ಒಂದು ಪ್ರಶ್ನೆ ಕೇಳಿದೆ.

ಕೆಬಿಜಿ : ನಿಮಗೆ ಜ್ಞಾನೋದಯ (Enlightenment) ವಾಗಿದೆಯೇ?

ಈ ಪ್ರಶ್ನೆಗೆ ಅವರು ನೇರವಾಗಿ ಉತ್ತರಿಸಲಿಲ್ಲ. ಆದರೆ ಹಾಗೆ ಆಗಿದೆ ಎಂಬಂತೆ ಕೆಲವು ಸೂಚನೆಗಳ ಮೂಲಕ ತಿಳಿಸಿದರು.

ಕೆಬಿಜಿ: ಜ್ಞಾನೋದಯವಾದ ವ್ಯಕ್ತಿಗೂ, ನನ್ನಂಥ ಸಾಧಾರಣ ವ್ಯಕ್ತಿಗೂ ಏನು ವ್ಯತ್ಯಾಸ?

ಮತ್ತೆ ಕಣ್ಣುಗ್ಗಿಸಿ, ಕಿರುನಗೆ ಬೀರಿದರು. ಈ ಮುಂಚೆ ನಾವು ಅವರು ಮಾಡುತ್ತಿರುವ ಆಧ್ಯಾತ್ಮಿಕ ಮತ್ತು ಪ್ರಾಪಂಚಿಕ ಕಾರ್ಯಗಳ ಬಗ್ಗೆ ಚರ್ಚಿಸಿದ್ದೆವು. ಶಿಕ್ಷಣ, ಆರೋಗ್ಯ ಮತ್ತು ಮಕ್ಕಳಿಗೆ ಪೋಷಣೆ (Nutrition) ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವುದು ಪ್ರಾಪಂಚಿಕವಾದುದು ಮತ್ತು ಅದು ಬಂಧನಗಳಿಗೆ ಒಳಪಡುತ್ತದೆ. ಆದರೆ ಆಧ್ಯಾತ್ಮಿಕತೆಯು ತ್ಯಾಗ, ಪ್ರಾಪಂಚಿಕ ಅವಶ್ಯಕತೆಗಳನ್ನು ಮತ್ತು ಭೋಗಗಳನ್ನು ತ್ಯಜಿಸುವುದು.

ಕೆಬಿಜಿ : ನೀವು ಹೇಳಿದ ಸೇವೆ ಪ್ರಾಪಂಚಿಕ, ಲೌಕಿಕವಾದದ್ದು. ಆದರೆ ಆಧ್ಯಾತ್ಮಿಕತೆ ಪಾರಲೌಕಿಕವಾದದ್ದು. ಈ ಎರಡು ವಿರುದ್ಧಗಳನ್ನು ಹೇಗೆ ಸಮನ್ವಯಗೊಳಿಸುವುದು?

"ಅದು ಒಂದು ಮನೆಯಲ್ಲಿ ಬದುಕಿದಂತೆ. ಅಲ್ಲಿ ಅಡುಗೆ ಮನೆ, ಮಲಗುವ ಕೋಣೆ ಮತ್ತು ದೇವರ ಮನೆ ಇರುತ್ತವೆ. ನಿಮಗೆ ಯಾವುದು ಯಾವಾಗ ಬೇಕೋ ಆಗ ಅದನ್ನು ಆಯ್ಕೆ ಮಾಡಿಕೊಳ್ಳಬೇಕು. ಅಥವಾ ಮೂರು ಅಂತಸ್ತಿನ ಮನೆಯಲ್ಲಿ ಲಿಫ್ಟ್ ಉಪಯೋಗಿಸಿದಂತೆ. ಮೊದಲೆರಡು ಅಂತಸ್ತುಗಳು ಪ್ರಾಪಂಚಿಕ. ಮೂರನೆಯದು ಆಧ್ಯಾತ್ಮಿಕ. ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ನಾನು ಮೊದಲೆರಡನ್ನು ತ್ಯಜಿಸಿ ಮೂರನೆಯದಕ್ಕೆ ನೇರವಾಗಿ ಏರಬಲ್ಲೆ" ಎಂದು ಉತ್ತರಿಸಿದರು. ನಾನು ಮೆಚ್ಚಿ ತಲೆದೂಗಿದೆ. ನಂತರ ಅವರು ಗುರುವಾರ, ಡಿಸೆಂಬರ್ 21ನೇ ತಾರೀಖು ಚಾಮುಂಡಿಬೆಟ್ಟದಲ್ಲಿರುವ ಚಾಮುಂಡೇಶ್ವರಿ ತಾಯಿ ಆವಾಹನೆಯಾಗಿ ಆಶೀರ್ವದಿಸಿದ್ದರ ಬಗ್ಗೆ ತಿಳಿಸಿದರು.

ಅವರಿಗೆ ಮೈಸೂರು ನಗರದಲ್ಲಿರುವ ಶಾಲೆಯನ್ನು ದೂರದ ಹಚ್ಚ ಹಸಿರಿನ ನಡುವೆ ಹಳ್ಳಿಯಲ್ಲಿ ಎಲ್ಲಾದರೂ ಸ್ಥಾಪನೆ ಮಾಡಬೇಕು ಎಂದು ಮನಸ್ಸಾಗಿತ್ತಂತೆ. ಅದಕ್ಕಾಗಿ ಕೆಲವು ಎಕರೆ ಭೂಮಿಯನ್ನು ಕೂಡ ಗುರುತಿಸಿದ್ದರಂತೆ. ಆದರೆ ಯಾವುದೋ ಕಾರಣಕ್ಕೆ ಅದು ಸಾಧ್ಯವಾಗಲಿಲ್ಲ. ಹಾಗಾಗಿ ಅವರು ಚಾಮುಂಡೇಶ್ವರಿ ದೇವಿಯಲ್ಲಿ ಪ್ರಾರ್ಥನೆ ಸಲ್ಲಿಸಿದ್ದರಂತೆ.

"ನಾನು ಪ್ರಾರ್ಥಿಸುತ್ತಿದ್ದಂತೆ ಒಂದು ಧ್ವನಿ ಕೇಳಿಸಿತು. ಅದು ದೇವಿಯ ಧ್ವನಿಯಾಗಿತ್ತು. 'ನನ್ನನ್ನು ಏಕೆ ಕೇಳುತ್ತೀಯಾ, ನೀನೇ ಸಂಕಲ್ಪ ಮಾಡಿಕೊ, ನೆರವೇರುತ್ತದೆ' ಎಂದು ದೇವಿ ತಿಳಿಸಿದಳು".

ಕೆಬಿಜಿ : ನಿಮಗೆ ಆ ಚಾಮುಂಡೇಶ್ವರಿ ದೇವಿಯೇ ಈ ರೀತಿ ಹೇಳಿದರು ಎಂದು ಹೇಳುತ್ತೀರಾ? ದೇವಿಯ ಈ ಧ್ವನಿಯನ್ನು ನೀವು ಕಿವಿಯಾರೆ ಕೇಳಿದ್ದೀರಾ?

"ಹೌದು, ನನಗೆ ದೇವಿಯ ಧ್ವನಿ ಕೇಳಿಸಿತು. ನಾನು ಸಂಕಲ್ಪ ಮಾಡಿದೆ. ಇವತ್ತು ಬೆಳಗ್ಗೆ ನನಗೆ ಒಂದು ದೂರವಾಣಿ ಕರೆ ಬಂತು. ಒಬ್ಬ ದುಬೈ ಭಕ್ತ ಆ ಶಾಲೆಯನ್ನು ಇಪ್ಪತ್ತು ಕೋಟಿ ವೆಚ್ಚದಲ್ಲಿ ನಿರ್ಮಿಸಲು ನಿರ್ಧರಿಸಿರುವುದಾಗಿ ಹೇಳಿದ. ಆತ ಆ ಕಾರ್ಯಕ್ಕಾಗಿ ತನ್ನ ಷೇರುಗಳನ್ನು ಮಾರಿ ಹಣ ಹೊಂದಿಸುತ್ತೇನೆ ಎಂದು ಹೇಳಿದ."

ನಾನು ಮೂಕವಿಸ್ಮಿತನಾದೆ. ಭಾಮಿಶೆಣೈಯವರು ಕೂಡ. ನನಗೆ ಪ್ರೊ. ಶಶಿಧರ ಪ್ರಸಾದ್‌ರಿಗೆ ಏನನಿಸಿತೋ ಎಂಬುದರ ಬಗ್ಗೆ ಗೊತ್ತಿಲ್ಲ. ಏಕೆಂದರೆ ಅವರು ಪುಟ್ಟಪರ್ತಿ ಸತ್ಯ ಸಾಯಿ ಬಾಬಾರ ಜೊತೆ ಮತ್ತು ಸದ್ಗುರು ಅವರೊಡನೆ ಇರುವಾಗ ಇಂತಹ ಪವಾಡಗಳನ್ನು ನೋಡಿರಬೇಕು. ಅಸ್ತಿತ್ವವಾದದ ಸತ್ಯ (Existential Truth)ಏನೇ ಇರಬಹುದು. ಆದರೆ ನನಗಂತೂ ಸಂತೋಷ ವಾಯಿತು. ನಮ್ಮ ಮೈಸೂರು ಜಿಲ್ಲೆ ಸನಾತನ ಧರ್ಮ ಮತ್ತು ಜಾತ್ಯಾ ತೀತ ಶಿಕ್ಷಣ ಈ ಎರಡನ್ನು ಬೋಧಿಸು ವಂತಹ ಒಂದು ಶಿಕ್ಷಣ ಸಂಸ್ಥೆಯನ್ನು ಹೊಂದುವಂತಹ ಕಾರಣಕ್ಕೆ.

ನನಗೆ ಅವರ ಗುರುಗಳಾದ ಶ್ರೀ ಸತ್ಯ ಸಾಯಿಬಾಬಾರ ಪವಾಡಗಳು ಮತ್ತು ಅದರ ಹಿಂದಿನ ಶಕ್ತಿಯ ಬಗ್ಗೆ ಕೇಳುವುದಿತ್ತು. ಅದು ಚಮತ್ಕಾರವೋ ಅಥವಾ ದೈವಿಕವೋ? ಆದರೆ ಸಮಯವಿರಲಿಲ್ಲ.

ಸಮಯಾವಕಾಶ ದೊರೆತಾಗಲೆಲ್ಲಾ ಶ್ರೀ ಸತ್ಯ ಸಾಯಿಬಾಬಾ ಅವರ ಬಗ್ಗೆ ನಾನು ಈ ಅಂಕಣದಲ್ಲಿ ಹಲವಾರು ಬಾರಿ ಬರೆದಿದ್ದೇನೆ. ವಿಭೂತಿ (ಪವಿತ್ರ ಭಸ್ಮ), ಉಂಗುರ, ಸರ ಇತ್ಯಾದಿಗಳನ್ನು ಸೃಷ್ಟಿಸುವುದರಲ್ಲಿ ಅವರ ಅತೀಂದ್ರಿಯ ಶಕ್ತಿಯ (Mystical Power) ಬಗ್ಗೆ ಇಡೀ ಪ್ರಪಂಚಕ್ಕೆ ಗೊತ್ತು. (ಅಂದ ಹಾಗೆ, ವಿಚಾರವಾದಿಗಳು ಅದನ್ನು ನಂಬಿರಲಿಲ್ಲ).

ಶ್ರೀ ಮಧುಸೂದನ ಸಾಯಿ ಅವರಿಗೆ ಆ ಅತೀಂದ್ರಿಯ ಶಕ್ತಿ ಇರುವುದೇ ಎಂಬ ಕುತೂಹಲ ನನಗೆ. ಮುಂದಿನ ಬಾರಿ ಭೇಟಿ ಮಾಡಿದಾಗ ತಿಳಿದುಕೊಳ್ಳುವೆನು. ಹೇಗೂ ತಮ್ಮ ಎಲ್ಲಾ ಜಾಗತಿಕ ಸೇವೆಗಳಿಗೆ ಮುಖ್ಯ ಕೇಂದ್ರವಾಗಿರುವ ಬೆಂಗಳೂರಿನ ವಿಮಾನ ನಿಲ್ದಾಣದ ಬಳಿ ಇರುವ ಮುದ್ದೇನಹಳ್ಳಿಗೆ ಬರಲು ಅವರು ನನಗೆ ಆಹ್ವಾನ ನೀಡಿರುವುದರಿಂದ ಶೀಘ್ರ ಭೇಟಿ ನೀಡಬಹುದು.

ನಾನು ನನ್ನ ಆಸನದಿಂದ ಎದ್ದೆ. ಅವರೂ ಸಂದರ್ಶನವನ್ನು ಅಲ್ಲಿಗೆ ಮೊಟಕುಗೊಳಿಸಿದರು. ಹೆಲಿಕಾಪ್ಟರ್ ಬೇರೆ ಕಾಯುತ್ತಿತ್ತು. ಸದ್ಗುರುಗಳ ಜೊತೆ ಕೆಲವು ಫೋಟೋ ತೆಗೆಸಿಕೊಂಡ ನಂತರ ನಾನು ಅಲ್ಲಿಂದ ಹೊರಟೆ.

ಸದ್ಗುರುಗಳನ್ನು ಮಾಧ್ಯಮಗಳು, ಅವರ ಭಕ್ತರು ಶಿಕ್ಷಣ, ಮಕ್ಕಳ ಪೋಷಣೆ ಮತ್ತು ಆರೋಗ್ಯದ ಜಾಗತಿಕ ಕಾರ್ಯ ಯೋಜನೆಗಳ ಆಧ್ಯಾತ್ಮಿಕ ಮತ್ತು ಸಾಮಾಜಿಕ ನಾಯಕ ಎಂದು ಬಣ್ಣಿಸುತ್ತಾರೆ.

ನಾನು 1900ರ ಆರಂಭದ ದಿನಗಳ ಸಕಾರಾತ್ಮಕ ಯುವ ಅಭಿವೃದ್ಧಿಯನ್ನು ಆಯೋಜಿಸಿದ್ದ ಅಮೇರಿಕದ 4–ಹೆಚ್ ಕಾರ್ಯಕ್ರಮವನ್ನು ನೆನಪಿಸಿಕೊಂಡೆ. (Development of Head, Heart, Hand and Health) ಅದರರ್ಥ ತಲೆ–ಹೃದಯ–ಕೈಗಳು–ಆರೋಗ್ಯ.

ಸದ್ಗುರುಗಳ ಕಾರ್ಯ ಯೋಜನೆಯು ಅದೇ ರೀತಿಯದು ಎಂದು ನಾನು ಅಂದುಕೊಂಡಿದ್ದೇನೆ. ಒಂದು ವ್ಯತ್ಯಾಸವೆಂದರೆ, ಅವರು ಈ ಸನಾತನ ದೇಶದ ಧಾರ್ಮಿಕ ಮೌಲ್ಯಗಳಿಗೆ ಸಮನಾದ ಪ್ರಾಮುಖ್ಯತೆ ಕೊಡುತ್ತಾರೆ. ಅದು ಹಾಗಿದ್ದಲ್ಲಿ ತುಂಬಾ ಸಂತೋಷ.

ಓಂ ತತ್ ಸತ್

(ಮುಗಿಯಿತು)

(ಇಂಗ್ಲೀಷ್ ಮೂಲ ಲೇಖನದ ಕನ್ನಡಾನುವಾದ)

email:
voice@starofmysore.com

ರಾಜ್ಯ ರಸ್ತೆ ಸಾರಿಗೆಯಲ್ಲಿ ಕ್ರಾಂತಿಕಾರಿ ಸುಧಾರಣೆಗೆ ನಾಂದಿ

'2024 ಪ್ರಯಾಣಿಕ ಸ್ನೇಹಿ ವರ್ಷ: ಕೆಎಸ್‌ಆರ್‌ಟಿಸಿ ಎಂಡಿ

ಮೈಸೂರು, ಜ.1(ಎಸ್‌ಪಿಎನ್)– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 2024ನೇ ವರ್ಷವನ್ನು 'ಪ್ರಯಾಣಿಕ ಸ್ನೇಹಿ ವರ್ಷ' ಎಂದು ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಸೋಮವಾರ ಘೋಷಿಸಿದ್ದಾರೆ.

ಈಗಾಗಲೇ 'ಪ್ರಯಾಣಿಕ ಸ್ನೇಹಿ ವರ್ಷ' ಘೋಷಣೆಯಂತೆ 2024ರ ಜ.1ರಿಂದ ಜಾರಿಗೆ ಬಂದಿದ್ದು ಅಪಘಾತ ಪರಿಹಾರ ವಿಮಾ ಯೋಜನೆಯಡಿ ಮೃತ ಪ್ರಯಾಣಿಕರ ಅವಲಂಬಿತರಿಗೆ ನೀಡುತ್ತಿದ್ದ ಪರಿಹಾರ ಮೊತ್ತವನ್ನು 3 ಲಕ್ಷದಿಂದ 10 ಲಕ್ಷ ರೂ.ಗಳಿಗೆ ಹೆಚ್ಚಳ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಸಕ್ತ ವರ್ಷದಲ್ಲಿ 2 ಸಾವಿರ ಹೊಸ ಬಸುಗಳು ಸೇರ್ಪಡೆಯಾಗಲಿದ್ದು, ಇದರಲ್ಲಿ 'ಅಂಬಾರಿ ಉತ್ಸವ್'–20, 'ಐರಾವತ ಕ್ಲಬ್ ಕ್ಲಾಸ್'– 20, ಪಲ್ಲಕ್ಕಿ–100, 'ಪಾಯಿಂಟ್–ಟು–ಪಾಯಿಂಟು' ಹೊಸ ವಿನ್ಯಾಸದ ಬಸ್ಸುಗಳು –1000 ಹಾಗೂ 500 ಎಲೆಕ್ಟ್ರಿಕ್ ಬಸ್ಸುಗಳು ಸೇರ್ಪಡೆಗೊಳಿಸಿ, ಕೆಎಸ್‌ಆರ್‌ಟಿಸಿಯನ್ನು ಮತ್ತಷ್ಟು ಜನಸ್ನೇಹಿಯಾಗಿಸಲಾಗುವುದು.



ಪ್ರಸ್ತುತ ಪರಿಚಯಿಸಲಾಗಿರುವ 20ಕ್ಕೂ ಹೆಚ್ಚು 'ನಮ್ಮ ಕಾರ್ಗೋ ಟ್ರಕ್'ಗಳನ್ನು ವರ್ಷಾಂತ್ಯಕ್ಕೆ 500ಕ್ಕೆ ಹೆಚ್ಚಿಸಲಾಗುವುದು. ಮಾಹಿತಿ ತಂತ್ರಜ್ಞಾನವನ್ನು ಆಧುನೀಕರಣಗೊಳಿಸಿ, ಪ್ರಯಾಣಿಕರ ಅನುಕೂಲಕ್ಕಾಗಿ ವಿಟಿಎಂಎಸ್ ಕಾರ್ಡ್ ಜಾರಿಗೊಳಿಸಿ, ನಗದು ರಹಿತ ಸೇವೆಗೆ ಒತ್ತು ನೀಡಲಾಗಿದೆ. ಅಲ್ಲದೆ, ಸಾವಿರ ವಾಹನಗಳ ಪುನಶ್ಚೇತನ ಯೋಜನೆಯ ಗುರಿ ನಿಗದಿಪಡಿಸಲಾಗಿದೆ ಎಂದಿದ್ದಾರೆ.

ತರಬೇತಿ ಆಯೋಜನೆ: ಚಾಲನಾ ಸಿಬ್ಬಂದಿ ಪ್ರಯಾಣಿಕರೊಂದಿಗೆ ಸೌಜನ್ಯದೊಂದಿಗೆ ವರ್ತಿಸುವ ಕುರಿತು ನುರಿತ ತರಬೇತುದಾರರಿಂದ ತರಬೇತಿ ಹಾಗೂ ಅಪಘಾತ/ಸಂಚಾರ ನಿಯಮ ಪಾಲನೆ ಸಂಬಂಧ ಸಿಬ್ಬಂದಿಗೆ ನಿರಂತರ ಕಾರ್ಯಾಗಾರ, ಬಸ್ಸುಗಳ ಸ್ವಚ್ಛತೆ ಹಾಗೂ ಯಾಂತ್ರಿಕ ನಿರ್ವಹಣೆಗೆ ಒತ್ತು ನೀಡಲಾಗಿದೆ ಎಂದು ಹೇಳಿದ್ದಾರೆ.

ಪ್ರಶಸ್ತಿಗಳು ಗ್ರಾಹಕರಿಗೆ ಸಮರ್ಪಣೆ: ಉತ್ತಮ ಸಾರಿಗೆ ವ್ಯವಸ್ಥೆಗಾಗಿ 2023ನೇ ಸಾಲಿನಲ್ಲಿ ಸಂಸ್ಥೆ 50ಕ್ಕೂ ಅಧಿಕ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪುರಸ್ಕಾರಗಳನ್ನು ಪಡೆದಿದ್ದು, ಈ ಪ್ರಶಸ್ತಿಗಳನ್ನು ನಿಗಮದ ಸಿಬ್ಬಂದಿ ಹಾಗೂ ಪ್ರಯಾಣಿಕರಿಗೆ ಸಮರ್ಪಿಸಲಾಗಿದ್ದು, ನಿಗಮವು ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಯನ್ನು ಹೊಂದಿ, ಸಾರ್ವಜನಿಕರಿಗೆ ಉತ್ತಮ ಸೌಲಭ್ಯ ನೀಡಲಿದೆ ಎಂದು ಭರವಸೆ ನೀಡಿದ್ದಾರೆ.

ಅವಲಂಬಿತರಿಗೆ ವಿಮಾ ಹಣ ವಿತರಣೆ: ಈ ಹಿಂದೆ 2023ರ ವರ್ಷವನ್ನು ಕಾರ್ಮಿಕ ಕಲ್ಯಾಣ ವರ್ಷ' ವೆಂದು ಘೋಷಿಸಿ, ಹಲವು ಕಾರ್ಮಿಕ ಪರ ಯೋಜನೆಗಳನ್ನು ನಿಗಮದಲ್ಲಿ ಜಾರಿಗೊಳಿಸಲಾಗಿದೆ. ಒಂದು ಕೋಟಿ ರೂ. ವೆಚ್ಚದಲ್ಲಿ ಆನ್ ರೋಡ್–ಆಫ್ ರೋಡ್ ಅಪಘಾತ ವಿಮಾ ಯೋಜನೆ ಜಾರಿಗೊಳಿಸಿ, ಈ ಯೋಜನೆಯಡಿಯಲ್ಲಿ ಈಗಾಗಲೇ 12 ಮೃತ ಸಿಬ್ಬಂದಿಯ ಅವಲಂಬಿತರಿಗೆ ತಲಾ ಕೋಟಿ ರೂ ವಿಮಾ ಹಣವನ್ನು ನೀಡಲಾಗಿದೆ

3345 ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಪಾವತಿ: ನಿಗಮದ ಸಿಬ್ಬಂದಿಯ ಮಕ್ಕಳಿಗೆ ವಿದ್ಯಾರ್ಥಿ ವೇತನ ಮೊತ್ತವನ್ನು 3ರಿಂದ 5 ಪಟ್ಟು ಹೆಚ್ಚಳ ಮಾಡಲಾಗಿದೆ. ಹೊಸ ಕೋರ್ಸ್‌ಗಳನ್ನು ಸೇರ್ಪಡೆಗೊಳಿಸಿ, ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೆ ತಂದು ವಿದ್ಯಾಚೇತನ ಯೋಜನೆಯಡಿ 3345 ಮಕ್ಕಳಿಗೆ 1.67 ಕೋಟಿ ರೂ. ವಿದ್ಯಾರ್ಥಿ ವೇತನವನ್ನು ಪಾವತಿಸಲಾಗಿದೆ. ಅಂತೆಯೇ ಸಾರಿಗೆ ಸಿಬ್ಬಂದಿಯ ಆರೋಗ್ಯಕ್ಕೆ ಪ್ರಾಮುಖ್ಯತೆ ನೀಡುವ ಸದುದ್ದೇಶದಿಂದ ಜಯದೇವ ಹೃದ್ರೋಗ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು, 10ಕ್ಕಿಂತ ಹೆಚ್ಚಿನ ಹೃದಯ ಸಂಬಂಧಿ ಪರೀಕ್ಷೆಗಾಗಿ ಪ್ರತಿ ವರ್ಷ 2.55 ಕೋಟಿಗಳನ್ನು ಪಾವತಿಸುತ್ತಿದೆ. ಇದರಿಂದ ಸುಮಾರು 21 ಸಿಬ್ಬಂದಿಗಳಿಗೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

10364 ಶಿಸ್ತು ಪ್ರಕರಣಗಳು ಇತ್ಯರ್ಥ: ಕಾರ್ಮಿಕರ ಕುಟುಂಬ ಕಲ್ಯಾಣ ಯೋಜನೆಯಡಿ ಪರಿಹಾರ ಮೊತ್ತವನ್ನು 3ರಿಂದ 10 ಲಕ್ಷಗಳಿಗೆ ಹೆಚ್ಚಳ ಹಾಗೂ 10364 ಸಾರಿಗೆ ನೌಕರರ ಮೇಲಿನ ಶಿಸ್ತು ಪ್ರಕರಣಗಳನ್ನು ಅತೀ ಕಡಿಮೆ ಮೊತ್ತದ ದಂಡವನ್ನು ವಿಧಿಸಿ ಮನ್ನಾ ಮಾಡಲಾಗಿದೆ. ಅಲ್ಲದೆ, 10 ತಿಂಗಳಿಗಿಂತ ಕಡಿಮೆ ಗೈರು ಹಾಜರಿ ಪ್ರಕರಣಗಳಲ್ಲಿ 425ಕ್ಕೂ ಹೆಚ್ಚು ಚಾಲಕರಿಗೆ ಕರ್ತವ್ಯಕ್ಕೆ ಮರಳಲು ಅವಕಾಶ ನೀಡಲಾಗಿದೆ.

ಅರ್ಹ ನೌಕರರಿಗೆ ಹೆಚ್ಚುವರಿ ಪಿಂಚಣಿ: ನಿಗಮದ ನೌಕರರು ಸುದೀರ್ಘ ಕಾಲ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ ಅರ್ಹ ನೌಕರರಿಗೆ ಹೆಚ್ಚುವರಿ ಪಿಂಚಣಿ ಸೌಲಭ್ಯವನ್ನು ಒದಗಿಸುತ್ತಿದ್ದು, ಇದಕ್ಕೆ ತಗಲುವ ಪಿಂಚಣಿ ಮೊತ್ತ ಅಂದಾಜು 1,650ಕೋಟಿ ರೂ.ಗಳನ್ನು ಪಾವತಿಸುವ ಕುರಿತು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಮಂಗಳವಾರ 2 ಜನವರಿ 2024

ಮೈಸೂರಿಗೆ ದಾಖಲೆ ಪ್ರಮಾಣದಲ್ಲಿ ಪ್ರವಾಸಿಗರ ಭೇಟಿ

ಅರಮನೆಗೆ 1.84 ಲಕ್ಷ, ಮೃಗಾಲಯಕ್ಕೆ 2.28 ಲಕ್ಷ ಮಂದಿ ಆಗಮನ





ಮೈಸೂರು, ಜ.1(ಬಿಎಲ್‌ಯು)– ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆಯ ಸಂದರ್ಭವಾದ ಡಿಸೆಂಬರ್ ತಿಂಗಳ ಕೊನೆ ವಾರದಲ್ಲಿ ಮೈಸೂರು ಅರಮನೆಗೆ 1.84 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದಾರೆ. ಈ ಸಂಖ್ಯೆಯನ್ನು ಮೈಸೂರು ಮೃಗಾಲಯ ಹಿಂದಿಕ್ಕಿದ್ದು, ಅಲ್ಲಿಗೆ 2.28 ಲಕ್ಷ ಪ್ರವಾಸಿಗರು ಹೋಗಿದ್ದಾರೆ. ಇದೇ ವೇಳೆ ಕೃಷ್ಣರಾಜಸಾಗರಕ್ಕೂ ಸಾಗರೋಪಾದಿಯಲ್ಲಿ ಪ್ರವಾಸಿಗರು ಭೇಟಿ ಕೊಟ್ಟಿದ್ದಾರೆ. ಈ ಮೂಲಕ ಕಳೆದ ವರ್ಷಕ್ಕಿಂತ ಈ ಬಾರಿ ದಾಖಲೆ ಪ್ರಮಾಣದಲ್ಲಿ ಪ್ರವಾಸಿಗರು ಮೈಸೂರಿಗೆ ಆಗಮಿಸಿದ್ದಾರೆ.

ಈ ಮೊದಲು ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ 11 ದಿನದ ಅವಧಿಯಲ್ಲಿ ಹೆಚ್ಚಿನ ಪ್ರವಾಸಿಗರು ಮೈಸೂರಿಗೆ ಬರುತ್ತಿದ್ದರು. ಇದರ ಹೊರತು ಉಳಿದ ಸಮಯದಲ್ಲಿ ಮೈಸೂರಿಗೆ ಪ್ರವಾಸಿಗರ ಆಗಮನ ಸರ್ವೆ ಸಾಮಾನ್ಯವಾಗಿರುತ್ತಿತ್ತು. ಆದರೆ ಈಗ ಮೈಸೂರಿಗೆ ಪ್ರವಾಸಿಗರು ಆಗಮಿಸುವ ಟ್ರೆಂಡ್ ಬದಲಾಗಿದೆ. ದಸರಾ ಸಮಯದ ಜೊತೆಗೆ ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಸಂದರ್ಭದಲ್ಲಿ ದಾಖಲೆ ಪ್ರಮಾಣದಲ್ಲಿ ಪ್ರವಾಸಿಗರು ಮೈಸೂರಿಗೆ ಬರುತ್ತಿದ್ದಾರೆ. ಮೈಸೂರು ಅರಮನೆ ಹಾಗೂ ಮೃಗಾಲಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸಿರುವುದು ಇದಕ್ಕೆ ಸ್ಪಷ್ಟ ನಿದರ್ಶನ.

- ದಸರಾ ಜೊತೆಗೆ ಡಬಲ್ ಧಮಾಕ
- ವ್ಯಾಪಾರಸ್ಥರಿಗೆ ಭರ್ಜರಿ ವಹಿವಾಟು
- ಕೇರಳದತ್ತ ಮುಖ ಮಾಡದ ಪ್ರವಾಸಿಗರು

ಕ್ರಿಸ್‌ಮಸ್ ಹಬ್ಬಕ್ಕೆ ಎರಡು ದಿನ ಇರುವಂತೆ ಭಾರಿ ಪ್ರಮಾಣದಲ್ಲಿ ಪ್ರವಾಸಿಗರು ಮೈಸೂರಿಗೆ ಬಂದಿದ್ದಾರೆ. ಈ ವೇಳೆ ಅರಮನೆಗೆ ಪ್ರವಾಸಿಗರು ಭೇಟಿ ನೀಡಿರುವ ಕುರಿತಂತೆ ಅರಮನೆ ಮಂಡಳಿ ಅಂಕಿ ಅಂಶಗಳ ವಿವರ ನೀಡಿದೆ.

ಡಿಸೆಂಬರ್ 23ರಂದು 26,111, ಡಿಸೆಂಬರ್ 24 ರಂದು 33,854, ಡಿಸೆಂಬರ್ 25ರಂದು 30,957, ಡಿಸೆಂಬರ್ 26ರಂದು 23,903, ಡಿಸೆಂಬರ್ 27ರಂದು 22,048, ಡಿಸೆಂಬರ್ 28 ರಂದು 24,394 ಹಾಗೂ ಡಿಸೆಂಬರ್ 29ರಂದು 22,740 ಪ್ರವಾಸಿಗರು ಆಗಮಿಸಿದ್ದಾರೆ.

ಆದರೆ ಡಿಸೆಂಬರ್ 30 ಮತ್ತು 31ರಂದು ಒಂದು ವಾರದ ಸಂಖ್ಯೆ ಮೀರಿ ಅರಮನೆಗೆ ಆಗಮಿಸಿದ್ದಾರೆ. ಆದರೆ ಆ ಲೆಕ್ಕವನ್ನು ಅರಮನೆ ಮಂಡಳಿ ಇನ್ನು ಕೊಟ್ಟಿಲ್ಲ. ಹೊಸ ವರ್ಷದ ಎರಡು ದಿನ ಮೊದಲು ಅರಮನೆಯಲ್ಲಿ ಕಾಲಿಡಲು ಸಾಧ್ಯವಿಲ್ಲದಷ್ಟು ಜನರಿದ್ದರು. ಇದರಿಂದ ಕಳೆದ ವರ್ಷದ ದಾಖಲೆ ಮೀರಿ ಪ್ರವಾಸಿಗರು ಆಗಮಿಸಿದ್ದಾರೆ.

ಒಟ್ಟಾರೆ ಮೈಸೂರಿಗೆ ದಾಖಲೆಗೂ ಪ್ರಮಾಣದಲ್ಲಿ ಪ್ರವಾಸಿಗರು ಆಗಮಿಸಿದ ಹಿನ್ನೆಲೆ ದೊಡ್ಡ ಪ್ರಮಾಣದ ವ್ಯಾಪಾರಿಗಳಿಂದ ಸಣ್ಣ ಪುಟ್ಟ ವ್ಯಾಪಾರಿಗಳಿಗೆ ಭರ್ಜರಿ ವ್ಯಾಪಾರವಾಗಿದೆ. ಮೈಸೂರಿಗೆ ಭೇಟಿ ನೀಡಿರುವ ಬಹಳಷ್ಟು ಪ್ರವಾಸಿಗರು ಸರ್ಕ್ಯೂಟ್ ಟೂರ್ ಪ್ಲಾನ್ ಮಾಡಿಕೊಂಡು ಬಂದಿದ್ದಾರೆ. ಮೊದಲು ಮೈಸೂರಿನ ಪ್ರವಾಸಿ ತಾಣಗಳನ್ನು ವೀಕ್ಷಣೆ ಮಾಡಿದ ನಂತರ ಬಂಡೀಪುರ, ತಮಿಳುನಾಡಿನ ಮಧುಮಲೈ, ಊಟಿ ಹಾಗೂ ಕೊಡೆಕ್ಕೆನಾಲ್‌ಗೆ ಹೋಗಿದ್ದಾರೆ. ಆದರೆ ಮೈಸೂರು ಮಾರ್ಗವಾಗಿ ಕೇರಳಾಗೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆಯಲ್ಲಿ ಭಾರೀ ಇಳಿಕೆಯಾಗಿದೆ. ಕೇರಳದಲ್ಲಿ ಕೊರೊನಾ ಇರುವ ಹಿನ್ನೆಲೆಯಲ್ಲಿ ಪ್ರವಾಸಿಗರು ಕೇರಳಾದತ್ತ ಮುಖ ಮಾಡಿಲ್ಲ. ಆದರೂ ಧೈರ್ಯ ಮಾಡಿ ಕೆಲ ಪ್ರವಾಸಿಗರು ವೈಯನಾಡ್ ಸುತ್ತಮುತ್ತಲಿನ ರೆಸಾರ್ಟ್‌ಗಳಿಗೆ ತೆರಳಿದ್ದಾರೆ.

ಶುಲ್ಕ ಪಾವತಿಸಿ ಅರಮನೆ ಒಳಗೆ ಪ್ರವೇಶ ನೀಡಿದ ಅಂಕಿ ಅಂಶಗಳನ್ನು ಮಾತ್ರ ಮೈಸೂರು ಅರಮನೆ ಮಂಡಳಿ ನೀಡಿದೆ. ಆದರೆ ಉಚಿತ ಪ್ರವೇಶವಿರುವ ಫಲಪುಷ್ಪ ಪ್ರದರ್ಶನ ಹಾಗೂ ದೀಪಾಲಂಕಾರ ವೀಕ್ಷಿಸಿರುವ ಸಂಖ್ಯೆಗೆ ಲೆಕ್ಕವಿಲ್ಲ. ಇದನ್ನು ಅಂದಾಜಿಸಿದರೆ ಮೈಸೂರು ಅರಮನೆಗೆ ನಿರೀಕ್ಷೆಗೂ ಮೀರಿ ಅಪಾರ ಪ್ರವಾಸಿಗರು ಭೇಟಿ ನೀಡಿದ್ದಾರೆ.

ಪ್ರವಾಸಿಗರ ಸಂಖ್ಯೆಯಲ್ಲಿ ಮೈಸೂರಿನ ಚಾಮರಾಜೇಂದ್ರ ಮೃಗಾಲಯ ಅರಮನೆಯ ದಾಖಲೆಯನ್ನು ಹಿಂದಿಕ್ಕಿದೆ. ಡಿಸೆಂಬರ್ 25 ರಂದು 25,860, ಡಿಸೆಂಬರ್ 26 ರಂದು 40,761, ಡಿಸೆಂಬರ್ 27 ರಂದು 28,425, ಡಿಸೆಂಬರ್ 28 ರಂದು 29,906, ಡಿಸೆಂಬರ್ 29 ರಂದು 26,450 ಹಾಗೂ ಡಿಸೆಂಬರ್ 30 ರಂದು 27,092 ಪ್ರವಾಸಿಗರು ಭೇಟಿ ನೀಡಿದ್ದಾರೆ. ಈ ಮೂಲಕ ಡಿಸೆಂಬರ್ 23ರಿಂದ ಡಿಸೆಂಬರ್ 30 ರವರೆಗೆ ಮೈಸೂರು ಮೃಗಾಲಯಕ್ಕೆ 2.28,314 ಪ್ರವಾಸಿಗರು ಆಗಮಿಸಿದ್ದಾರೆ.

ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಒಂದು ವಾರದ ಅವಧಿಯಲ್ಲಿ ಚಾಮುಂಡಿಬೆಟ್ಟಕ್ಕೆ ಕೂಡ ಪ್ರವಾಸಿಗರು ದಾಖಲೆ ಪ್ರಮಾಣದಲ್ಲಿ ಆಗಮಿಸಿದ್ದಾರೆ. ನಾಡದೇವತೆ ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯಲು ಗಂಟೆಗಟ್ಟಲೆ ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದಿದ್ದಾರೆ.

ಮೈಸೂರಿನ ಪ್ರವಾಸಿ ತಾಣಕ್ಕೆ ಹೊಂದಿಕೊಂಡಂತಿರುವ ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರ ಜಲಾಶಯಕ್ಕೆ ಕೂಡ ಪ್ರವಾಸಿಗರು ಹೆಚ್ಚಿನ ಪ್ರಮಾಣದಲ್ಲಿ ಭೇಟಿ ನೀಡಿದ್ದಾರೆ.

ಕೃಷ್ಣರಾಜ ಸಾಗರಕ್ಕೆ ಡಿಸೆಂಬರ್ 25ರಿಂದ ಡಿಸೆಂಬರ್ 30ರವರೆಗೆ 23,714 ವಯಸ್ಕರು ಭೇಟಿ ನೀಡಿದ್ದು, 11,85, 700 ಶುಲ್ಕ ವಸೂಲಾಗಿದೆ. ಇನ್ನು ಇದೇ ಅವಧಿಯಲ್ಲಿ 33,068 ಮಕ್ಕಳಿಂದ 3,30,680 ರೂಪಾಯಿ ಶುಲ್ಕ ಸಂಗ್ರಹವಾಗಿದೆ. ವಿನಾಯಿತಿ ಪಡೆಯುವ ಶಾಲಾ ಮಕ್ಕಳು 31,228 ಭೇಟಿ ನೀಡಿದ್ದು, ಇವರಿಂದ 1,56,140 ರೂ ಸಂಗ್ರಹವಾಗಿದೆ. ಮಳೆ ನಿಂತರೂ ಹನಿ ನಿಲ್ಲುವುದಿಲ್ಲ ಎಂಬಂತೆ ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಮುಗಿದರೂ ಮೈಸೂರು ಸೇರಿದಂತೆ ಸುತ್ತಮುತ್ತಲ ಪ್ರವಾಸಿ ತಾಣಗಳಿಗೆ ಪ್ರವಾಸಿಗರು ಇನ್ನು ಆಗಮಿಸುತ್ತಲೇ ಇದ್ದಾರೆ.

ನಿರೀಕ್ಷೆಗೂ ಮೀರಿ ಮೈಸೂರಿಗೆ ಪ್ರವಾಸಿಗರು ಆಗಮಿಸುತ್ತಿರುವ ಕಾರಣ ಹೋಟೆಲ್‌ಗಳು ಭರ್ತಿಯಾಗಿವೆ. ನಿನ್ನೆ ತನಕ ಹೋಟೆಲ್‌ಗಳಲ್ಲಿ ರೂಮ್ ಸಿಗದೆ ಪ್ರವಾಸಿಗರು ಪರದಾಡಿದ ದೃಶ್ಯ ಸಾಮಾನ್ಯವಾಗಿತ್ತು. ಖಾಸಗಿ ಹೋಟೆಲ್‌ಗಳು ಮಾತ್ರವಲ್ಲದೆ ಮೈಸೂರಿನ ಎಲ್ಲಾ ಸರ್ಕಾರಿ ಅತಿಥಿ ಗೃಹಗಳ ರೂಮ್‌ಗಳು ಕೂಡ ಭರ್ತಿಯಾಗಿದ್ದವು. ಇದರಿಂದ ಊಟ–ತಿಂಡಿಗೂ ಹೋಟೆಲ್‌ಗಳಲ್ಲಿ ಕಾಲಿಡಲಾರದ ಪರಿಸ್ಥಿತಿ ಇತ್ತು. ಊಟ–ತಿಂಡಿ ಸೇವಿಸಿ ಒಂದು ತಂಡ ಮೇಲೇಳುತ್ತಿದ್ದಂತೆ ಮತ್ತೊಂದು ತಂಡ ಕಾಯುತ್ತಿದ್ದ ದೃಶ್ಯ ಕೂಡ ಕಂಡುಬಂತು.

ಮೈಸೂರಿನಲ್ಲಿ 26, ಮಂಡ್ಯದಲ್ಲಿ 22, ಚಾ.ನಗರದಲ್ಲಿ 12 ಮಂದಿಗೆ ಕೊರೊನಾ

ಮೈಸೂರು, ಜ.1(ಬಿಎಲ್‌ಯು)– ಮೈಸೂರಿನಲ್ಲಿ 26 ಜನರಿಗೆ ಕೊರೊನಾ ಸೋಂಕು ತಗುಲಿದ್ದು, ಇದರೊಂದಿಗೆ ಬೆಂಗಳೂರು ಬಿಟ್ಟರೆ ಹೆಚ್ಚು ಸೋಂಕಿತರಿರುವ 2ನೇ ಜಿಲ್ಲೆಯಾಗಿದೆ.



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಿಡುಗಡೆ ಮಾಡಿರುವ ಕೊರೊನಾ ಬುಲೆಟಿನ್ ವಿವರದಂತೆ ಮೈಸೂರು ಜಿಲ್ಲೆಯಲ್ಲಿ 443 ಜನರನ್ನು ಕೊರೊನಾ ಪರೀಕ್ಷೆಗೊಳಪಡಿಸಲಾಗಿತ್ತು. ಇವರಲ್ಲಿ 26 ಜನರಿಗೆ ಕೊರೊನಾ ಸೋಂಕು ತಗುಲಿದೆ.


ಕೊರೊನಾ ಸೋಂಕಿನಿಂದ ಕಳೆದ ವಾರ ಆಸ್ಪತ್ರೆಗೆ ದಾಖಲಾಗಿದ್ದ ಮೈಸೂರಿನ ಮೂವರು ಆಸ್ಪತ್ರೆಯಿಂದ ಇಂದು ಡಿಸ್ಚಾರ್ಜ್ ಆಗಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ 25 ಜನರನ್ನು ಕೊರೊನಾ ಪರೀಕ್ಷೆಗೊಳಪಡಿಸಲಾಗಿತ್ತು. ಇವರಲ್ಲಿ 22 ಜನರಲ್ಲಿ ಕೊರೊನಾ ಸೋಂಕಿರುವುದು ದೃಢಪಟ್ಟಿದೆ. ಆಸ್ಪತ್ರೆಗೆ ದಾಖಲಾಗಿದ್ದ 6 ಮಂದಿ ಚೇತರಿಸಿಕೊಂಡು ಡಿಸ್ಚಾರ್ಜ್ ಆಗಿದ್ದಾರೆ.

ಚಾಮರಾಜನಗರ ಜಿಲ್ಲೆಯಲ್ಲಿ 187 ಜನರಿಗೆ ಕೊರೊನಾ ಪರೀಕ್ಷೆ ಮಾಡಲಾಗಿತ್ತು. ಇವರಲ್ಲಿ 12 ಜನರಿಗೆ ಕೊರೊನಾ ಸೋಂಕಿರುವುದು ಪತ್ತೆಯಾಗಿದೆ. ಇನ್ನು ಕೊಡಗು ಜಿಲ್ಲೆಯಲ್ಲಿ 5 ಜನರನ್ನು ಕೊರೊನಾ ಪರೀಕ್ಷೆಗೊಳಪಡಿಸಲಾಗಿತ್ತು. ಆದರೆ ಯಾರಲ್ಲೂ ಕೊರೊನಾ ಸೋಂಕು ಪತ್ತೆಯಾಗಿಲ್ಲ. ಹಾಸನ ಜಿಲ್ಲೆಯಲ್ಲಿ 51 ಮಂದಿಗೆ ಕೊರೊನಾ ಪರೀಕ್ಷೆ ಮಾಡಲಾಗಿತ್ತು ಇವರಲ್ಲಿ 12 ಜನರಿಗೆ ಕೊರೊನಾ ಸೋಂಕಿರುವುದು ದೃಢಪಟ್ಟಿದೆ.

ಹೊಸ ವರ್ಷಾಚರಣೆ ವೇಳೆ ಸಾವಿರಾರು ಜನರು ಒಂದೆಡೆ ಸೇರಿರುವುದರಿಂದ ಕೊರೊನಾ ಸೋಂಕು ಹರಡಿರುವ ಸಾಧ್ಯತೆ ಇದೆ. ಮೂರ್ನಾಲ್ಕು ದಿನದ ನಂತರ ಮಾಹಿತಿ ತಿಳಿಯಲಿದೆ.

ಅಮಿತ್ ಶಾ ನೇತೃತ್ವದಲ್ಲಿ ಜಮ್ಮು–ಕಾಶ್ಮೀರ ಭದ್ರತೆ ಕುರಿತು ಇಂದು ಸಭೆ

ನವದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಂಗಳವಾರ ರಾಷ್ಟ್ರ ರಾಜಧಾನಿಯಲ್ಲಿ ಜಮ್ಮು ಮತ್ತು ಕಾಶ್ಮೀರ ಭದ್ರತೆ ಕುರಿತು ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಸುವ ಸಾಧ್ಯತೆಯಿದೆ.



ಸಭೆಯಲ್ಲಿ ಕಣಿವೆಯ ಕಾನೂನು ಮತ್ತು ಸುವ್ಯವಸ್ಥೆ ಕುರಿತು ಮತ್ತು ಭದ್ರತಾ ಗ್ರಿಡ್ ಹಾಗೂ ಶೂನ್ಯ ಭಯೋತ್ಪಾದನಾ ಯೋಜನೆಯಂತಹ ವಿಷಯಗಳ ಕುರಿತು ಚರ್ಚೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಮಧ್ಯಾಹ್ನ ನಡೆಯಲಿರುವ ಸಭೆಯಲ್ಲಿ, ಗೃಹ ಸಚಿವರು, ಭದ್ರತಾ ಗ್ರಿಡ್‌ನ ಕಾರ್ಯನಿರ್ವಹಣೆ ಮತ್ತು ಭದ್ರತೆಗೆ ಸಂಬಂಧಿಸಿದ ವಿವಿಧ ಅಂಶಗಳನ್ನು ಹಾಗೂ ಕೇಂದ್ರಾಡಳಿತ ಪ್ರದೇಶದ ಅಭಿವೃದ್ಧಿಗೆ ಸಂಬಂಧಿಸಿದ ಉಪಕ್ರಮಗಳನ್ನು ಪರಿಶೀಲಿಸಲಿದ್ದಾರೆ. ಪ್ರದೇಶ ಪ್ರಾಬಲ್ಯ ಯೋಜನೆ, ಶೂನ್ಯ ಭಯೋತ್ಪಾದನಾ ಯೋಜನೆ, ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ, ಯುಎಪಿಎಗೆ ಸಂಬಂಧಿಸಿದ ಪ್ರಕರಣಗಳು ಮತ್ತು ಇತರ ಭದ್ರತೆಗೆ ಸಂಬಂಧಿಸಿದ ವಿಷಯಗಳನ್ನು ಗೃಹ ಸಚಿವರು ಪರಿಶೀಲಿಸಲಿದ್ದಾರೆ ಎಂದು ತಿಳಿದುಬಂದಿದೆ.

ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ಮುಖ್ಯ ಕಾರ್ಯದರ್ಶಿ ಅಟಲ್ ಡುಲ್ಲೋ ಮತ್ತು ಪೊಲೀಸ್ ಮಹಾನಿರ್ದೇಶಕ ಆರ್ ಆರ್ ಸ್ವೈನ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ, ಇಂಟೆಲಿಜೆನ್ಸ್ ಬ್ಯೂರೋ ನಿರ್ದೇಶಕ ತಪನ್ ದೇಕಾ, ಕೇಂದ್ರ ಮೀಸಲು ಪೊಲೀಸ್ ಪಡೆ ಮತ್ತು ಗಡಿ ಭದ್ರತಾ ಪಡೆಗಳ ಪೊಲೀಸ್ ಮಹಾನಿರ್ದೇಶಕರು ಹಾಗೂ ಗೃಹ ಸಚಿವಾಲಯದ ಸಂಬಂಧಪಟ್ಟ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಮೈಸೂರಿನ ಬಿ.ಎಂ.ಶ್ರೀ ನಗರದ ಶ್ರೀ ಮಲೆಮಹದೇಶ್ವರ ಸ್ವಾಮಿ ಸೇವಾ ಸಮಿತಿ ವತಿಯಿಂದ ನಾಗಮಲೆಗೆ 13ನೇ ವರ್ಷದ ಪಾದಯಾತ್ರೆ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಸೋಮವಾರ ಸಂಜೆ ಬಡಾವಣೆ ಪ್ರಮುಖ ರಸ್ತೆಗಳಲ್ಲಿ ಶ್ರೀ ಮಹದೇಶ್ವರ ಸ್ವಾಮಿಯ 'ಹುಲಿ ವಾಹನ' ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು. ಮಂಗಳವಾರ ಮಧ್ಯಾಹ್ನ 12ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

ರಾಹುಲ್ ಗಾಂಧಿ ಮಹಾ ನಾಯಕರಲ್ಲ, ಹೆಚ್ಚು ಪ್ರಚಾರವೇಕೆ!?

ಕಾಂಗ್ರೆಸ್ ವಲಯದಲ್ಲಿ ಸಂಚಲನ ಸೃಷ್ಟಿಸಿದ ದಿಗ್ವಿಜಯ್ ಸಿಂಗ್ ಸಹೋದರನ ಹೇಳಿಕೆ

ನವದೆಹಲಿ: ರಾಹುಲ್ ಗಾಂಧಿ ಒಬ್ಬ ಸಾಮಾನ್ಯ ಸಂಸದರಾಗಿದ್ದು, ಮಾಧ್ಯಮಗಳು ಅವರ ಮಟ್ಟ ಮೀರಿ ಅವರನ್ನು ಹೈಲೈಟ್ ಮಾಡಬಾರದು ಎಂದು ಹಿರಿಯ ಕಾಂಗ್ರೆಸ್ ನಾಯಕ ಹಾಗೂ ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ದಿಗ್ವಿಜಯ್ ಸಿಂಗ್ ಸಹೋದರ ಲಕ್ಷ್ಮಣ್ ಸಿಂಗ್ ಹೇಳಿದ್ದಾರೆ.

ಗುಣಾದ ಕಾಂಗ್ರೆಸ್ ಕಚೇರಿಯಲ್ಲಿ ಮಾತನಾಡಿದ ಲಕ್ಷ್ಮಣ್ ಸಿಂಗ್, ಲೋಕಸಭೆಯಲ್ಲಿ ಘೋಷಣೆಗಳನ್ನು ಕೂಗಿದಾಗ ರಾಹುಲ್ ಮುಖವನ್ನು ಟಿವಿಯಲ್ಲಿ ಸ್ವಲ್ಪ ಸಮಯ ತೋರಿಸಿದ್ದರ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿ, ರಾಹುಲ್ ಗಾಂಧಿ ಕೇವಲ ಸಂಸದರಷ್ಟೇ, ಪಕ್ಷದ ಅಧ್ಯಕ್ಷರಲ್ಲ, ಕಾರ್ಯಕರ್ತ. ರಾಹುಲ್ ಗಾಂಧಿ ಬಗ್ಗೆ ಹೇಳಲು ಏನೂ ಇಲ್ಲ. ಮಾಧ್ಯಮಗಳು ಅವರನ್ನು ಹೈಲೈಟ್ ಮಾಡುವ ಅಗತ್ಯವಿಲ್ಲ. ಕೇವಲ ಸಂಸದರಾಗಿದ್ದು, ಪಕ್ಷದ ಇತರ ಸಂಸದರಿಗೆ ಸಮಾನರು. ಹುಟ್ಟಿನಿಂದಲೇ ಯಾರೂ ಪ್ರಸಿದ್ಧರಾಗಲ್ಲ. ಅವರ ಕಠಿಣ ಶ್ರಮ ಮತ್ತು ಜನರಲ್ಲಿ ಬೆರೆಯುವ ನಡವಳಿಕೆ ಮತ್ತು ವರ್ತನೆಗಳಿಂದ ವರ್ಚಸ್ಸು ಹೆಚ್ಚುತ್ತದೆ ಎಂದು ಐದು ಬಾರಿ ಸಂಸದ, ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಲಕ್ಷ್ಮಣ್ ಸಿಂಗ್ ಹೇಳಿದರು.



ಲಕ್ಷ್ಮಣ್ ಸಿಂಗ್

ರಾಹುಲ್ ಗಾಂಧಿ ಅವರನ್ನು ಮಹಾನ್ ನಾಯಕ ಎಂದು ಪರಿಗಣಿಸಬಾರದು. ಅವರ ಕಾಮೆಂಟ್‌ಗಳ ಬಗ್ಗೆ ಸ್ಪಷ್ಟನೆ ಕೇಳಿದಾಗ ನಾನೊಬ್ಬ ಪಕ್ಷದ ಕಾರ್ಯಕರ್ತ ಮಾತ್ರ ಎಂದು ರಾಹುಲ್ ಗಾಂಧಿ ಅವರೇ ಹೇಳಿದ್ದಾರೆ ಎಂದು ನೆನಪಿಸಿದರು.

ಇನ್ನು ಲಕ್ಷ್ಮಣ್ ಸಿಂಗ್ ಹೇಳಿಕೆ ಕಾಂಗ್ರೆಸ್ ಪಕ್ಷದಲ್ಲಿ ಸಂಚಲನ ಮೂಡಿಸಿದೆ. ಲಕ್ಷ್ಮಣ್ ಸಿಂಗ್ ಅವರ ಹೇಳಿಕೆಯನ್ನು ಪಕ್ಷದ ನಾಯಕತ್ವ ಒಪ್ಪುತ್ತಿಲ್ಲ. ಮತ್ತೊಂದೆಡೆ, ಸಹೋದರನ ಕಾಮೆಂಟ್‌ಗಳಿಗೆ ದಿಗ್ವಿಜಯ್ ಸಿಂಗ್ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದು ಕುತೂಹಲಕಾರಿಯಾಗಿದೆ. ಇದೇ ವೇಳೆ ಲಕ್ಷ್ಮಣ್ ಸಿಂಗ್ ಹೇಳಿಕೆಗೆ ಬಿಜೆಪಿ ಪ್ರತಿಕ್ರಿಯಿಸಿದೆ. ಈ ಹಿಂದೆ ಕಾಂಗ್ರೆಸ್‌ನಲ್ಲಿ ದುಡಿದ ಬಿಜೆಪಿ ಮುಖಂಡ ಹೆಜಾದ್ ಪೂನಾವಾಲ ಮಾತನಾಡಿ, ಪಕ್ಷವನ್ನು ಶಾಶ್ವತವಾಗಿ ಕುಟುಂಬದ ಅಂಗಡಿಯಂತೆ ನಡೆಸಿಕೊಂಡು ಹೋಗಬೇಕು ಎಂಬ ಮನೋಭಾವವನ್ನು ಕಾಂಗ್ರೆಸ್ ನಾಯಕರು ಮರುಚಿಂತನೆ ಮಾಡಬೇಕಾದ ಕಾಲ ಬಂದಿದೆ ಎಂದಿದ್ದಾರೆ.



ಮೈಸೂರಿನ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಕುವೆಂಪು ಜಯಂತಿ ಆಚರಿಸಲಾಯಿತು. ಹಿರಿಯ ಸಾಹಿತಿ ಬನ್ನೂರು ಕೆ.ರಾಜು, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಬಾಲಕೃಷ್ಣ, ಸಂಘದ ಅಧ್ಯಕ್ಷ ಜಯನಗರ ಮಹೇಶ್, ಕಾರ್ಯದರ್ಶಿ ರವಿಕುಮಾರ್, ಖಜಾಂಚಿ ಪ್ರಕಾಶ್, ಉಪಾಧ್ಯಕ್ಷ ಸುರೇಶ್‌ಕುಮಾರ್, ನಿರ್ದೇಶಕರಾದ ಚಂದ್ರೇಗೌಡ, ಯೋಗೇಶ್ ಹೆಬ್ಬಾಳ್, ರುದ್ರಸ್ವಾಮಿ, ಕುಮಾರ್, ಸಂತೋಷಕುಮಾರ್, ಶಿವರಾಜ್, ಸದಸ್ಯ ಶ್ರೀನಿವಾಸ್ ಉಪಸ್ಥಿತರಿದ್ದರು.

ರಾಷ್ಟ್ರೀಯ ಕುಷ್ಠರೋಗ ತಜ್ಞರ ಸಮ್ಮೇಳನದ ಅಧ್ಯಕ್ಷರಾಗಿ ಡಾ.ಹೆಚ್.ಹನುಮಂತಪ್ಪ

ಮೈಸೂರು,ಜ.1– ರಾಷ್ಟ್ರೀಯ ಕುಷ್ಠರೋಗ ತಜ್ಞರ ಸಮ್ಮೇಳನವು ಜನವರಿ 5, 6 ಮತ್ತು 7ರಂದು ಬೆಂಗಳೂರಿನಲ್ಲಿ ನಡೆಯಲಿದ್ದು, ಅದರಲ್ಲಿ ವೈಜ್ಞಾನಿಕ ವಿಚಾರಗೋಷ್ಠಿಯಲ್ಲಿ ಮೈಸೂರಿನ ಪ್ರಸಿದ್ಧ ಚರ್ಮರೋಗ ತಜ್ಞರಾದ ಡಾ. ಪ್ರೊ. ಹೆಚ್.ಹನುಮಂತಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಈವರೆಗೂ ರಾಷ್ಟ್ರೀಯ, ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಅನೇಕ ಅತಿಥಿ ಉಪನ್ಯಾಸಗಳನ್ನು ನೀಡಿರುವ ಡಾ.ಹನುಮಂತಪ್ಪನವರು ಅನೇಕ ವೈಜ್ಞಾನಿಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ಜೊತೆಗೆ ಅನೇಕ ವೈಜ್ಞಾನಿಕ ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಇವರು ರಾಷ್ಟ್ರೀಯ ಮಕ್ಕಳ ಚರ್ಮರೋಗ ತಜ್ಞರ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.



ಹೊಸ ವರ್ಷ ಸಂಭ್ರಮಾಚರಣೆ ವೇಳೆ

ಕನ್ನಡ ಧ್ವಜಕ್ಕೆ ಬೆಂಕಿ; ಬೆಳಗಾವಿ ಉದ್ವಿಗ್ನ



ಬೆಳಗಾವಿ: ಬೆಳಗಾವಿ ಜಿಲ್ಲೆಯಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ವೇಳೆ ಕಿಡಿಗೇಡಿಗಳ ಗುಂಪೊಂದು ಕನ್ನಡ ಧ್ವಜವನ್ನು ಸುಟ್ಟು ಹಾಕಿರುವ ಘಟನೆ ನಡೆದಿದೆ. ಬೆಳಗಾವಿ ನಗರದ ಸುಳಗಾ ಗ್ರಾಮದ ರಾಯಣ್ಣ ವೃತ್ತದಲ್ಲಿ ಮಧ್ಯರಾತ್ರಿ ಈ ಘಟನೆ ನಡೆದಿದೆ.

ಕನ್ನಡಪರ ಹೋರಾಟಗಾರರು ಈ ಘಟನೆಯನ್ನು ಖಂಡಿಸಿದ್ದು, ತಪ್ಪಿತಸ್ಥರನ್ನು ಬಂಧಿಸುವಂತೆ ಪೊಲೀಸರನ್ನು ಒತ್ತಾಯಿಸಿದ್ದಾರೆ. ರಾಯಣ್ಣ ವೃತ್ತದಲ್ಲಿ ಅಳವಡಿಸಿದ್ದ ಕನ್ನಡ ಧ್ವಜಕ್ಕೆ ರಾತ್ರಿ ವೇಳೆ ಕಿಡಿಗೇಡಿಗಳ ಗುಂಪೊಂದು ಬೆಂಕಿ ಹಚ್ಚಿ ಪರಾರಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಇನ್ನಷ್ಟೇ ಹೊರಬರಬೇಕಿದೆ. ಪೊಲೀಸರು ಸೂಕ್ಷ್ಮ ಸ್ಥಳಗಳಲ್ಲಿ ಭದ್ರತೆ ಹೆಚ್ಚಿಸಿದ್ದು, ಆರೋಪಿಗಳ ಪತ್ತೆಗೆ ಶೋಧ ನಡೆಸಿದ್ದಾರೆ.


ರಾಷ್ಟ್ರಕವಿ ಕುವೆಂಪು ಕನ್ನಡ ಸಾರಸ್ವತ ಲೋಕದ ಅಸ್ಮಿತೆ

ವಿಶ್ವಮಾನವ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಹಿತಿ ಸತೀಶ್ ಜವರೇಗೌಡ ಅಭಿಮತ

ಮೈಸೂರು,ಜ.1–ನಾಡಿನ ಜನಸಮುದಾಯದಲ್ಲಿ ವೈಚಾರಿಕತೆಯ ಜೊತೆಗೆ ಕನ್ನಡ ಪ್ರಜ್ಞೆ ಹಾಗೂ ವಿಶ್ವಮಾನವ ಪ್ರಜ್ಞೆ ಬೆಳೆಸಿದ ಕುವೆಂಪು ಕನ್ನಡದ ಸಾಂಸ್ಕೃತಿಕ ಅಸ್ಮಿತೆ ಎಂದು ಸಾಹಿತಿ ಟಿ.ಸತೀಶ್ ಜವರೇಗೌಡ ಬಣ್ಣಿಸಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಿದ್ದ ವಿಶ್ವಮಾನವ ದಿನಾಚರಣೆ ಹಾಗೂ ವಿಶೇಷ ಉಪನ್ಯಾಸ, ಕುವೆಂಪು ವಿಶ್ವಮಾನವ ಕನ್ನಡ ರತ್ನ ಪ್ರಶಸ್ತಿ ಪ್ರದಾನ, ಪುಸ್ತಕ ಲೋಕಾರ್ಪಣೆ–ಕವಿಗೋಷ್ಠಿ ಹಾಗೂ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮದಲ್ಲಿ 'ಕುವೆಂಪು ವಿಚಾರಧಾರೆ ಮತ್ತು ಯುವಜನರು' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಕುವೆಂಪು ಅವರ ಸಾಹಿತ್ಯದ ಓದಿನಿಂದ ನಮ್ಮಲ್ಲಿ ವಿಶ್ವಾತ್ಮಕ ದೃಷ್ಟಿಕೋನ ಬೆಳೆಯುತ್ತದೆ. ಆದ್ದರಿಂದ ಯುವಜನರು ಕೇವಲ ಮನರಂಜನೆಯ ಮೋಜು, ಮಸ್ತಿ, ವಿಲಾಸಿ ಚಟುವಟಿಕೆಗಳಿಗೆ ಸೀಮಿತರಾಗದೆ, ಸಾಹಿತ್ಯಾಸಕ್ತಿ ಬೆಳೆಸಿಕೊಂಡು ಕುವೆಂಪು ಸಾಹಿತ್ಯ ಓದಿಗೆ ತೆರೆದುಕೊಳ್ಳಬೇಕೆಂದು ಕರೆ ನೀಡಿದರು.



ಯುವಜನರು ಇಂದು ಸಾಮಾಜಿಕ ಜಾಲತಾಣಗಳಲ್ಲಿ ಕಳೆದುಹೋಗುತ್ತಿದ್ದಾರೆ. ಬದುಕು ಕೇವಲ ಮೋಜು ಮಾಡಲು ಮಾತ್ರ ಇರುವುದಲ್ಲ. ಬದುಕೆಂಬುದು ಸಾಧನೆ ಮತ್ತು ಸಾರ್ಥಕತೆಗಿದೆ. ಸಾಹಿತ್ಯ ನಮ್ಮನ್ನು ಒಂದು ಗಮ್ಯದ ಕಡೆ ತಲುಪಿಸುವಂತಹ ಮಾಧ್ಯಮ. ಈ ಬದುಕನ್ನು ಅರ್ಥಪೂರ್ಣವಾಗಿ ಆಸ್ವಾದಿಸಬೇಕು. ಈ ಆಸ್ವಾದನೆಗೆ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿಗಳೆಲ್ಲವೂ ಕೂಡ ಪೂರಕವಾಗಿವೆ ಎಂದರು.

ಪಂಪ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಮಾತನಾಡಿ, ಕುವೆಂಪು ಎಂದರೆ ಕನ್ನಡದ ನವಯುಗಾಚಾರ್ಯ. ನೇಗಿಲಯೋಗಿ ಕೂಡ ಹೌದು. ಅವರ ನೇಗಿಲಯೋಗಿ ಕವಿತೆ ರೈತ ಗೀತೆಯಾಗಿದೆ. ಲೇಖನಿಯನ್ನೇ ನೇಗಿಲಾಗಿ ಮಾಡಿಕೊಂಡು ಸೃಜನಶೀಲ ಸಾಹಿತ್ಯ ಕೃಷಿ ಮಾಡಿ ಅದ್ಭುತ ಫಸಲು ತೆಗೆದ ದೈತ್ಯ ಪ್ರತಿಭೆ ಎಂದರು.

ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಕೆ. ಚಿದಾನಂದ ಗೌಡ ಮಾತನಾಡಿ, ಕುವೆಂಪು ಅವರು ತಮ್ಮ ಕೊನೆಯ ದಿನಗಳಲ್ಲಿ ತಮ್ಮನ್ನು ನೋಡಲು ಯಾರೇ ಬಂದರೂ ಅವರಿಗೆ ವಿಶ್ವಮಾನವ ಸಂದೇಶ ಕೃತಿಯನ್ನು ನೀಡುತ್ತಿದ್ದರು. ಈ ಸಂದೇಶವನ್ನು ಯಾರು ಮರೆಯಬಾರದು. ಇಂದು ಜಗತ್ತಿನಲ್ಲಿ ಶಾಂತಿ ನೆಲೆಸಬೇಕಾದರೆ ಈ ವಿಶ್ವಮಾನವ ಸಂದೇಶ ಅತ್ಯಂತ ಅವಶ್ಯಕ ಎಂದು ಹೇಳುತ್ತಿದ್ದರು ಎಂದು ಸ್ಮರಿಸಿದರು.

ಸಾಹಿತಿಗಳಾದ ಟಿ.ಸತೀಶ್ ಜವರೇಗೌಡ ಹಾಗೂ ಟಿ. ತ್ಯಾಗರಾಜು ಅವರಿಗೆ 'ಶತಶೃಂಗ ಸಾಹಿತ್ಯ ಪ್ರಶಸ್ತಿ' ಮತ್ತು ಪತ್ರಕರ್ತ ಆರ್.ಕೃಷ್ಣ, ಕಾಸರಗೋಡಿನ ಕನ್ನಡ ಭವನದ ಅಧ್ಯಕ್ಷ ವಾಮನ್ ರಾವ್ ಬೇಕಲ್, ಸಮಾಜ ಸೇವಕ ಕೃಷ್ಣೇಗೌಡ, ಯುವ ಕವಿ ಗಣೇಶ್ ನಿಲುವಾಗಿಲು ಮುಂತಾದವರಿಗೆ 'ಕುವೆಂಪು ವಿಶ್ವಮಾನವ ಕನ್ನಡ ರತ್ನ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರೀಯ ಸಂಪನ್ಮೂಲ ವ್ಯಕ್ತಿ ಸುರೇಂದ್ರ ಸಮಗಾರ್, ಯುವ ಸಾಹಿತಿ ಲಿಖಿತ್ ಹೊನ್ನಾಪುರ, ಸ್ವರ್ಣಭೂಮಿ ಫೌಂಡೇಶನ್ ಅಧ್ಯಕ್ಷ ಬಿ.ಶಿವಕುಮಾರ್ ಕೋಲಾರ ಹಾಗೂ ಮತ್ತಿತರರು ಇದ್ದರು. ಇದೇ ವೇಳೆ ಕವಿಗೋಷ್ಠಿ ಸಹ ನಡೆಯಿತು.

ಮೈಸೂರು ಮಿತ್ರ ಮಂಗಳವಾರ 2 ಜನವರಿ 2024

ಅಮರಶಿಲ್ಪಿ ಜಕಣಾಚಾರಿ ಕೊಡುಗೆ ಅಪಾರ

ಸಂಸ್ಮರಣಾ ದಿನಾಚರಣೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ ಸ್ಮರಣೆ



ಮಂಡ್ಯ, ಜ.1– ಕಲ್ಲು–ಶಿಲೆಗಳ ಮೇಲೆ ಕೆತ್ತನೆಯ ಮೂಲಕ ನಾಡಿನ ಸಂಸ್ಕೃತಿ ಮತ್ತು ಇತಿಹಾಸವನ್ನ ಜೀವಂತವಾಗಿಟ್ಟಿರುವ ಅಮರಶಿಲ್ಪಿ ಜಕಣಾಚಾರಿ ಅವರ ಕೊಡುಗೆ ಅಪಾರವಾದದ್ದು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಸ್ಮರಿಸಿದರು.

ನಗರದ ಕಲಾಮಂದಿರದಲ್ಲಿ ಸೋಮವಾರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಹಾಗೂ ವಿಶ್ವಕರ್ಮ ಸಮಾಜದ ವತಿಯಿಂದ ನಡೆದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ನಾಡಿನ ಸಂಸ್ಕೃತಿ ಹಾಗೂ ಇತಿಹಾಸ ಜೀವಂತವಾಗಿದೆ ಎಂದರೆ, ಅದಕ್ಕೆ ಕಾರಣ ಕಲ್ಲು–ಶಿಲೆಯ ಮೇಲೆ ಕೆತ್ತನೆ ಮಾಡಿರುವುದು. ಜಕಣಾಚಾರಿ ಕೊಟ್ಟಿರುವಂತಹ ಕೊಡುಗೆ ಹಾಗೂ ಸಾಧನೆಗೆ ಸಾವಿಲ್ಲ. ಅದು ಸೂರ್ಯ–ಚಂದ್ರ ಇರುವವರೆಗೂ ಜೀವಂತವಾಗಿರುತ್ತದೆ. ನಾವೆಲ್ಲರೂ ಜಕಣಾಚಾರಿಯವರ ಬಗ್ಗೆ ತಿಳಿದುಕೊಳ್ಳಬೇಕು ಹಾಗೂ ಮಕ್ಕಳಿಗೂ ತಿಳಿಸಬೇಕು. ಸಾಹಿತ್ಯ, ಕಲೆ, ಸಂಸ್ಕೃತಿ, ಇತಿಹಾಸವನ್ನು ಮಕ್ಕಳಿಗೆ ತಿಳಿಸಬೇಕು. ಅವರ ಚಿಂತನೆ, ಆದರ್ಶ, ಮೌಲ್ಯಗಳನ್ನು ಮಕ್ಕಳಲ್ಲಿ ಬೆಳೆಸಬೇಕು. ಕೇವಲ ಅವರನ್ನು ನೆನಪಿಸಿಕೊಳ್ಳದೆ ಅವರಿಗೆ ನಮಿಸಬೇಕು ಎಂದರು.

ಪುಸ್ತಕ ನೋಡಿ ಜಕಣಾಚಾರಿಯವರ ಸಾಧನೆಯನ್ನು ತಿಳಿದುಕೊಳ್ಳುವುದಕ್ಕಿಂತ, ಅವರ ಸಾಧನೆ ಹಾಗೂ ಕೊಡುಗೆಗಳನ್ನು ಕಣ್ಣಾರೆ ನೋಡಿದರೆ ನಮಗೆ ಹೆಮ್ಮೆ ಉಂಟಾಗುತ್ತದೆ. ಬೇಲೂರು ಮತ್ತು ಹಳೇಬೀಡು ವಿಶ್ವರೂಪರೆ ಸಾಧನೆಯ ಪಟ್ಟಿಯಲ್ಲಿದೆ. ಇದಕ್ಕೆ ಕಾರಣ ಶಿಲೆಗಳ ಮೇಲಿರುವ ಇತಿಹಾಸ. ಅವುಗಳನ್ನು ಒಮ್ಮೆಯಾದರು ನೋಡಿ. ಜೀವವಿಲ್ಲದ ಕಲ್ಲಿಗೆ ಜೀವವನ್ನು ತುಂಬಿ ಹಾಗೂ ಸಮಾಜಕ್ಕೆ ಕೊಡುಗೆ ನೀಡಿದ ಜಕಣಾಚಾರಿಯಂತಹ ಮಹಾನ್ ಕಲೆಗಾರರನ್ನು ಅಂತರಂಗದಲ್ಲಿ ಪೂಜಿಸಿ, ಗೌರವಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎನ್.ಉದಯಕುಮಾರ್, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿನಿರ್ದೇಶಕ ಶಿವಲಿಂಗಯ್ಯ, ವಿಶ್ವಕರ್ಮ ಸಮಾಜದ ವೇದಬ್ರಹ್ಮ ತಿಲಕೇಶ್ಮೂರ್ತಿ, ವಿಶ್ವಕರ್ಮ ಸಮಾಜದ ಮುಖಂಡರಾದ ವೈ.ಡಿ.ಶ್ರೀನಿವಾಸ ಮೂರ್ತಿ, ಹೆಚ್.ಪಿ.ಸತೀಶ್, ನಾಗರಾಜ ಆಚಾರ್, ಎಲ್.ಆನಂದ ಸುದರ್ಶನ್, ಎಂ.ಬಿ.ರಮೇಶ್, ದೇವರಾಜು ಇನ್ನಿತರರಿದ್ದರು. ಇದೇ ಸಂದರ್ಭದಲ್ಲಿ ವಿಶ್ವಕರ್ಮ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಲಾಯಿತು.

ಹೊಸವರ್ಷ: ಮೇಲುಕೋಟೆಗೆ ಸಹಸ್ರಾರು ಭಕ್ತರು



ಮೇಲುಕೋಟೆ, ಜ.1– ಹೊಸವರ್ಷದ ಮೊದಲ ದಿನವಾದ ಸೋಮವಾರ ಸಹಸ್ರಾರು ಭಕ್ತರು ಮೇಲುಕೋಟೆಗೆ ಆಗಮಿಸಿ ಚೆಲುವನಾರಾಯಣಸ್ವಾಮಿ ಮತ್ತು ಯೋಗನರಸಿಂಹಸ್ವಾಮಿ ದರ್ಶನ ಪಡೆದರು.

ಕುಟುಂಬ ಸಮೇತರಾಗಿ ತಂಡೋಪತಂಡವಾಗಿ ಆಗಮಿಸಿದ ಭಕ್ತರು, ಕಲ್ಯಾಣಿಯಲ್ಲಿ ಪವಿತ್ರಸ್ನಾನ ಮಾಡಿ ಬೆಟ್ಟದೊಡೆಯ ಕುಂತಸಿಂಗ್ರಿ ಹಾಗೂ ಚೆಲುವನಾರಾಯಣ ಸ್ವಾಮಿಯ ದರ್ಶನ ಪಡೆದರು. ಧನುರ್ಮಾಸದ ಪ್ರಯುಕ್ತ ಮುಂಜಾನೆ 4 ರಿಂದ ಬೆಳಗ್ಗೆ 7 ಗಂಟೆ ವರೆಗೆ ನಿತ್ಯಪೂಜೆ ನಡೆಸಲಾಯಿತು.

ನಂತರ ಭಕ್ತರ ದರ್ಶನಕ್ಕೆ ವ್ಯವಸ್ಥೆ ಮಾಡಲಾಯಿತು. ರಾತ್ರಿವರೆಗೆ ದೇವಾಲಯದ ಮುಂದೆ ಸರತಿ ಸಾಲಿನಲ್ಲಿ ನಿಂತ ಭಕ್ತರು ದೇವರ ದರ್ಶನ ಪಡೆದರು. ದೇವಾಲಯದ ಕಾರ್ಯನಿರ್ವಾಹಕಾಧಿಕಾರಿ ಹೆಚ್.ಎಸ್.ಮಹೇಶ್, ಪಾರುಪತ್ತೇಗಾರರಾದ ಶ್ರೀನಿವಾಸ ನರಸಿಂಹನ್ ಗುರೂಜಿ, ಎಂ.ಎನ್.ಪಾರ್ಥಸಾರಥಿ ಹಾಜರಿದ್ದರು.

ಹೃದಯಾಘಾತದಿಂದ ವೃದ್ಧೆ ಸಾವು:

ಹೊಸವರ್ಷದ ಅಂಗವಾಗಿ ಸೋಮವಾರ ಆಗಮಿಸಿದ್ದ 74 ವರ್ಷದ ವೃದ್ಧೆ ಮೇಲುಕೋಟೆಯ ಯೋಗಾನರಸಿಂಹ ಸ್ವಾಮಿ ಬೆಟ್ಟ ಹತ್ತುವ ವೇಳೆ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ರಾಮನಗರ ಜಿಲ್ಲೆಯ ಕಂಚುಗಾರನ ಹಳ್ಳಿಯ ರಾಮಕೃಷ್ಣಯ್ಯ ಎಂಬುವರ ಪತ್ನಿ ಶಾರದಮ್ಮ ಮೃತಪಟ್ಟಿದ್ದು, ಈಕೆ ಒಬ್ಬರೆ ದೇವರ ದರ್ಶನಕ್ಕೆ ಮೇಲುಕೋಟೆಗೆ ಆಗಮಿಸಿದ್ದರು. ಮೊದಲು ಪಂಚಕಲ್ಯಾಣಿಯಲ್ಲಿ ತೀರ್ಥಪ್ರೋಕ್ಷಣೆ ಮಾಡಿಕೊಂಡ, ಬಳಿಕ ಕಲ್ಯಾಣಿಗೆ ಪೂಜೆ ಸಲ್ಲಿಸಿ ಯೋಗಾ ನರಸಿಂಹ ಸ್ವಾಮಿ ಬೆಟ್ಟ ಹತ್ತುವಾಗ ಅರ್ಧದಲ್ಲೇ ಹೃದಯಾಘಾತ ಸಂಭವಿಸಿದೆ. ಅಲ್ಲಿದ್ದ ಭಕ್ತರು ತಕ್ಷಣ ಆಸ್ಪತ್ರೆಗೆ ರವಾನಿಸುವಷ್ಟರಲ್ಲಿ ಮೃತಪಟ್ಟಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಮೇಲುಕೋಟೆ ಠಾಣೆ ಪೊಲೀಸರು, ಶವವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಿದರು.

ಬೆಳ್ಳೂರಿನಲ್ಲಿ ಕೋರೆಗಾಂವ್ ವಿಜಯೋತ್ಸವ ಆಚರಣೆ

ನಾಗಮಂಗಲ, ಜ.1–ತಾಲೂಕಿನ ಬೆಳ್ಳೂರಿನಲ್ಲಿ ಸೋಮವಾರ ದಲಿತ ಮುಖಂಡ ಶಿವಣ್ಣ ನೇತೃತ್ವದಲ್ಲಿ ಕೋರೆಗಾಂವ್ ವಿಜಯೋತ್ಸವ ಆಚರಿಸಲಾಯಿತು. ಬೆಳ್ಳೂರು ಕ್ರಾಸ್‌ನಿಂದ ನೂರಾರು ಜೈ ಭೀಮ್ ಕಾರ್ಯಕರ್ತರು ಬೈಕ್‌ನಲ್ಲಿ ಹೊರಟು ಪಟ್ಟಣದ ಅಂಬೇಡ್ಕರ್ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿದರು. ರ‍್ಯಾಲಿ ಉದ್ದಕ್ಕೂ ಕೋರೆಗಾಂವ್ ಯುದ್ಧ ಸೇನಾನಿ ಸಿದ್ದನಾಯಕ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಜೈಕಾರ ಹಾಕಿದರು. ಇದೇ ವೇಳೆ ದಲಿತ ಮುಖಂಡರಾದ ಕಂಚಿನಕೋಟೆ ಮೂರ್ತಿ, ಕ್ಯಾತನಹಳ್ಳಿ ಮಂಜು, ಸುರೇಶ್, ಬೂಸಾ ಮಂಜು, ಲೋಹಿತ್, ರಂಗೇಗೌಡ ಮುಂತಾದವರಿದ್ದರು.

ಇ–ಕೆವೈಸಿ ವದಂತಿಗಳಿಗೆ ಕಿವಿಗೊಡಬೇಡಿ

ಮಂಡ್ಯ, ಜ.1–ಅಡುಗೆ ಅನಿಲ ಸಂಪರ್ಕವಿರುವವರು ಡಿ.31 ರೊಳಗೆ ಗ್ಯಾಸ್ ಏಜೆನ್ಸಿಗಳಿಗೆ ಹೋಗಿ ಇ–ಕೆವೈಸಿ ಮಾಡಿಸಿದರೆ ಮಾತ್ರ ಸಬ್ಸಿಡಿ ಮತ್ತು ಸಿಲಿಂಡರ್ ಸರಬರಾಜು ಮಾಡಲಾಗುತ್ತದೆ ಎಂದು ವದಂತಿ ಸಾರ್ವಜನಿಕ ವಲಯದಲ್ಲಿ ಗೊಂದಲ ಸೃಷ್ಟಿಗೆ ಕಾರಣವಾಗಿದೆ. ಈ ವದಂತಿಗೆ ಸಾರ್ವಜನಿಕರು ಕಿವಿಗೊಡಬಾರದು. ಅಡುಗೆ ಅನಿಲ ಗ್ರಾಹಕರು ಗ್ಯಾಸ್ ಏಜೆನ್ಸಿಗಳಿಗೆ ತೆರಳಿ ಉಚಿತವಾಗಿ ಇ–ಕೆವೈಸಿ ಮಾಡಿಸಬಹುದು. ಇದಕ್ಕೆ ಕೇಂದ್ರ ಸರ್ಕಾರ ಯಾವುದೇ ಕೊನೆ ದಿನಾಂಕ ನಿಗದಿಪಡಿಸಿಲ್ಲ. ಮೊದಲು ಉಜ್ವಲ ಯೋಜನೆಯಡಿ ಗ್ಯಾಸ್ ಸಂಪರ್ಕ ಪಡೆದಿರುವವರು ಇ–ಕೆವೈಸಿ ನೀಡಬೇಕು. ನಂತರ ಗ್ಯಾಸ್ ಸಂಪರ್ಕ ಹೊಂದಿರುವವರು ಆಧಾರ್ ದಾಖಲೆಯೊಂದಿಗೆ ಇ–ಕೆವೈಸಿ ನೀಡಬೇಕು ಎಂದು ತಹಸೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಂಪ್‌ಸೆಟ್ ಮೋಟಾರು ಕಳವು

ನಾಗಮಂಗಲ, ಜ.1–ಜಮೀನಿಗೆ ನೀರು ಹಾಯಿಸಲು ಅಳವಡಿಸಿದ್ದ ಸುಮಾರು 3 ಲಕ್ಷ ರೂ. ಬೆಲೆ ಬಾಳುವ ಮೂರು ಪಂಪ್‌ಸೆಟ್ ಮೋಟಾರುಗಳು ಕಳವಾಗಿರುವ ಘಟನೆ ತಾಲೂಕಿನ ದೇವಲಾಪುರ ಹೋಬಳಿಯ ತೊಳಸಿಕೊಂಬರಿ ಗ್ರಾಮದಲ್ಲಿ ನಡೆದಿದೆ.

ಕಳೆದ ಶುಕ್ರವಾರ ಗ್ರಾಮದ ಅದಂಗೆರೆ ನರಸಿಂಹಮೂರ್ತಿ ಅವರ ತೋಟದಲ್ಲಿನ ಸುಮಾರು 1 ಲಕ್ಷ ರೂ. ಬೆಲೆಬಾಳುವ ಮೋಟಾರು ಹಾಗೂ ದೊಡ್ಡಚಿಕ್ಕನಹಳ್ಳಿ ಗ್ರಾಮದ ದನುಂಜಯ್ ಮತ್ತು ತುಂಟಣ್ಣ ಅವರ ಜಮೀನಿನ ಪಂಪ್‌ಸೆಟ್ ಮೋಟಾರುಗಳನ್ನು ಕಳವು ಮಾಡಲಾಗಿದೆ. ಅಂದು ರಾತ್ರಿ 12.09ರಲ್ಲಿ ಟ್ರ್ಯಾಕ್ಟರ್‌ವೊಂದು ತೊಳಸಿಕೊಂಬರಿ ಬಳಿ ಹೋಗಿರುವುದು ಅಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋರೆಗಾಂವ್ ವಿಚಾರ ವಿಸ್ತಾರ: ಸಿ.ಎ.ಕೆರೆ ಮೂರ್ತಿ



ಭಾರತೀನಗರ, ಜ.1– ಕಳೆದ 6 ವರ್ಷಗಳಿಂದ ದೇಶದಲ್ಲಿ ಭೀಮ್ ಕೋರೆಗಾಂವ್ ವಿಚಾರ ವಿಸ್ತಾರಗೊಳ್ಳುತ್ತಿದೆ ಎಂದು ದಲಿತ ಹಿರಿಯ ಮುಖಂಡ ಸಿ.ಎ.ಕೆರೆ ಮೂರ್ತಿ ಹೇಳಿದರು.

ಭಾರತೀನಗರದ ವಿಶ್ವೇಶ್ವರಯ್ಯ ವೃತ್ತದ ಬಳಿ ಸೋಮವಾರ ದಲಿತ ಪ್ರಗತಿಪರ ಸಂಘಟನೆಗಳ ವತಿಯಿಂದ ನಡೆದ ಭೀಮ್ ಕೋರೆಗಾಂವ್ ವಿಜಯೋತ್ಸವ ಆಚರಣೆಯಲ್ಲಿ ಮಾತನಾಡಿದ ಅವರು, 1818ರ ಜ.1ರಂದು ಮಹರ್ ರೆಜಿಮೆಂಟ್‌ನ ಭೀಮ್ ಕೋರೆಗಾಂವ್ ಯುದ್ಧದಲ್ಲಿ ಜಯಗಳಿಸಿದ ದಲಿತ ಸ್ವಾಭಿಮಾನಿ, ಸೈನಿಕರ ರಕ್ತ ಚರಿತ್ರೆ ದೇಶದ ಎಲ್ಲರಿಗೂ ತಿಳಿಯಬೇಕಿದೆ. ಹಾಗಾಗಿ ಜ.1ರಂದು ಕೋರೆಗಾಂವ್ ವಿಜಯೋತ್ಸವ ಆಚರಣೆ ಮಾಡಲಾಗುತ್ತಿದೆ ಎಂದರು.

ದೇಶದ ಸಾಕಷ್ಟು ಜನರು, ವಿದ್ಯಾವಂತರು ಹಾಗೂ ಹಳ್ಳಿಹಳ್ಳಿಗಳಲ್ಲಿ ಸ್ವಾಭಿಮಾನವನ್ನು ಅರಳಿಸುತ್ತಿದೆ. ಕೋರೆಗಾಂವ್ ಎಂದರೆ ಮಹಾರಾಷ್ಟ್ರದ ಭೀಮಾತೀರದ ಕೋರೆಗಾಂವ್ ಗ್ರಾಮದಲ್ಲಿ ಮನುಸ್ಮೃತಿ ಆಡಳಿತದ ಪೇಶ್ವೆಗಳಿಗೂ ಮಹಲ್ ರೆಜಿಮೆಂಟ್ ಸೈನಿಕರ ನಡುವೆ ನಡೆದ ಮಹಾಯುದ್ಧವಾಗಿದೆ. ಇದು ಏಕೆ ನಡೆಯಿತು ಅನ್ನುವ ನೈಜ್ಯ ಇತಿಹಾಸವನ್ನು ಡಾ.ಬಿ.ಆರ್ ಅಂಬೇಡ್ಕರ್ ಅವರು ಜಗತ್ತಿಗೆ ಸಾರಿ ಹೇಳಿದ್ದಾರೆ. ಈ ಯುದ್ಧ ದಲಿತರ ಸ್ವಾಭಿಮಾನದ ಬದುಕು, ಶಿಕ್ಷಣ, ಗೌರವಯುತ ಉದ್ಯೋಗಕ್ಕಾಗಿ ನಡೆಯಿತು ಎಂದು ತಿಳಿಸಿದರು.

ಸಮತ ಸೈನಿಕ ದಳದ ಜಿಲ್ಲಾಧ್ಯಕ್ಷ ಕರಡಕೆರೆ ಯೋಗೇಶ್ ಮಾತನಾಡಿ, 200 ವರ್ಷಗಳ ಹಿಂದೆ ಮಹಾರಾಷ್ಟ್ರದಲ್ಲಿ ಪೇಶ್ವೆಗಳ ಆಡಳಿತದಲ್ಲಿ ಅಸ್ಪೃಶ್ಯರಿಗೆ ಮೂಲಭೂತಹಕ್ಕುಗಳು ಇರಲಿಲ್ಲ. ಅವರ ವಿರುದ್ಧ 500 ದಲಿತ ಸೈನಿಕರು 28 ಸಾವಿರ ಪೇಶ್ವೆಗಳ ವಿರುದ್ಧ ಯುದ್ಧ ಮಾಡಿ ಸೋಲಿಸಿ ಅಸ್ಪೃಶ್ಯರಿಗೆ ಮೂಲಭೂತಹಕ್ಕುಗಳನ್ನು ಕೊಡಿಸಿದರು. ಈ ಯುದ್ಧದ ಸಂಕೇತವಾಗಿ ಮಹಾರಾಷ್ಟ್ರದಲ್ಲಿ ಸೈನಿಕ ನೆನಪಿಗಾಗಿ ಧ್ವಜಕಂಬ ನಿರ್ಮಿಸಲಾಗಿದೆ. ಮಹಾರಾಷ್ಟ್ರದ ಪುಣೆಯಲ್ಲಿ ಪ್ರತಿವರ್ಷ ಜ.1ರಂದು ಕೋರೆಗಾಂವ್ ಆಚರಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ಕಬ್ಬಾಳಯ್ಯ, ರಘುವೆಂಕಟೇಗೌಡ, ಮುಡೀನಹಳ್ಳಿ ತಿಮ್ಮಯ್ಯ, ಮಡೇನಹಳ್ಳಿ ಸಿದ್ದರಾಮಯ್ಯ, ಕಾಡುಕೊತ್ತನಹಳ್ಳಿ ರಾಜು, ಲೋಕೇಶ್, ಕಾರ್ಕಹಳ್ಳಿ ಬಸವರಾಜು, ಮಣಿಗೆರೆ ಪವನ, ಹೊಂಬಯ್ಯ, ಅಭಿ, ಶಶಿ, ಪುನೀತ್, ಪ್ರಸಾದ್, ಬಸವರಾಜು ಇದ್ದರು.

ಆಲೇನಹಳ್ಳಿ ಡೇರಿಗೆ ನಿರ್ದೇಶಕರ ಆಯ್ಕೆ




ಕೆ.ಆರ್.ಪೇಟೆ, ಜ.1–ತಾಲೂಕು ಅಕ್ಕಿಹೆಬ್ಬಾಳು ಹೋಬಳಿಯ ಆಲೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಆಡಳಿತ ಮಂಡಳಿಯ ನಿರ್ದೇಶಕರ ಆಯ್ಕೆಗೆ ಚುನಾವಣೆ ನಡೆಯಿತು.

ನಿರ್ದೇಶಕರ ಆಯ್ಕೆಗೆ ಸ್ಪರ್ಧಿಸಿದ್ದ ರವಿ (227), ಎ.ಆರ್.ಹರೀಶ್ (201), ವಿಜಯ ಕುಮಾರ್ (197), ರಂಗೇಗೌಡ (187), ಪುಟ್ಟರಾಜು(177), ಎ.ಪಿ. ಕುಮಾರ್ (150), ಶಿವ(118) ಮತಗಳನ್ನು ಪಡೆದು ವಿಜೇತರಾದರು. ಹಿಂದುಳಿದ ಎ ವರ್ಗದಿಂದ ಮಂಜು, ಬಿ ವರ್ಗದಿಂದ ಸುಬ್ಬೇಗೌಡ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಆನಂದ ನಾಯ್ಕ್ ಘೋಷಿಸಿದರು.

ಈ ಸಂದರ್ಭದಲ್ಲಿ ಪ್ರಥಮ ದರ್ಜೆ ಸಹಾಯಕಿ ಹೇಮಲತಾ, ಚುನಾವಣಾ ಸಹಾಯಕಾಧಿಕಾರಿ ಪ್ರದೀಶ್, ರಾಘವೇಂದ್ರ, ಪುಟ್ಟಸ್ವಾಮಿ, ಕುಮಾರ್, ಗ್ರಾಮದ ಯಜಮಾನರು ಉಪಸ್ಥಿತರಿದ್ದರು.

ಮೇಲುಕೋಟೆಯಲ್ಲೂ ಶ್ರೀರಾಮ– ಸೀತಾಮಾತೆ ಹೆಜ್ಜೆ ಗುರುತು!

- ಜ.22ಕ್ಕೆ ಅಯೋಧ್ಯೆಯಲ್ಲಿ ಶ್ರೀರಾಮನ 'ಪ್ರಾಣ ಪ್ರತಿಷ್ಠಾಪನೆ' ಹಿನ್ನೆಲೆ: ಕನ್ನಡಿಗರ ವಿಶೇಷ ಸಂಭ್ರಮ
- ಮೇಲುಕೋಟೆಯಲ್ಲಿ ಶ್ರೀರಾಮ, ಸೀತಾ ಮಾತೆ ನೆಲೆಯೂರಿದ್ದ ಕುರುಹುಗಳನ್ನು ಸ್ಮರಿಸುತ್ತಿರುವ ಜನರು
- ಮೇಲುಕೋಟೆಯ ಧನುಷ್ಕೋಟಿಯಲ್ಲಿ ಸೀತೆಯ ಬಾಯಾರಿಕೆ ತಣಿಸಲು ಬಾಣ ಬಿಟ್ಟು ನೀರು ಬರಿಸಿದ್ದ ಶ್ರೀರಾಮ



● ಎಂ.ಕೆ.ಮೋಹನ್‌ರಾಜ್

ಮಂಡ್ಯ, ಜ.1– ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಜ.22ಕ್ಕೆ ಮರ್ಯಾದಾ ಪುರುಷ ಶ್ರೀರಾಮನ 'ಪ್ರಾಣ ಪ್ರತಿಷ್ಠಾಪನಾ' ಕಾರ್ಯ ನಡೆಯಲಿದೆ. ಈ ನಿಟ್ಟಿನಲ್ಲಿ ಅಯೋಧ್ಯೆಯಲ್ಲಿ ಭರ್ಜರಿ ತಯಾರಿಗಳು ನಡೆಯುತ್ತಿದ್ದು, ಕನ್ನಡಿಗರಿಗೂ ಅತಿದೊಡ್ಡ ನಂಟಿದೆ ಅಯೋಧ್ಯೆಯ ರಾಮನ ಮೂಲ ಸ್ಥಾನಕ್ಕೂ ಪ್ರಾಣ ಪ್ರತಿಷ್ಠಾಪನೆಗೆ ವಿಗ್ರಹ ಮೂರ್ತಿ ತಯಾರಿಸುತ್ತಿರುವವರು ಮೈಸೂರು ಮೂಲದವರಾಗಿದ್ದರೆ, ಅಲ್ಲಿ ಭಾಗವಹಿಸುತ್ತಿರುವ ಪೌರೋಹಿತ್ಯ ವರ್ಗದವರು ಕೋಲಾರ ಮೂಲದವರು. ಇದರ ಜೊತೆಗೆ ಕನ್ನಡಿಗರಿಗೆ ಮತ್ತೊಂದು ಸಂತಸದ ವಿಚಾರವೆಂದರೆ ಶ್ರೀರಾಮ ಹಾಗೂ ಸೀತಾಮಾತೆ ಕರ್ನಾಟಕದಲ್ಲಿ ನಡೆದಾಡಿದ್ದರು ಎಂಬುದು. ಅದರಲ್ಲೂ ವಿಶೇಷವಾಗಿ ಮಂಡ್ಯ ಜಿಲ್ಲೆಯ ಐತಿಹಾಸಿಕ ಧಾರ್ಮಿಕ ಕ್ಷೇತ್ರ ಮೇಲುಕೋಟೆಯಲ್ಲಿ ನೆಲೆಸಿದ್ದರು ಎಂಬುದು ಕನ್ನಡಿಗರಿಗೆ ಅತಿದೊಡ್ಡ ಸಂತಸದ ವಿಚಾರವಾಗಿದೆ.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಮೇಲುಕೋಟೆಯಲ್ಲಿರುವ ಶ್ರೀ ಚಲುವನಾರಾಯಣನನ್ನು ಕಣ್ತುಂಬಿಕೊಳ್ಳಲು ನಿತ್ಯ ಸಾವಿರಾರು ಜನರು ಬರುತ್ತಾರೆ. ಅಷ್ಟೇ ಏಕೆ ಪ್ರತಿ ವರ್ಷ ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ನಡೆಯುವ ವಿಶ್ವವಿಖ್ಯಾತ ಮೇಲುಕೋಟೆ ವೈರಮುಡಿ ಉತ್ಸವ ನೋಡಲು ಸಹ ಅದೊಂದೇ ದಿನ ಲಕ್ಷಾಂತರ ಭಕ್ತರು ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ ಸೇರಿದಂತೆ ದಕ್ಷಿಣ ಭಾರತದಿಂದ ಭಾರೀ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಾರೆ. ಅಂತಹ ಚಲುವನಾರಾಯಣನೇ ರಾಮಪ್ರಿಯನಾಗಿದ್ದ ಎಂಬುದನ್ನು ಇತಿಹಾಸ ಹೇಳುತ್ತದೆ.

ಮೇಲುಕೋಟೆಗೆ ಬಂದಿದ್ದ ಶ್ರೀರಾಮ: ರಾವಣನನ್ನು ಸಂಹಾರ ಮಾಡಿ, ಲಂಕ ದಹನದ ಬಳಿಕ ಸೀತಾಮಾತೆಯೊಂದಿಗೆ ಮರಳಿ ತವರಿಗೆ ಬರುತ್ತಿದ್ದ ಶ್ರೀರಾಮ ಮೇಲುಕೋಟೆಯತ್ತ ಆಗಮಿಸುತ್ತಾನೆ. ಮೇಲುಕೋಟೆಯ ಧನುಷ್ಕೋಟಿ ಬಳಿ ವಿಶ್ರಾಂತಿ ಪಡೆದರು. ಇಲ್ಲಿಯೇ ಸೀತಾಮಾತೆ ಬಾಯಾರಿಕೆ ನೀಗಲು ಶ್ರೀರಾಮ ತನ್ನ ಬಾಣ ಬಿಟ್ಟು, ನೀರನ್ನು ಉಕ್ಕಿಸುತ್ತಾನೆ.

ಈಗಲೂ ಸಹ ಶ್ರೀರಾಮ ನೀರು ಉಕ್ಕಿಸಿದ ಆ ಕೊಳ ಇದ್ದು, ಅಲ್ಲಿಗೆ ನೀರು ಬರುವ ಯಾವುದೇ ನೆಲೆ ಅಥವಾ ಮಾರ್ಗ ಇಲ್ಲದಿದ್ದರೂ ಸದಾ ನೀರಿರುತ್ತದೆ. ಇತಿಹಾಸವಾದರೂ, ಕೇಂದ್ರ ಸರ್ಕಾರದ ಸುಪರ್ದಿಗೆ ಬರುವ ಪ್ರಾಚ್ಯವಸ್ತು ಮತ್ತು ಪುರಾತತ್ವ ಇಲಾಖೆಯು ಶ್ರೀರಾಮ ಹಾಗೂ ಸೀತಾಮಾತೆ ಇಲ್ಲಿಗೆ ಬಂದಿದ್ದರು ಎಂಬುದಕ್ಕೆ ಕುರುಹುಗಳನ್ನು ಪತ್ತೆ ಹಚ್ಚಿ, ಶ್ರೀರಾಮ ನಡೆದಿದ್ದ ಜಾಗವೆಂದು ಕೊಳದ ಬಳಿಯೇ ಮಾಹಿತಿ ಫಲಕ ಅಳವಡಿಸಿ, ಅಧಿಕೃತ ಮುದ್ರೆ ಒತ್ತಿದೆ.

ಸಣ್ಣ ಗುಹೆಯಂತಿರುವ ಆ ಕೊಳದಲ್ಲಿ ಸದಾಕಾಲ ನೀರು ಹರಿಯುತ್ತದೆ. ಶ್ರೀರಾಮನ ನೆನಪಿಗಾಗಿ ಶ್ರೀರಾಮ, ಸೀತಾದೇವಿ, ಭರತ ಹಾಗೂ ಆಂಜನೇಯನ ಮೂರ್ತಿಯನ್ನು ಕೊಳದ ಬಳಿ ಕೆತ್ತಲಾಗಿದ್ದು, ಇದರ ಜೊತೆಗೆ ಶ್ರೀರಾಮ ಮತ್ತು ಸೀತಾದೇವಿ ಪಾದುಕೆಗಳನ್ನು ಸಹ ಕೆತ್ತಲಾಗಿದೆ. ಈಗಲೂ ಸಹ ಸಾವಿರಾರು ಮಂದಿ ಅಲ್ಲಿಗೆ ಆಗಮಿಸಿ ಕೊಳವನ್ನು ವೀಕ್ಷಿಸುತ್ತಾರೆ.



> 6 ಶ್ರೀರಾಮನ ಜನ್ಮ ಸ್ಥಳ ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣಪ್ರತಿಷ್ಠಾಪನೆಯಾಗುತ್ತಿರುವುದು ಸಂತಸದ ವಿಚಾರ. ಅದರಲ್ಲೂ ಪ್ರಧಾನಿ ನರೇಂದ್ರಮೋದಿ ನೇತೃತ್ವದಲ್ಲಿ ಈ ಕಾರ್ಯ ನಡೆಯುತ್ತಿರುವುದು ವಿಶೇಷ. ಈ ಸಂದರ್ಭದಲ್ಲಿ ನಮ್ಮ ಮೇಲುಕೋಟೆಯನ್ನು ಸ್ಮರಿಸಬೇಕು. ಏಕೆಂದರೆ ಮೇಲುಕೋಟೆಯ ಧನುಷ್ಕೋಟಿ ಶ್ರೀರಾಮ ಹಾಗೂ ಸೀತಾಮಾತೆ ನಡೆದಾಡಿದ್ದ ಜಾಗ. ಜೊತೆಗೆ ಶ್ರೀರಾಮನಿಗೂ ಚಲುವನಾರಾಯಣನಿಗೂ ಅವಿನಾಭಾವ ಸಂಬಂಧವಿತ್ತು. ಶ್ರೀರಾಮ ಪ್ರಪಂಚವನ್ನೇ ಆಳಿದ ಮರ್ಯಾದಾ ಪುರುಷೋತ್ತಮನಾಗಿದ್ದು, ರಾಮನನ್ನು ಧರ್ಮಾತೀತವಾಗಿ ಎಲ್ಲರೂ ಸ್ಮರಿಸಬೇಕು. ನಮ್ಮ ಮೇಲುಕೋಟೆಯಲ್ಲಿ ಶ್ರೀರಾಮ ಸಂಚರಿಸಿದ್ದು, ನಿಜಕ್ಕೂ ಸಂತಸದ ವಿಚಾರ.
>
> – ಸ್ಥಾನಿಕಂ ಶ್ರೀನಿವಾಸನ್ ನರಸಿಂಹನ್ ಗುರೂಜಿ, *ಮೇಲುಕೋಟೆ.*

ಶ್ರೀರಾಮನ ಜೊತೆಯಲ್ಲೇ ಕೆಲಕಾಲ ಚಲುವನಾರಾಯಣಸ್ವಾಮಿ ಇದ್ದರು ಎಂಬ ಕುರುಹುಗಳಿದ್ದು, ಪ್ರತಿವರ್ಷ ಚಲುವನಾರಾಯಣಸ್ವಾಮಿಗೆ ವೈರಮುಡಿ ಸಂದರ್ಭದಲ್ಲಿ ಚಿನ್ನಾಭರಣ ತೊಡಿಸುವ ವೇಳೆ ಶ್ರೀರಾಮ ಪೂಜೆಯನ್ನು ಮೇಲುಕೋಟೆಯಲ್ಲಿ ಮಾಡುತ್ತಾರೆ. ಶ್ರೀ ಚಲುವನಾರಾಯಣಸ್ವಾಮಿಗೆ ಮತ್ತೊಂದು ಹೆಸರಿದ್ದು ಅದು 'ರಾಮಪ್ರಿಯ' ಎಂಬುದಾಗಿದೆ. ಶ್ರೀರಾಮನ ಮಗ ಕುಶನನ್ನು ಯದುವಂಶದ ಕನ್ಯೆಯೊಂದಿಗೆ ಮದುವೆ ಮಾಡಿದಾಗ ಯದುವಂಶದವರೊಂದಿಗೆ ಸಹ ಚಲುವನಾರಾಯಣಸ್ವಾಮಿ ನಂಟು ಹೊಂದಿದ್ದರು ಎಂಬ ಮಾತಿದ್ದು, ಹೀಗೆ ಶ್ರೀರಾಮ ಹಾಗೂ ಚಲುವನಾರಾಯಣ ಸ್ವಾಮಿ ಸಂಬಂಧ ನಡೆದುಕೊಂಡು ಬಂದಿದೆ.

ಇನ್ನು ಮೇಲುಕೋಟೆಯಲ್ಲಿ ಸಂಚರಿಸಿರುವ ಶ್ರೀರಾಮಾನುಜಚಾರ್ಯರ ಅವತಾರ ಲಕ್ಷ್ಮಣ ಎಂಬುದು ಇತಿಹಾಸ ತಜ್ಞರ ವಾದವಾಗಿದ್ದು, ಶ್ರೀರಾಮ– ಸೀತೆ ಮೇಲುಕೋಟೆಯಲ್ಲಿದ್ದ ಬಳಿಕ ರಾಮಾನು ಜಾಚಾರ್ಯರ ಅವತಾರದಲ್ಲಿ ಲಕ್ಷ್ಮಣ ಸಹ ಬಂದಿದ್ದ ಎಂಬ ಮಾತಿದೆ. ಒಟ್ಟಾರೆ ರಾಮ, ಲಕ್ಷ್ಮಣ, ಸೀತಾಮಾತೆ ಹಾಗೂ ರಾಮನ ಪುತ್ರ ಕುಶನಿಗೂ ಮೇಲು ಕೋಟೆಗೂ ಅವಿನಾಭಾವ ಸಂಬಂಧಗಳಿವೆ ಎಂಬುದು ಪುರಾಣ ಪುಣ್ಯ ಕಥೆಗಳಿಂದ ತಿಳಿಯುತ್ತದೆ.

ಇದಲ್ಲದೇ ಕರ್ನಾಟಕದ ಹಂಪಿಯಲ್ಲೂ ಶ್ರೀರಾಮ ನೆಲೆಸಿದ್ದ ಎಂಬ ಮಾತಿದ್ದು, ಸೀತಾಮಾತೆಯನ್ನು ಹುಡುಕಲು ಅಂಜನಾದ್ರಿಯಲ್ಲಿದ್ದ ಆಂಜನೇಯನ ಸಹಾಯ ಪಡೆಯಲು ಬಂದಿದ್ದ ಶ್ರೀರಾಮ ಹಂಪಿಯಲ್ಲಿ ನೆಲೆಸಿದ್ದ. ಈ ಪುಣ್ಯಕ್ಷೇತ್ರದಲ್ಲೇ ಅಕ್ಕ–ಬುಕ್ಕರು ಹಂಪಿಯಲ್ಲಿ ವಿಜಯನಗರ ಸಾಮಾಜ್ಯವನ್ನು ಸ್ಥಾಪಿಸಿದ್ದರು ಎಂಬ ಮಾತನ್ನು ಇತಿಹಾಸ ಹೇಳುತ್ತದೆ.

ಸದ್ಯ ಶ್ರೀರಾಮನ ಜನ್ಮಸ್ಥಳ ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನಾ ಕಾರ್ಯ ನಡೆಯುತ್ತಿದ್ದು, ಶ್ರೀರಾಮನ ಜಯಘೋಷ ದೇಶಾದ್ಯಂತ ಹರಡಿದೆ. ಅದರಲ್ಲೂ ಶ್ರೀರಾಮ ನಮ್ಮ ಮೇಲುಕೋಟೆ ಯಲ್ಲಿ ನಡೆದಾಡಿದ್ದ ಎಂಬ ಕಾರಣಕ್ಕೆ ಸ್ಥಳೀಯರು ಹಾಗೂ ಕನ್ನಡಿಗರು ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠಾಪನಾ ಸಂದರ್ಭದಲ್ಲಿ ಶ್ರೀರಾಮನನ್ನು ನೆನೆಯುತ್ತಾ ಸಂತಸ ಪಡುತ್ತಿದ್ದಾರೆ.

ಅಯೋಧ್ಯೆಯಲ್ಲಿರೋದು ಬಿಜೆಪಿ ರಾಮ; ನಮಗೆ ಸಿದ್ದರಾಮಯ್ಯನೇ ಶ್ರೀರಾಮ



ಚಿತ್ರದುರ್ಗ, ಜ.1– ಮುಖ್ಯಮಂತ್ರಿ ಸಿದ್ದರಾಮಯ್ಯನವರೇ "ನಮಗೆ ಶ್ರೀರಾಮ". ಅಯೋಧ್ಯೆಯಲ್ಲಿರೋದು ಬಿಜೆಪಿ ರಾಮ ಎಂದು ಕಾಂಗ್ರೆಸ್ ಹಿರಿಯ ಮುಖಂಡ, ಮಾಜಿ ಸಚಿವ ಎಚ್. ಆಂಜನೇಯ ಸೋಮವಾರ ಹೇಳಿದ್ದಾರೆ.

ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನಾ ಸಮಾರಂಭಕ್ಕೆ ಸಿದ್ದರಾಮಯ್ಯ ಅವರನ್ನು ಆಹ್ವಾನಿಸದಿರುವ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮಾಜಿ ಸಚಿವ ಹಾಗೂ ಸಿದ್ದರಾಮಯ್ಯ ಅವರ ಆಪ್ತ ಆಂಜನೇಯ ಅವರು ಈ ಹೇಳಿಕೆ ನೀಡಿದ್ದಾರೆ.

ಅಯೋಧ್ಯೆ ಉದ್ಘಾಟನಾ ಸಮಾರಂಭಕ್ಕೆ ಸಿದ್ದರಾಮಯ್ಯ ಅವರನ್ನು ಆಹ್ವಾನಿಸದಿರುವುದು ಒಳ್ಳೆಯ ಬೆಳವಣಿಗೆ. ನಮಗೆ ಸಿಎಂ ಸಿದ್ದರಾಮಯ್ಯ ಅವರೇ ಭಗವಾನ್ ಶ್ರೀರಾಮ. ಅಯೋಧ್ಯೆಯಲ್ಲಿರುವ ರಾಮನನ್ನು ಏಕೆ ಪೂಜಿಸಬೇಕು ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯನವರು ತಮ್ಮ ಹುಟ್ಟೂರು ಸಿದ್ದರಾಮನಹುಂಡಿಯಲ್ಲಿರುವ ದೇವಸ್ಥಾನದಲ್ಲಿ ಶ್ರೀರಾಮನನ್ನು ಪೂಜಿಸಲಿದ್ದಾರೆ. ಅಯೋಧ್ಯೆಯಲ್ಲಿರೋದು ಬಿಜೆಪಿಯ ರಾಮ. ಹೀಗಾಗಿ ಬಿಜೆಪಿಯವರನ್ನು ಕರೆಸಿಕೊಂಡು ಅಲ್ಲಿ ಭಜನೆ ಮಾಡುತ್ತಾರೆ. ಆದರೆ ನಮ್ಮ ರಾಮ ಎಲ್ಲಾ ಕಡೆ ಇದ್ದಾನೆ, ನಮ್ಮ ಎದೆಯಲ್ಲಿಯೂ ಇದ್ದಾನೆ ನಾನು ಆಂಜನೇಯ, ಗೊತ್ತಲ್ವಾ ಆಂಜನೇಯ ಏನು ಮಾಡಿದ ಅಂತಾ ಎಂದು ಕುಟುಕಿದ್ದಾರೆ.

ನಮ್ಮ ಸಮುದಾಯದ ಜನ ರಾಮ, ಹನುಮಂತ ಎಂದು ಹೆಸರಿಟ್ಟುಕೊಳ್ಳುತ್ತಾರೆ. ಈ ದೇವರುಗಳು ನಮ್ಮ ಸಮುದಾಯಕ್ಕೆ ಸೇರಿದವರು. ಆದರೆ ಬಿಜೆಪಿ ಧರ್ಮಗಳನ್ನು ಒಡೆದು ಆಳುವ ನೀತಿ ಅನುಸರಿಸುತ್ತಿದೆ. ಧರ್ಮದ ವಿರುದ್ಧ ಹೇಳಿಕೆ ನೀಡಿ ಮತ ಪಡೆಯುವ ಭ್ರಮೆಯಲ್ಲಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ವಾಗ್ದಾಳಿ ನಡೆಸಿದರು.

ಸಂವಿಧಾನಕ್ಕೆ ಧಕ್ಕೆ ತರುವವರ ನಿರ್ದಾಕ್ಷಿಣ್ಯವಾಗಿ ವಿರೋಧಿಸಿ: ಸಿಎಂ

ಬೆಂಗಳೂರು, ಜ.1– ಸಂವಿಧಾನಕ್ಕೆ ಧಕ್ಕೆ ತರುವವರನ್ನು ನಿರ್ದಾಕ್ಷಿಣ್ಯವಾಗಿ ವಿರೋಧಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಮುಖ್ಯಮಂತ್ರಿ, ಚಲನಶೀಲತೆ ಇಲ್ಲದ ಸಮಾಜದಲ್ಲಿ ಅಭಿವೃದ್ಧಿ ಸಾಧ್ಯವಿಲ್ಲ. ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಅದಕ್ಕಾಗಿಯೇ ಸಂವಿಧಾನದ ಪೀಠಿಕೆವನ್ನು ಓದಿ ಅರ್ಥ ಮಾಡಿಕೊಂಡು ಅದರಂತೆ ನಡೆಯಬೇಕು. ಸಂವಿಧಾನದ ವಿರೋಧಿಗಳು ಸಮಾಜದಲ್ಲಿ ಬದಲಾವಣೆ ಬಯಸುವುದಿಲ್ಲ. ಸಂವಿಧಾನದ ಆಶಯಗಳನ್ನು ಈಡೇರಿಸಬೇಕು. ಇದಕ್ಕೆ ಧಕ್ಕೆ ತರುವವರನ್ನು ನಿರ್ದಾಕ್ಷಿಣ್ಯವಾಗಿ ವಿರೋಧಿಸಬೇಕು ಎಂದರು.

ಇತಿಹಾಸ ಎಲ್ಲರಿಗೂ ತಿಳಿಯಬೇಕು. ಇತಿಹಾಸ ತಿಳಿಯದವರು ಇತಿಹಾಸ ರಚಿಸಲು ಸಾಧ್ಯವಿಲ್ಲ. ಅದಕ್ಕಾಗಿ ಪ್ರತಿಯೊಬ್ಬ ಚರಿತ್ರಾರ್ಹ ವ್ಯಕ್ತಿಗಳ ಅಧ್ಯಯನ ವಾಗಬೇಕು. ಅಮರಾಶಿಲ್ಪಿ ಜಕಣಾಚಾರಿ ಸಂಸ್ಮರಣೆ 2019ರಲ್ಲಿ ಪ್ರಾರಂಭವಾದರೂ ಕೋವಿಡ್ ಇದ್ದುದರಿಂದ ಆಚರಿಸಲಾಗಲಿಲ್ಲ. ಕಳೆದ ವರ್ಷ ವಿಜಯನಗರ ಜಿಲ್ಲೆಯಲ್ಲಿ ಆಚರಿಸಲಾಗಿತ್ತು. ರಾಜ್ಯಮಟ್ಟದ ಜಯಂತಿಗಳನ್ನು ಬೆಂಗಳೂರಿನಲ್ಲಿಯೇ ಆಚರಿಸಬೇಕೆಂದು ಸೂಚಿಸಲಾಗಿದೆ. ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿಯೂ ಆಚರಿಸಲಾಗುತ್ತದೆ ಎಂದು ತಿಳಿಸಿದರು. ಜಕಣಾಚಾರಿ ಇಡೀ ರಾಜ್ಯಕ್ಕೆ ಗೊತ್ತಿರುವ ವರು. ಅವರು ಕಾಲ್ಪನಿಕ ವ್ಯಕ್ತಿ ಎನ್ನುವುದು ಸುಳ್ಳು ಜಕಣಾಚಾರಿ ವಿಶ್ವಕರ್ಮ ಸಮಾಜದಲ್ಲಿ ಹುಟ್ಟಿದವರು. ಅವರು ಬೆಳೆದ ಎತ್ತರ ಜನರಿಗೆ ತಿಳಿಯಬಾರದೆಂದು ಇತಿಹಾಸ ತಿರುಚುವ ಪ್ರಯತ್ನ ಮಾಡಲಾಗಿದೆ. ಪಟ್ಟಭದ್ರ ಹಿತಾಸಕ್ತಿ ಗಳು ಈ ಕೆಲಸ ಮಾಡಿದ್ದರೂ ಮಾಡಿರಬಹುದು. ಅಮರ ಶಿಲ್ಪಿ ಜಕಣಾಚಾರಿ ಅವರ ಇತಿಹಾಸ ನಮ್ಮ ಮುಂದಿದೆ. ವಿಶ್ವಕರ್ಮ ಅಭಿವೃದ್ಧಿ ನಿಗಮ, ವಿಶ್ವಕರ್ಮ ಜಯಂತಿ ಯನ್ನು ಆಚರಿಸುವ ತೀರ್ಮಾನ ನಮ್ಮ ಸರ್ಕಾರವೇ ಹಿಂದೆ ಮಾಡಿತ್ತು ಎಂದರು.

ನಮ್ಮ ಸಂವಿಧಾನ ಜಾತಿ ರಹಿತ, ವರ್ಗರಹಿತ, ಜಾತ್ಯಾತೀತ ಸಮ ಸಮಾಜ ನಿರ್ಮಾಣ ಮಾಡಬೇಕೆಂದು ಹೇಳಿದೆ. ಸ್ವಾರ್ಥಕ್ಕಾಗಿ ಸಮಾಜದಲ್ಲಿ ಅಸಮಾನತೆ ಉಂಟಾಗಿದೆ. ಶತ–ಶತಮಾನಗಳಿಂದ ಶೂದ್ರರು ಅಕ್ಷರ ಸಂಸ್ಕೃತಿಯಿಂದ ವಂಚಿತ ರಾಗಿದ್ದಾರೆ. ಅಸಮಾನತೆಗೆ ಬಲಿಯಾಗಿರುವ ವರ್ಗದ ಜನರಿಗೆ ಆರ್ಥಿಕ ಶಕ್ತಿ ತುಂಬಿ ಅವರು ಮುಖ್ಯವಾಹಿನಿಗೆ ಸೇರುವಂತಾಗ ಬೇಕು. ಎಲ್ಲರಿಗೂ ಅವಕಾಶ ಒದಗಿಸುವುದು ಸರ್ಕಾರದ ಜವಾಬ್ದಾರಿ ಹಾಗೂ ಕರ್ತವ್ಯ ಎಂದು ಮುಖ್ಯಮಂತ್ರಿ ತಿಳಿಸಿದರು.



ಮೈಸೂರಲ್ಲಿ 'ಭೀಮಾ ಕೋರೆಗಾಂವ್' ವಿಜಯೋತ್ಸವ

ಜಯನಗರ ರೈಲ್ವೆ ಗೇಟ್ ಬಳಿಯ ವಿಜಯ ಸ್ತಂಭ, ಭಗವಾನ್ ಬುದ್ಧ, ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿ, ಐತಿಹಾಸಿಕ ಕ್ಷಣ ಸ್ಮರಣೆ



ಮೈಸೂರು, ಜ.1(ಎಂಕೆ)– ಮೈಸೂರಿನಲ್ಲಿ 206ನೇ ವರ್ಷದ 'ಭೀಮಾ ಕೋರೆಗಾಂವ್' ವಿಜಯೋತ್ಸವ ಆಚರಿಸಲಾಯಿತು.

ಜೈ ಭೀಮಾ ಕೋರೆಗಾಂವ್ ವಿಜಯೋತ್ಸವ ಸಮಿತಿ ವತಿಯಿಂದ ಸೋಮವಾರ ಅಶೋಕಪುರಂನ ಜಯನಗರ ರೈಲ್ವೆ ಗೇಟ್ ಹತ್ತಿರದಲ್ಲಿರುವ ವಿಜಯ ಸ್ತಂಭ, ಭಗವಾನ್ ಬುದ್ಧ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪನಮನ ಸಲ್ಲಿಸುವ ಮೂಲಕ 'ಭೀಮಾ ಕೋರೆಗಾಂವ್' ವಿಜಯೋತ್ಸವ ಆಚರಿಸಲಾಯಿತು.

ವಿಜಯೋತ್ಸವ ಆಚರಣೆಯ ಮುಖ್ಯ ಭಾಷಣಕಾರರಾಗಿ ಭಾಗವಹಿಸಿದ್ದ ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಡಾ. ಶಿವಕುಮಾರ್, ಹೊಸ ವರ್ಷಾಚರಣೆ ಜೊತೆಗೆ ದೇಶದೆಲ್ಲೆಡೆ 'ಭೀಮಾ ಕೋರೆಗಾಂವ್' ವಿಜಯೋತ್ಸವವನ್ನೂ ಆಚರಿಸಲಾಗುತ್ತಿದೆ. 2001ನೇ ಇಸವಿಯಲ್ಲಿ ಡಾ. ಸರಜೀವ್ ಗಾಡ್ಕರ್ ಎಂಬ ದಲಿತ ಲೇಖಕರು 'ಭೀಮಾ ಕೋರೆಗಾಂವ್' ಪುಸ್ತಕವನ್ನು ಪ್ರಕಟಣೆ ಮಾಡಿದರು. ಅಂದಿನಿಂದ 'ಭೀಮಾ ಕೋರೆಗಾಂವ್' ವಿಜಯೋತ್ಸವದ ಆಚರಣೆ ಪ್ರತಿವರ್ಷ ಎಲ್ಲೆಡೆ ನಡೆಸಿಕೊಂಡು ಬರಲಾಗುತ್ತಿದೆ ಎಂದರು.

206 ವರ್ಷಗಳ ಹಿಂದೆ ಈ ಘಟನೆ ನಡೆದಿದೆ. ದೇಶದಲ್ಲಿ ಚಾತುರ್ವರ್ಣ ವ್ಯವಸ್ಥೆಯಿಂದ ಒಂದೊಂದು ಜಾತಿಯೂ ಪ್ರತ್ಯೇಕತೆ ಕಾಪಾಡಿಕೊಂಡಿದ್ದರಿಂದ ಹಾಗೂ ಭಾರತೀಯ ಸಮಾಜದಲ್ಲಿದ್ದ ಒಡಕನ್ನು ಬಂಡವಾಳ ಮಾಡಿಕೊಂಡ ವಿದೇಶಿ ಶಕ್ತಿಗಳು ಸುಲಭವಾಗಿ ದಾಳಿ ಮಾಡಿ, ಆಳ್ವಿಕೆ ನಡೆಸಲು ಸಾಧ್ಯವಾಯಿತು. 1600ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಪ್ರಾರಂಭಿಸಿದ ಬ್ರಿಟಿಷರು, ಭಾರತವನ್ನೆಲ್ಲಾ ಗೆದ್ದಿದ್ದರೂ ಮರಾಠ(ಮಹಾರಾಷ್ಟ್ರ)ರನ್ನು ಗೆಲ್ಲಲು ಸಾಧ್ಯವಾಗಿರಲಿಲ್ಲ. ಆ ಸಂದರ್ಭದಲ್ಲಿ ಮಹಾರಾಷ್ಟ್ರದಲ್ಲಿ ಆಳ್ವಿಕೆ ಮಾಡುತ್ತಿದ್ದ ಪೇಶ್ವೆಗಳು, ಬಹಳ ಸಂಪ್ರದಾಯಸ್ಥರೆಂದು ಹೆಸರುವಾಸಿಯಾಗಿದ್ದರ ಜೊತೆಗೆ ತುಂಬಾ ಪ್ರಜಾ ಪೀಡಕರು ಮತ್ತು ಕಟ್ಟುನಿಟ್ಟಾಗಿ ಜಾತಿ ವ್ಯವಸ್ಥೆಯನ್ನು ಪಾಲಿಸಿದವರೂ ಆಗಿದ್ದರು. ಹಾಗಾಗಿ ಅಲ್ಲಿನ ಜನರಲ್ಲಿ ಅವರ ವಿರುದ್ಧ ತುಂಬಾ ಅಸಮಾಧಾನವಿದ್ದರೂ ಅಧಿಕಾರದ ಬಲದಿಂದ ನಿಭಾಯಿಸುತ್ತಿದ್ದರು. ಆಗ ಪೇಶ್ವೆಗಳು ಮತ್ತು ಬ್ರಿಟಿಷರ ನಡುವೆ ಇದ್ದ ನಿರ್ಣಾಯಕ ವೈರತ್ವ 'ಕೋರೆಗಾಂವ್' ಕದನದಲ್ಲಿ ಕೊನೆಯಾಯಿತು ಎಂದು ತಿಳಿಸಿದರು.

1817ರ ಡಿ.31 ರಂದು 500 ಮಂದಿ ಮಹಾರ್ ಸಮುದಾಯದ ಸೈನಿಕರನ್ನೊಳಗೊಂಡ ಬ್ರಿಟಿಷರ ಸೈನ್ಯ ಪುಣೆಯಿಂದ ಹೊರಡುತ್ತದೆ. ಸುಮಾರು 25 ಕಿ.ಮೀ ನಡೆದು ಬೆಳಗ್ಗೆ ಸುಮಾರು 10 ಗಂಟೆಗೆ ವೇಳೆಗೆ 'ಭೀಮಾ ಕೋರೆಗಾಂವ್' ತೀರದ ಪ್ರದೇಶಕ್ಕೆ ತಲುಪುತ್ತಾರೆ. ಬ್ರಿಟಿಷರು ಧೈರ್ಯ, ಸಾಹಸಕ್ಕೆ ಹೆಸರಾಗಿದ್ದ ಮಹಾರ್ ಸಮುದಾಯದ ಸೈನಿಕರನ್ನು ಸೇನೆಯಲ್ಲಿ ಆಯ್ಕೆ ಮಾಡುವ ಮೂಲಕ ಗೆಲುವಿನ ಲೆಕ್ಕಾಚಾರ ಹಾಕಿದ್ದರು. ಅದರಂತೆ ಅವರ ಲೆಕ್ಕಾಚಾರವೂ ಸರಿಯಾಗಿತ್ತು. ಬೆಳಗ್ಗೆ 10 ಗಂಟೆಯಿಂದ ಆರಂಭವಾದ ಯುದ್ಧ ರಾತ್ರಿ 10 ಗಂಟೆಯವರೆಗೆ ಅಂದರೆ ಸತತ 12 ಗಂಟೆಗಳ ಕಾಲ ನಡೆಯಿತು. ಪೇಶ್ವೆಯ 30 ಸಾವಿರ ಸೈನಿಕರ ವಿರುದ್ಧ ಮಹಾರ್ ಸಮುದಾಯದ 500 ಮಂದಿ ವೀರರು ಹೋರಾಡಿ ಗೆದ್ದದ್ದು ವಿಸ್ಮಯವಾಗಿದೆ. ಯುದ್ಧದ ಗೆಲುವಿನ ಸ್ಮರಣೆಗಾಗಿ ಭೀಮಾ ನದಿ ತೀರದ ದಡೆಯಲ್ಲಿ ವಿಜಯ ಸ್ತಂಭ ಸ್ಥಾಪಿಸಲಾಗುತ್ತದೆ. ಗೆಲುವಿನ ಸುದ್ದಿ ತಿಳಿದ ಬ್ರಿಟಿಷ್ ರಾಣಿ, ಇದೊಂದು ಐತಿಹಾಸಿಕ ವಿಜಯ ಎಂದು ಉಲ್ಲೇಖಿಸುತ್ತಾರೆ ಎಂದರು.

ಈ 'ಭೀಮಾ ಕೋರೆಗಾಂವ್' ಚರಿತ್ರೆ ಇತಿಹಾಸದಲ್ಲಿ ಮುಚ್ಚಿ ಹೋಗಿತ್ತು. ಆದರೆ ಇದಕ್ಕೆ ಮತ್ತೆ ಜೀವ ಬಂದಿದ್ದು, 1926ನೇ ಇಸವಿಯಲ್ಲಿ. ಅಂದು ಬ್ರಿಟಿಷ್ ಸರ್ಕಾರ, ಸೇನೆಯಲ್ಲಿದ್ದ ಮಹಾರ್ ಸಮುದಾಯದ ಸೈನಿಕರನ್ನು ಕಾರಣವಿಲ್ಲದೆ ಸೇವೆಯಿಂದ ವಜಾ ಮಾಡುವಂತೆ ಆದೇಶ ನೀಡುತ್ತದೆ. ಆ ಸಂದರ್ಭದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಈ ಚರಿತ್ರೆಯನ್ನು ಮರು ಶೋಧಿಸಿ, ಬ್ರಿಟಿಷರ ಮುಂದಿಡುತ್ತಾರಲ್ಲದೆ, ಬ್ರಿಟಿಷ್ ಸೇನೆಗೆ ಮಹಾರ್ ಸಮುದಾಯದ ಕೊಡುಗೆಯನ್ನು ತಿಳಿಸಿ, ಮಹಾರ್ ಸೈನಿಕರನ್ನು ಮತ್ತೆ ಸೇನೆಗೆ ಸೇರಿಸಿಕೊಳ್ಳುವಂತೆ ಆದೇಶ ಮಾಡಿಸುತ್ತಾರೆ. ದೇಶದಲ್ಲಿ ನಡೆದಿರುವ ಯಾವುದೇ ಯುದ್ಧಕ್ಕೂ 'ಭೀಮಾ ಕೋರೆಗಾಂವ್' ಯುದ್ಧವನ್ನು ಹೋಲಿಸಲು ಸಾಧ್ಯವಿಲ್ಲ. ಭೂಮಿಯ ಮೇಲೆ ನಡೆಯುವ ವಿಸ್ಮಯಗಳಂತೆ ಈ ಯುದ್ಧವೂ ಒಂದು ವಿಸ್ಮಯವಾಗಿದೆ ಎಂದು ವಿವರಿಸಿದರು.

ಸ್ವಾಭಿಮಾನಕ್ಕಾಗಿ ನಡೆದ ಹೋರಾಟ: ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ದೇಶದಲ್ಲಿ ಭೂಮಿಗಾಗಿ, ಹೆಣ್ಣಿಗಾಗಿ, ತಮ್ಮ ಅಸ್ತಿತ್ವ ಉಳಿವಿಗಾಗಿ ಅನೇಕ ಯುದ್ಧಗಳು, ಹೋರಾಟಗಳು ನಡೆದಿವೆ. ಆದರೆ ಸಾಮಾಜಿಕ ಅಸ್ಮಿತೆಗಾಗಿ, ಸ್ವಾಭಿಮಾನಕ್ಕಾಗಿ ನಡೆದ ಏಕೈಕ ಯುದ್ಧ 'ಭೀಮಾ ಕೋರೆಗಾಂವ್' ಯುದ್ಧವಾಗಿದೆ. ಮನುವಾದಿಗಳ ವ್ಯವಸ್ಥೆ ವಿರುದ್ಧ ನಡೆದಿರುವ ಸ್ವಾಭಿಮಾನದ ಚರಿತ್ರೆಯಾಗಿದೆ ಎಂದು ಹೇಳಿದರು.

ಚಾಮರಾಜನಗರ ನಳಂದ ಬೌದ್ಧ ವಿಶ್ವವಿದ್ಯಾನಿಲಯದ ಭೋದಿದತ್ತ ಬಂತೇಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್, ಲಾ ಗೈಡ್ ಮಾಸ ಪತ್ರಿಕೆ ಸಂಸ್ಥಾಪಕ ಹೆಚ್.ಎನ್.ವೆಂಕಟೇಶ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಚಿಕ್ಕ ಜವರಪ್ಪ, ನಗರಪಾಲಿಕೆ ಮಾಜಿ ಸದಸ್ಯರಾದ ಪಲ್ಲವಿ ಬೇಗಂ, ಪ್ರಭುಸ್ವಾಮಿ, ಆದಿ ಕರ್ನಾಟಕ ಮಹಾಸಂಸ್ಥೆ ಅಧ್ಯಕ್ಷ ಸುನೀಲ್ ಕುಮಾರ್, ಸಮಾಜ ಸೇವಕರಾದ ಈಶ್ವರ್, ಆರ್.ಸಿ. ಮಹೇಶ್, ಯುವ ಮುಖಂಡ ಎಸ್. ಸಂತೋಷ್ ಮತ್ತಿತರರು ಉಪಸ್ಥಿತರಿದ್ದರು.

21ನೇ ಶತಮಾನದಲ್ಲಿ ಕೋರೆಗಾಂವ್ ಯುದ್ಧ...!

ನಂಜನಗೂಡಿನಲ್ಲಿ ಮಹಿಷನ ರಂಗೋಲಿಯನ್ನು ತುಳಿದು ಅಪಮಾನಗೊಳಿಸಲಾಗಿದೆ. ಇದೇ ರೀತಿ ನಮ್ಮ ಮೂಲಪುರುಷರನ್ನು ಅಪಮಾನಗೊಳಿಸುವುದು ಮುಂದುವರೆದರೆ ನಾವು ಅದಕ್ಕೆ ತಕ್ಕ ಉತ್ತರವನ್ನು ನೀಡಬೇಕಾಗುತ್ತದೆ. 1818ರಲ್ಲಿ ನಡೆದ 'ಕೋರೆಗಾಂವ್' ಯುದ್ಧ ಮತ್ತೊಮ್ಮೆ 21ನೇ ಶತಮಾನದಲ್ಲಿ ನಡೆಯಲಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಎಚ್ಚರಿಕೆ ನೀಡಿದರು.

ನಾವು ಬುದ್ಧನ ಅನುಯಾಯಿಗಳು. ನಾವು ಯಾವತ್ತೂ ಯುದ್ಧ ಬಯಸುವ ಜನರಲ್ಲ. ಆದರೆ, ಮಿತಿ ಮೀರಿದರೆ ನಮಗೂ ಕೂಡ ನೀವು ಗೌರವಿಸುವವರನ್ನ ರಂಗೋಲಿಯಲ್ಲಿ ಬರೆದು ಅಗೌರವ ತೋರುವ ಶಕ್ತಿ ನಮಗೂ ಇದೆ. ನಮಗೂ ಹೊಸಕಿ ಹಾಕುವ ಶಕ್ತಿ ಇದೆ. ಆದರೆ ಕಾನೂನಿಗೆ ತಲೆ ಬಾಗಿ ನಡೆಯುತ್ತಿದ್ದೇವೆ. ಆದ್ದರಿಂದ ನಮ್ಮ ಮೂಲ ಪುರುಷರನ್ನು ರಂಗೋಲಿಯಲ್ಲಿ ಬರೆದು ತುಳಿಯುವುದು, ಬೆಂಕಿಯಲ್ಲಿ ಸುಡುವ ಹೀನ ಸಂಸ್ಕೃತಿಯನ್ನು ತೆಗೆದು ಹಾಕಬೇಕು. ಅಧಿಕಾರದಲ್ಲಿ ಯಾರೇ ಇದ್ದರೂ ನಮ್ಮನ್ನು ದಮನ ಮಾಡುವ ಶಕ್ತಿ ಯಾರಿಗೂ ಇಲ್ಲ. ಕಾನೂನಿನನ್ವಯ ಎಲ್ಲರಿಗೂ ಸಮಾನವಾಗಿ ಬದುಕುವ ಕೆಲಸವನ್ನು ಮಾಡಬೇಕು ಎಂದು ಒತ್ತಾಯಿಸಿದರು.

ನಂಜನಗೂಡಿನಲ್ಲಿ ನಡೆದ ಅಹಿತಕರ ಘಟನೆಯನ್ನು ಪ್ರಶ್ನೆ ಮಾಡಿದ ದಲಿತ ಸಂಘಟನೆ ವಿರುದ್ಧ ದೂರು ದಾಖಲಾಗಿದ್ದು, ಅದಕ್ಕೆ ಪ್ರತಿ ದೂರು ಕೂಡ ದಾಖಲಿಸಲಾಗಿದೆ. ಆದ್ದರಿಂದ ಸತ್ಯ ಯಾವುದೆಂಬುದನ್ನು ಕಾನೂನು ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಬಹಳ ಎಚ್ಚರದಿಂದ ನ್ಯಾಯ ದೊರಕಿಸಿಕೊಡುವ ಕೆಲಸ ಮಾಡಬೇಕು. ಇಲ್ಲವಾದಲ್ಲಿ ನಮ್ಮ ಹಕ್ಕುಗಳ ರಕ್ಷಣೆಗಾಗಿ ಮತ್ತೊಮ್ಮೆ ಕೋರೆಗಾಂವ್ ಯುದ್ಧ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

'ಪವರ್ ಆಫ್ ವೋಟ್' ಕಿರುಚಿತ್ರದ ಮೂಲಕ ಮತದಾರರಲ್ಲಿ ಜಾಗೃತಿ ಸ್ಪರ್ಧೆ



ಮೈಸೂರು, ಜ.1(ಎಂಕೆ)– ಆತ್ಮೀಯ ಮತ ಬಾಂಧವರೇ! ನಿಮ್ಮ ಹೃದಯಗಳು ಪ್ರಜಾಪ್ರಭುತ್ವವನ್ನು ಪ್ರೋತ್ಸಾಹಿಸುವ ಸೃಜನಶೀಲ ವಿಚಾರಗಳಿಗಾಗಿ ಮಿಡಿಯುತ್ತಿವೆ. ಅಲ್ಲವೇ? ಹಾಗಿದ್ದರೆ ನಾಗರಿಕರೆಲ್ಲರೂ 'ಪವರ್ ಆಫ್ ವೋಟ್' ಶೀರ್ಷಿಕೆಯ ಕಿರುಚಿತ್ರ ರಚನೆ ಮೂಲಕ ಮತದಾನದ ಹಬ್ಬದಲ್ಲಿ ಭಾಗವಹಿಸಿ, ಬಹುಮಾನ ಗೆಲ್ಲುವಂತೆ ಮೈಸೂರು ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ಮೈಸೂರು ನಗರಪಾಲಿಕೆ ಕರೆ ನೀಡಿದೆ.

ಮುಂಬರುವ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕಿರುಚಿತ್ರ ರಚನೆ ಮೂಲಕ ಮತದಾನ ಜಾಗೃತಿ ಅಭಿಯಾನ ಕೈಗೊಳ್ಳಲಾಗಿದೆ. ಕಿರುಚಿತ್ರ 'ಪವರ್ ಆಫ್ ವೋಟ್'(POWER OF VOTE) ವಿಷಯದಡಿ ಇರಬೇಕು. ಕಿರುಚಿತ್ರದ ಅವಧಿ 1 ನಿಮಿಷವಾಗಿದ್ದು, ಕನ್ನಡ ಭಾಷೆ ಹಾಗೂ ಮೂಕ ಚಿತ್ರಗಳನ್ನು ಸ್ವೀಕರಿಸಲಾಗುವುದು. ಸಲ್ಲಿಸುವ ವಿಡಿಯೋ ಎಂಪಿ4 ಫಾರ್ಮೆಟ್‌ನಲ್ಲಿರಬೇಕು. ಕಿರುಚಿತ್ರ ಯಾವುದೇ ರಾಜಕೀಯ ಪಕ್ಷಗಳಿಗೆ ಅಥವಾ ಅವುಗಳ ಕಾರ್ಯಸೂಚಿಗೆ ಒಲವು ತೋರುವಂತಿರಬಾರದು. ಯಾವುದೇ ಅವಹೇಳನಕಾರಿ ಭಾಷೆಯನ್ನು ಬಳಸುವಂತಿಲ್ಲ. ಮುಖ್ಯ ಸಾರಾಂಶ ಇಲ್ಲದೆ ಇರುವ ಕಿರುಚಿತ್ರ ಸ್ವೀಕರಿಸುವುದಿಲ್ಲ. ಹಾಗೆಯೇ ಜ.7 ರೊಳಗೆ ಕಿರುಚಿತ್ರವನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

ಬಂಪರ್ ಬಹುಮಾನ: ಕೇವಲ ಒಂದು ನಿಮಿಷದ ಕಿರುಚಿತ್ರ ಸ್ಪರ್ಧೆಯಲ್ಲಿ ವಿಜೇತರಿಗೆ ಬಂಪರ್ ಬಹುಮಾನ ನೀಡಲಾಗುವುದು. ಪ್ರಥಮ 5000 ರೂ., ದ್ವಿತೀಯ 3000 ರೂ. ಹಾಗೂ ತೃತೀಯ 2000 ರೂ. ನಗದು ಬಹುಮಾನ ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಿಂಗ್ ರಸ್ತೆಯಲ್ಲಿ ಮಹಿಳೆಯ ಸರ ಕದ್ದಿದ್ದ

ಇಬ್ಬರು ಸರಗಳ್ಳರ ಬಂಧನ

ಮೈಸೂರು, ಜ. 1– ಇಬ್ಬರು ಸರಗಳ್ಳರನ್ನು ಬಂಧಿಸಿರುವ ಮೈಸೂರಿನ ಹೆಬ್ಬಾಳ್ ಠಾಣೆ ಪೊಲೀಸರು 30 ಗ್ರಾಂ ತೂಕದ ಮಾಂಗಲ್ಯ ಸರ ಮತ್ತು ಕೃತ್ಯಕ್ಕೆ ಬಳಸಿದ್ದ ಎನ್‌ಟಾರ್ಕ್ ಸ್ಕೂಟರ್ ಅನ್ನು ವಶಪಡಿಸಿಕೊಂಡಿದ್ದಾರೆ.

ಉದಯಗಿರಿ ನಿವಾಸಿಗಳಾದ ರಿಯಾನ್ ಅಹಮದ್(20) ಮತ್ತು ಮಹಮ್ಮದ್ ಫರಾನ್(19) ಬಂಧಿತ ಸರಗಳ್ಳರಾಗಿದ್ದು, ಡಿಸೆಂಬರ್ 17ರಂದು ಸಂಜೆ 5.45ರ ಸುಮಾರಿನಲ್ಲಿ ಹೆಬ್ಬಾಳ್ ಕೈಗಾರಿಕಾ ಪ್ರದೇಶದ ಎಕ್ಸೆಲ್ ಫಾರ್ ಎಲೆಕ್ಟ್ರಾನಿಕ್ಸ್ ಕಂಪನಿಯಲ್ಲಿ ಕೆಲಸ ಮಾಡುವ ಎನ್.ಎಸ್. ಭಾಗ್ಯ ಎಂಬುವರು ತಮ್ಮ ಸಹೋದ್ಯೋಗಿ ಲಕ್ಷ್ಮೀ ಅವರೊಂದಿಗೆ ಹೋಂಡಾ ಆಕ್ಟೀವಾ ಸ್ಕೂಟರ್‌ನಲ್ಲಿ (ಕೆಎ 55–ಎಲ್ 0117) ರಿಂಗ್ ರಸ್ತೆಯಲ್ಲಿ ಬರುತ್ತಿದ್ದಾಗ ಅಲ್ಲಿನ ಕಲ್ಯಾಣಿ ಹೋಟೆಲ್ ಮುಂಭಾಗ ಸ್ಕೂಟರ್‌ನಲ್ಲಿ ಬಂದ ಈ ಇಬ್ಬರೂ ಖದೀಮರು ಹಿಂಬದಿ ಸವಾರರಾಗಿದ್ದ ಭಾಗ್ಯ ಅವರ ಕೊರಳಿನಲ್ಲಿದ್ದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಹೆಬ್ಬಾಳ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮೈಸೂರು ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್. ಜಾಹ್ನವಿ, ವಿಜಯನಗರ ಉಪ ವಿಭಾಗದ ಎಸಿಪಿ ಗಜೇಂದ್ರಪ್ರಸಾದ್ ಮಾರ್ಗದರ್ಶನದಲ್ಲಿ ಹೆಬ್ಬಾಳ್ ಠಾಣೆ ಇನ್ಸ್‌ಪೆಕ್ಟರ್ ಎ. ಮಲ್ಲೇಶ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಕೀರ್ತಿ, ಪ್ರವೀಣ್‌ಕುಮಾರ್, ಸಿಸಿಬಿ ಸಬ್ ಇನ್ಸ್‌ಪೆಕ್ಟರ್ ಕಿರಣ್ ಅರ್ಜುನ್ ಹಂಪಿಹುಳಿ, ಸಿಬ್ಬಂದಿಗಳಾದ ರವಿಕುಮಾರ್, ಮಲ್ಲಿಕಾರ್ಜುನಪ್ಪ, ಹರೀಶ್, ಮಹೇಶ್ ಹೊಸಮನಿ, ಆನಂದ, ಚಂದ್ರಶೇಖರ್, ಸುಬಾನಲ್ಲಾ ಬಾರದಾರ, ಸುನೀಲ್, ಲಿಖಿತ್, ನರಸಿಂಹರಾಜು, ಮಹೇಶ್, ಗೋವಿಂದರಾಜು ಮತ್ತು ಕುಮಾರ್ ಅವರನ್ನೊಳಗೊಂಡ ತಂಡ ಈ ಇಬ್ಬರು ಸರಗಳ್ಳರನ್ನು ಡಿ. 27ರಂದು ಉದಯಗಿರಿಯ ಕೂಬಾ ಮಸೀದಿ ಬಳಿ ಬಂಧಿಸಿದೆ ಎಂದು ನಗರ ಪೊಲೀಸ್ ಆಯುಕ್ತರ ಕಚೇರಿಯ ಜನವರಿ 1ರ ಪ್ರಕಟಣೆ ತಿಳಿಸಿದೆ.

ಮುಂದುವರೆದ ಆನ್‌ಲೈನ್ ದೋಖಾ

ಕಮಿಷನ್ ಆಮಿಷವೊಡ್ಡಿ ಇಬ್ಬರಿಗೆ ಲಕ್ಷಾಂತರ ರೂ. ವಂಚನೆ

ಮೈಸೂರು, ಜ. 1– ಟಾಸ್ಕ್‌ಗಳನ್ನು ನಿರ್ವಹಿಸಿದರೆ ದೊಡ್ಡ ಮೊತ್ತದ ಕಮಿಷನ್ ದೊರೆಯುತ್ತದೆ ಎಂದು ಆಮಿಷವೊಡ್ಡಿ ಮೈಸೂರಿನ ಇಬ್ಬರಿಗೆ ಆನ್‌ಲೈನ್ ಮೂಲಕ ಲಕ್ಷಾಂತರ ರೂ. ವಂಚಿಸಲಾಗಿದೆ.

ಜೆ.ಪಿ.ನಗರ ನಿವಾಸಿ ಬಿ.ಎಲ್. ರಾಘವೇಂದ್ರ(43) ಎಂಬುವರಿಗೆ ಟೆಲಿಗ್ರಾಂ ಗ್ರೂಪ್‌ನಲ್ಲಿ ಪಾರ್ಟ್‌ಟೈಂ ಜಾಬ್‌ಗೆ ಆಫರ್ ಬಂದಿದ್ದು, ಟ್ರಾವೆಲ್ ಪ್ಯಾಕೇಜ್ ಬುಕ್ಕಿಂಗ್ ಟಾಸ್ಕ್ ಪೂರೈಸಿದರೆ ಕಮಿಷನ್ ನೀಡಲಾಗುವುದು ಎಂದು ತಿಳಿಸಲಾಗಿದೆ. ಅವರು ಮೊದಲನೇ ಟಾಸ್ಕ್ ಪೂರೈಸಿದಾಗ ಅವರ ಖಾತೆಗೆ ಸಾವಿರ ರೂ. ಜಮೆ ಮಾಡಿದ್ದು, ನಂತರ ಹಣ ಹೂಡಿಕೆ ಮಾಡಿ ಟಾಸ್ಕ್ ಪೂರೈಸುವಂತೆ ತಿಳಿಸಿ ಅವರಿಗೆ ಪ್ರತ್ಯೇಕವಾದ ಅಪ್ಲಿಕೇಷನ್ ನೀಡಲಾಗಿದೆ. ಅವರು 10 ಸಾವಿರ ರೂ. ಹೂಡಿಕೆ ಮಾಡಿ ಟಾಸ್ಕ್ ಪೂರೈಸಿದಾಗ ಕಮಿಷನ್ ಸೇರಿ 18 ಸಾವಿರ ರೂ. ಜಮೆ ಆಗಿರುವುದು ಅವರ ಅಪ್ಲಿಕೇಷನ್‌ನಲ್ಲಿ ತೋರಿಸಲಾಗಿದೆ. ಈ ಹಣ ಪಡೆಯಲು ಮತ್ತೆ ಹಣ ಹೂಡಿಕೆ ಮಾಡಿ ಹೊಸ ಟಾಸ್ಕ್‌ಗಳನ್ನು ಕಂಪ್ಲೀಟ್ ಮಾಡಬೇಕೆಂದು ತಿಳಿಸಿದ ಮೇರೆಗೆ ರಾಘವೇಂದ್ರ ಅವರು ಒಟ್ಟು 29.79 ಲಕ್ಷ ರೂ. ವರ್ಗಾವಣೆ ಮಾಡಿ ಮೋಸ ಹೋಗಿದ್ದಾರೆ.


ಮತ್ತೊಂದು ಪ್ರಕರಣದಲ್ಲಿ ಲಲಿತ್ ಮಹಲ್ ನಗರ ನಿವಾಸಿ ಜಿ. ಸುನೀಲ್ (34) ಅವರಿಗೂ ಕೂಡ ಟೆಲಿಗ್ರಾಂ ಆ್ಯಪ್‌ನಲ್ಲಿ ವರ್ಕ್ ಫ್ರಂ ಹೋಂ ಆಫರ್ ಬಂದಿದ್ದು, ಫ್ಲೈಟ್ ಟಿಕೆಟ್ ಬುಕ್ ಮಾಡುವ ಟಾಸ್ಕ್ ನೀಡಲಾಗಿದೆ. ಇವರು ಹಂತ ಹಂತವಾಗಿ 1.92 ಲಕ್ಷ ರೂ. ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾರೆ. ಇವೆರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಜ.6ರಂದು ಸಾಮೂಹಿಕ ಲಲಿತ ಸಹಸ್ರನಾಮ



ಮೈಸೂರು,ಜ.1(ಎಂಟಿವೈ)– ಮೈಸೂರಿನ ಕುವೆಂಪುನಗರದ ಗಾನಭಾರತಿ ಸಭಾಂಗಣದಲ್ಲಿ ಜ.6ರಂದು ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 1.30ರವರೆಗೆ ಅಂತರ್–ಮನ ಸಂಸ್ಥೆ ವತಿಯಿಂದ ಆಂತರಿಕ ಶಕ್ತಿ ಹೆಚ್ಚಿಸಿಕೊಳ್ಳಲು ಸಹಕಾರಿಯಾಗುವ ಲಲಿತ ಸಹಸ್ರನಾಮದ ಸಾಮೂಹಿಕ ಪಾರಾಯಣ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸದಸ್ಯೆ ನಾಗಶ್ರೀ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವದ ಅಭ್ಯುದಯಕ್ಕಾಗಿ ನಡೆಸಲಾಗುತ್ತಿರುವ ಲಲಿತ ಸಹಸ್ರನಾಮದ ಸಾಮೂಹಿಕ ಪಾರಾಯಣ ಕಾರ್ಯಕ್ರಮಕ್ಕೆ ಎಲ್ಲರಿಗೂ ಉಚಿತ ಪ್ರವೇಶವಿದೆ. ದತ್ತಪೀಠದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿ, ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಲೇಖಕಿ ಡಾ. ವಿಮಲಾ ಗೋಪಾಲ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ. 86185 73286 ಅನ್ನು ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಅಂತರ್–ಮನ ಸಂಸ್ಥೆ ಕಾರ್ಯಕರ್ತರಾದ ಪ್ರತೀಕ್, ಹಿತೇಶ್, ಸತ್ಯವತಿ, ಕುಸುಮಾ, ಸುರೇಶ್ ಇದ್ದರು.



ಮೈಸೂರು ಜಿಲ್ಲಾ ವಿಶ್ವಕರ್ಮ ಜಾಗೃತಿ ವೇದಿಕೆ ಕಚೇರಿಯಲ್ಲಿ ಅಮರ ಶಿಲ್ಪಿ ಜಕಣಾಚಾರಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಸಿಹಿ ಹಂಚುವ ಮೂಲಕ ಅವರ ಸಂಸ್ಮರಣಾ ದಿನ ಆಚರಿಸಲಾಯಿತು. ವೇದಿಕೆ ಅಧ್ಯಕ್ಷ ಕೆಂಡಗಣ್ಣ ವಿಶ್ವಕರ್ಮ, ಉಪಾಧ್ಯಕ್ಷ ಸತೀಶ್, ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಸಂಚಾಲಕರಾದ ಶ್ರೀಲಕ್ಷ್ಮಿ, ಉದ್ಯಮಿ ಪುನೀತ್ ಕುಮಾರ್, ಪದಾಧಿಕಾರಿಗಳಾದ ಸಿದ್ದೇಶ್, ಲೋಕೇಶ್, ನಾಗರಾಜು, ರಾಜು, ಮಹೇಶ್ ಇನ್ನಿತರರಿದ್ದರು.

ಕೊರೊನಾ ನಿಯಂತ್ರಿಸಲು ಸರ್ವ ಸಿದ್ಧತೆ ಮಾಡಿಕೊಳ್ಳಿ: ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಡಿಸಿ ಸೂಚನೆ



ಮೈಸೂರು, ಜ. 1(ಆರ್‌ಕೆ)– ಕೊರೊನಾ ರೂಪಾಂತರಿ ಸೋಂಕು ಹರಡದಂತೆ ನಿಯಂತ್ರಿಸಲು ಸರ್ವ ರೀತಿಯಲ್ಲೂ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಇಂದಿಲ್ಲಿ ಸೂಚನೆ ನೀಡಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿದ ಅವರು, ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಈಗಾಗಲೇ ಸರ್ಕಾರ ನೀಡಿರುವ ಮಾರ್ಗಸೂಚಿಯಂತೆ ನಿಗದಿತ ಪರೀಕ್ಷೆಗಳನ್ನು ನಡೆಸಿ ಪಾಸಿಟಿವ್ ಬಂದ ರೋಗಿಗಳನ್ನು ಅಗತ್ಯವಿದ್ದರೆ ದಾಖಲು ಮಾಡಿಕೊಳ್ಳಲು ಆಸ್ಪತ್ರೆಗಳಲ್ಲಿ ಸಿದ್ಧತೆ ಮಾಡಬೇಕು ಎಂದರು.

ಬೆಡ್‌ಗಳು, ಆಕ್ಸಿಜನ್ ಸಪ್ಲೈ, ಆಕ್ಸಿಜನ್ ಪ್ಲಾಂಟ್ ನಿರ್ವಹಣೆ, ಔಷಧಿಗಳ ದಾಸ್ತಾನು, ಆಂಬುಲೆನ್ಸ್‌ಗಳನ್ನು ಸುಸ್ಥಿತಿಯಲ್ಲಿರಿಸುವುದು, ಸ್ವಚ್ಛತೆ ಸೇರಿದಂತೆ ಕೋವಿಡ್ ಒಳರೋಗಿಗಳ ಚಿಕಿತ್ಸೆಗೆ ಅಗತ್ಯವಿರುವ ಎಲ್ಲಾ ಮೂಲಸೌಕರ್ಯಗಳನ್ನು ಜಿಲ್ಲಾಸ್ಪತ್ರೆ, ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಒದಗಿಸಬೇಕೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಸಾರ್ವಜನಿಕರೂ ಸೋಂಕು ಹರಡದಂತೆ ಎಚ್ಚರ ವಹಿಸುವುದು ಅತ್ಯಗತ್ಯ. ಶೀತ, ನೆಗಡಿ, ಕೆಮ್ಮು, ಉಸಿರಾಟ ತೊಂದರೆ, ಜ್ವರ, ತಲೆನೋವಿನಂತಹ ಲಕ್ಷಣಗಳಿದ್ದರೆ ನಿರ್ಲಕ್ಷ್ಯ ಮಾಡದೇ ವೈದ್ಯರ ಸಲಹೆ ಪಡೆಯಬೇಕೇ ಹೊರತು ಆತಂಕಪಡುವ ಅಗತ್ಯವಿಲ್ಲ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಲ್ಲೆಯಲ್ಲಿ ಕೋವಿಡ್ ಸ್ಥಿತಿಗತಿ ಬಗ್ಗೆ ಮಾಹಿತಿ ನೀಡಿದ ಜಿಲ್ಲಾ ಆರೋಗ್ಯ ಸರ್ವೇಕ್ಷಣಾಧಿಕಾರಿ ಡಾ. ಮಹದೇವಪ್ರಸಾದ್, ಮೈಸೂರಲ್ಲಿ 84 ಕೋವಿಡ್ ಪ್ರಕರಣ ಸಕ್ರಿಯವಾಗಿದ್ದು, ಭಾನುವಾರ ಒಂದೇ ದಿನ 25 ಪಾಸಿಟಿವ್ ಪ್ರಕರಣಗಳು ದಾಖಲಾಗಿವೆ. 20 ಕೊರೊನಾ ಸೋಂಕಿತರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸಭೆಗೆ ವಿವರಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಆರ್. ಲೋಕನಾಥ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕುಮಾರಸ್ವಾಮಿ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಅರಿವು ಮೂಡಿಸಲು ಅನ್ಯಮಾರ್ಗವಿದೆ..!

ಎಸ್ಪಿಗಳಿಗೆ ನಿರ್ದೇಶನ ನೀಡುವಂತೆ ಎಡಿಜಿಪಿಗೆ ನಿವೃತ್ತ ಎಸ್ಪಿ ಶಂಕರೇಗೌಡ ಮನವಿ



ಮೈಸೂರು, ಜ. 1– ಜನವರಿ ತಿಂಗಳಿನಲ್ಲಿ ಪೊಲೀಸ್ ಇಲಾಖೆಯಿಂದ ಆಚರಿಸಲ್ಪಡುವ ರಸ್ತೆ ಸುರಕ್ಷತಾ ಸಪ್ತಾಹದಲ್ಲಿ ವಾಹನ ಚಾಲಕರಿಗೆ ಅರಿವು ಮೂಡಿಸಲು ಫ್ಲೆಕ್ಸ್‌ಗಳನ್ನು ಬಳಸದೇ ಇನ್ನಿತರೆ ಮಾಧ್ಯಮಗಳ ಮೂಲಕ ಜಾಗೃತಿ ಮೂಡಿಸುವಂತೆ ರಾಜ್ಯದ ಎಲ್ಲಾ ಎಸ್ಪಿಗಳಿಗೂ ನಿರ್ದೇಶನ ನೀಡಬೇಕೆಂದು ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗದ ಎಡಿಜಿಪಿಯವರಿಗೆ ನಿವೃತ್ತ ಎಸ್ಪಿ ಶಂಕರೇಗೌಡ ಮನವಿ ಮಾಡಿದ್ದಾರೆ.


ಈ ಸಂಬಂಧ ಮೇಲ್ ಕಳುಹಿಸಿರುವ ಅವರು, ರಸ್ತೆಗಳು, ಜಂಕ್ಷನ್‌ಗಳು, ವೃತ್ತಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಪರಿಸರವನ್ನು ಹಾಳು ಮಾಡುವ, ಅನುಮತಿ ಇಲ್ಲದ ಪ್ಲಾಸ್ಟಿಕ್ ಫ್ಲೆಕ್ಸ್‌ಬೋರ್ಡ್ ಹಾಕುವುದು "ಕರ್ನಾಟಕ ತೆರೆದ ಸ್ಥಳಗಳ (ವಿರೂಪಗೊಳಿಸುವಿಕೆ ನಿರ್ಬಂಧಿಸುವ) ಕಾಯ್ದೆ 1981"ರಂತೆ ಅಪರಾಧವಾಗಿದೆ. ನಾಗರಿಕರಿಗೆ ಅರಿವು ಮೂಡಿಸುವ ಯಾವುದೇ ಮಾಹಿತಿಯೂ ಜಾಹೀರಾತಿನ ವಿವರಣೆಯಲ್ಲಿ ಸೇರ್ಪಡೆಯಾಗಿದೆ. ಹೈಕೋರ್ಟ್ ಕೂಡ ಇಂತಹ ಫ್ಲೆಕ್ಸ್ ಬೋರ್ಡ್ ಹಾಕುವುದನ್ನು ತಪ್ಪಿಸಬೇಕೆಂದು ಇತ್ತೀಚೆಗೆ ಆದೇಶ ಹೊರಡಿಸಿದೆ ಎಂದು ಅವರು ತಮ್ಮ ಮನವಿಯಲ್ಲಿ ತಿಳಿಸಿದ್ದಾರೆ.

ರಸ್ತೆ ಸುರಕ್ಷತಾ ಸಪ್ತಾಹದಲ್ಲಿ ರಸ್ತೆ ಬಳಕೆದಾರರಿಗೆ ಫ್ಲೆಕ್ಸ್ ಬೋರ್ಡ್ ಮೂಲಕ ಜಾಗೃತಿ ಮೂಡಿಸುವ ಬದಲು ಸಾಮಾಜಿಕ ಜಾಲತಾಣ, ಮುದ್ರಣ ಮತ್ತು ದೃಶ್ಯ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಪೊಲೀಸರು ಬಳಸಿಕೊಳ್ಳಬಹುದು ಎಂದು ಸಲಹೆನೀಡಿರುವ ಅವರು, ಹೈಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ರಸ್ತೆ ಬಳಕೆದಾರರಿಗೆ ಅರಿವು ಮೂಡಿಸುವ ಪ್ರಯತ್ನದಲ್ಲಿ ಫ್ಲೆಕ್ಸ್ ಬೋರ್ಡ್ ಹೊರತುಪಡಿಸಿ ಇನ್ನಿತರೆ ಮಾಧ್ಯಮಗಳನ್ನು ಬಳಸುವಂತೆ ಎಲ್ಲಾ ಜಿಲ್ಲಾ ಎಸ್ಪಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಅವರು ಮನವಿ ಮಾಡಿದ್ದಾರೆ.

ಮೈಸೂರು ವಿವಿ ಶೈಕ್ಷಣಿಕ ಸಮಸ್ಯೆಗೆ ವಿದ್ಯಾರ್ಥಿಗಳ ಆತಂಕ

- ಮಾನಸ ಗಂಗೋತ್ರಿಯಲ್ಲಿ ಕ್ಲಾಕ್‌ಟವರ್ ಗಡಿಯಾರ ಸ್ಥಗಿತ; ಅಲಂಕಾರಿಕ ದೀಪಗಳು ಧ್ವಂಸ
- ಬರೀ ಕಟ್ಟಡ ಕಟ್ಟುವುದು ಆಯ್ತೇ ಹೊರತು ಶೈಕ್ಷಣಿಕ ಪ್ರಗತಿಯತ್ತ ಯಾರ ಗಮನವೂ ಇಲ್ಲ





ಮೈಸೂರು, ಜ.1(ಎಸ್‌ಪಿಎನ್)– ಮೈಸೂರು ವಿಶ್ವವಿದ್ಯಾನಿಲಯ ಶತಮಾನೋತ್ಸವ ನೆನಪಿಗಾಗಿ ಮಾನಸ ಗಂಗೋತ್ರಿ ಆವರಣದಲ್ಲಿ ಶತಮಾನೋತ್ಸವ ಕ್ಲಾಕ್ ಟವರ್, ಅದರ ಸುತ್ತ ಅಲಂಕಾರಿಕ ದೀಪಗಳನ್ನು ಅಳವಡಿಸಿ, ಅಭಿವೃದ್ಧಿಪಡಿಸಲಾಗಿತ್ತು. ಪ್ರಸ್ತುತ ಈ ಅಲಂಕಾರಿಕ ದೀಪಗಳು ಕಿಡಿಗೇಡಿಗಳ ಅಟ್ಟಹಾಸಕ್ಕೆ ಪುಡಿಪುಡಿಯಾಗಿವೆ. ಅಲ್ಲದೆ, ಕ್ಲಾಕ್ ಟವರ್‌ನ ಗಡಿಯಾರ ನಿಂತು ಮೂರು ತಿಂಗಳು ಕಳೆದರೂ ಸರಿಪಡಿಸುವ ಗೋಜಿಗೆ ಹೋಗುತ್ತಿಲ್ಲ ಎಂದು ವಿದ್ಯಾರ್ಥಿಗಳು ಆಕ್ರೋಶ ಹೊರಹಾಕಿದ್ದಾರೆ.

ಕಳೆದ ಎಂಟು ವರ್ಷಗಳ ಹಿಂದೆ ಮೈಸೂರು ವಿವಿಗೆ ನೂರು ವರ್ಷ ತುಂಬಿದ ಹಿನ್ನೆಲೆಯಲ್ಲಿ ಬೃಹತ್ ಕ್ಲಾಕ್ ಟವರ್ ಅನ್ನು ಅಂದಿನ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅವರು ಮುತುವರ್ಜಿ ವಹಿಸಿ ನಿರ್ಮಿಸಿದ್ದರು. ಈ ಮೂಲಕ ಮಾನಸಗಂಗೋತ್ರಿ ಆವರಣವನ್ನು ಐಐಟಿ ಮಾದರಿ ಕ್ಯಾಂಪಸ್ ಮಾಡಲು ಶ್ರಮಿಸಿದ್ದರು. ಈ ಕ್ಲಾಕ್ ಟವರ್ ನಿರ್ಮಾಣದಿಂದ ರಾಜ್ಯದ ಬೇರೆ ಬೇರೆ ವಿವಿಗಳು ಮೈಸೂರು ವಿವಿ ಆವರಣದ ಅಭಿವೃದ್ಧಿ ನೋಡಿ ಹುಬ್ಬೇರಿಸುವಂತೆ ಮಾಡಿದ ಕೀರ್ತಿ ಪ್ರೊ.ಕೆ.ಎಸ್.ರಂಗಪ್ಪ ಅವರಿಗೆ ಸಲ್ಲುತ್ತದೆ ಎಂದು ವಿದ್ಯಾರ್ಥಿನಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

10ಕ್ಕೂ ಹೆಚ್ಚು ವಿಭಾಗಗಳು ಮುಚ್ಚುವ ಹಂತ ತಲುಪಿವೆ: ಮೈಸೂರು ವಿಶ್ವವಿದ್ಯಾನಿಲಯ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ.ವಿಶ್ವೇಶ್ವರಯ್ಯ ಅವರ ಶ್ರಮದಿಂದ ನಿರ್ಮಾಣಗೊಂಡಿದೆ. ಅಲ್ಲದೆ, ಕುವೆಂಪು ಸೇರಿದಂತೆ ಅನೇಕರು, ಹಿರಿಯ ವಿದ್ವಾಂಸರು ಇಲ್ಲಿ ಕರ್ತವ್ಯ ನಿರ್ವಹಿಸಿ, ವಿವಿ ವಿದ್ಯಾರ್ಥಿಗಳಿಗೆ ಆದರ್ಶ ಪ್ರಾಯರಾಗಿದ್ದಾರೆ. ಆದರೆ, ಪ್ರಸ್ತುತ ಮಾನಸಗಂಗೋತ್ರಿಯಲ್ಲಿ ಅನುದಾನದ ಕೊರತೆಯಿಂದ 62 ವಿಭಾಗಗಳ ಪೈಕಿ 10ರಿಂದ 12 ವಿಭಾಗಗಳು ಮುಚ್ಚಿ ಹೋಗಿವೆ ಎಂದು ದೂರಿದರು.

ಸರ್ಕಾರ ಅನುದಾನ ನೀಡುತ್ತಿಲ್ಲ: ಗೌತಮ ಹಾಸ್ಟೆಲ್ ಆವರಣದಲ್ಲಿ ಹೊಸದಾಗಿ ಎರಡು ಕಟ್ಟಡಗಳು ನಿರ್ಮಾಣಗೊಳ್ಳುತ್ತಿವೆ. ಈ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರ ಅನುದಾನ ಬಿಡುಗಡೆ ಮಾಡುತ್ತದೆ. ಆದರೆ, ಅತಿಥಿ ಉಪನ್ಯಾಸಕರ ನೇಮಕ, ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಮೂಲಸೌಕರ್ಯ ಸೇರಿದಂತೆ ಇತರೆ ಯಾವುದೇ ಉದ್ದೇಶಕ್ಕೆ ಅನುದಾನ ನೀಡುತ್ತಿಲ್ಲ. ಈ ಕುರಿತು ಉನ್ನತ ಶಿಕ್ಷಣ ಇಲಾಖೆ ಅಧಿಕಾರಿಗಳನ್ನು ಕೇಳಿದರೆ, ಒಬ್ಬರೂ ಇದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ.

ದಿನೇ ದಿನೆ ಮೈಸೂರು ವಿವಿ ಶೈಕ್ಷಣಿಕ ವಾತಾವರಣ ಅಧೋಗತಿಗೆ ಹೋಗುತ್ತಿದ್ದರೂ ಸರ್ಕಾರದ ಮಟ್ಟದಲ್ಲಿ ಶೈಕ್ಷಣಿಕ ಗುಣಮಟ್ಟ ಸುಧಾರಿಸುವ ಕುರಿತು ಒಬ್ಬರೂ ತಲೆಕೆಡಿಸಿಕೊಳ್ಳುತ್ತಿಲ್ಲ. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಕೆಲ ವಿಭಾಗಗಳಿಗೆ ಅತಿಥಿ ಉಪನ್ಯಾಸಕರನ್ನು ಇಂದಿಗೂ ನೇಮಕ ಮಾಡುತ್ತಿಲ್ಲ. ಇದನ್ನು ಪ್ರಶ್ನಿಸಿದರೆ, ವಿದ್ಯಾರ್ಥಿಗಳನ್ನೇ ದೂಷಿಸುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕರ್ನಾಟಕ ಸಂಶೋಧಕರ ಸಂಘದ ರಾಜ್ಯಾಧ್ಯಕ್ಷ ಡಾ.ಮರಿದೇವಯ್ಯ 'ಮೈಸೂರು ಮಿತ್ರ'ನ ಬಳಿ ದೂರಿದರು.

ಗಡಿಯಾರ ನಿಂತು 3 ತಿಂಗಳಾಯ್ತು: ಕಳೆದ ಮೂರು ತಿಂಗಳ ಹಿಂದೆಯೇ ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಕ್ಲಾಕ್ ಟವರ್ ಗಡಿಯಾರ ಸ್ಥಗಿತಗೊಂಡಿದೆ. ಅಂತೆಯೇ ಇದರ ಸುತ್ತಲೂ ಇರುವ ಅಲಂಕಾರಿಕ ದೀಪಗಳು ಕಿಡಿಗೇಡಿಗಳ ಅಟ್ಟಹಾಸಕ್ಕೆ ಪುಡಿಪುಡಿಯಾಗಿವೆ. ಈ ಕೆಲಸ ಯಾರು ಮಾಡಿದ್ದಾರೆ ಎಂಬುದನ್ನು ಸಿಸಿಟಿವಿ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದರೂ ಈ ಕುರಿತು ಯಾರೊಬ್ಬರೂ ತಲೆಕೆಡಿಸಿಕೊಳ್ಳುತ್ತಿಲ್ಲ. ಅಲ್ಲದೆ, ರಾತ್ರಿ ವೇಳೆ ಮಾನಸ ಗಂಗೋತ್ರಿ ಆವರಣದಲ್ಲಿ ದೀಪಗಳಿಲ್ಲದೆ ಸಂಪೂರ್ಣ ಕತ್ತಲುಮಯವಾಗಿದ್ದು, ರಾತ್ರಿ 8 ಗಂಟೆ ನಂತರ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹೊರಗಡೆ ಓಡಾಡುವುದೇ ದುಸ್ತರವಾಗಿದೆ ಎಂದು ಅಳಲು ತೋಡಿಕೊಳ್ಳುತ್ತಾರೆ.

ಮುಕ್ತ ವಿವಿ ರೀತಿ ಮೈವಿವಿ ಮುಚ್ಚಿ ಹೋದರೆ ಗತಿಯೇನು?: 2014ರಿಂದ 2017ರವರೆಗೆ ಕರ್ನಾಟಕ ರಾಜ್ಯ ಮುಕ್ತ ವಿವಿ ಮಾನ್ಯತೆಯನ್ನು ಯುಜಿಸಿ ರದ್ದುಗೊಳಿಸಿತ್ತು. ಇದರಿಂದ ಇಲ್ಲಿನ ವಿದ್ಯಾರ್ಥಿಗಳು ಅತಂತ್ರರಾಗಿದ್ದರು. ಆ ಪರಿಸ್ಥಿತಿ ಮೈಸೂರು ವಿವಿಗೆ ಬಂದರೆ ಏನು ಗತಿ? ಎಂದು ವಿದ್ಯಾರ್ಥಿಗಳು ಸರ್ಕಾರದ ಧೋರಣೆಯನ್ನು ಪ್ರಶ್ನಿಸುತ್ತಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 2 ಜನವರಿ 2024

ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಿ

ಜಿಲ್ಲಾ ಉಸ್ತುವಾರಿ ಸಮಿತಿ ಸಭೆಯಲ್ಲಿ ಅಧಿಕಾರಿಗಳಿಗೆ ಡಿಸಿ ವೆಂಕಟ್ ರಾಜಾ ಸೂಚನೆ

ಮಡಿಕೇರಿ, ಜ.1– ಅಧಿಕಾರಿಗಳು ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಂಡು ಕರ್ತವ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ತಿಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಅನುಸೂಚಿತ ಜಾತಿ ಮತ್ತು ಪಂಗಡ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರಿ ಸೌಲಭ್ಯಗಳನ್ನು ಅರ್ಹರಿಗೆ ತಲುಪಿಸಲು ಅಧಿಕಾರಿಗಳು ಶ್ರಮಿಸಬೇಕು ಎಂದು ಹೇಳಿದರು. ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಶೇಖರ್ ಮಾತನಾಡಿ, ಹಿಂದಿನ ಸಭೆಯಲ್ಲಿ ಚರ್ಚಿಸಿದ ಹತ್ತು ಪ್ರಕರಣಗಳ ಮಾಹಿತಿಯನ್ನು ಜಿಲ್ಲಾಧಿಕಾರಿಗೆ ಒದಗಿಸಿದರು. ಮುಂದಿನ ಸಭೆಯೊಳಗೆ ಈ ಪ್ರಕರಣಗಳನ್ನು ಇತ್ಯರ್ಥ ಪಡಿಸುವುದಾಗಿ ತಿಳಿಸಿದರು. ವಿವಿಧ ಅಭಿವೃದ್ಧಿ ಇಲಾಖೆಗಳ ಪರಿಶಿಷ್ಟ ಪಂಗಡದ ಉಪಯೋಜನೆಗಳ ಬಗ್ಗೆ ಜಿಲ್ಲಾಧಿಕಾರಿ ಅವರಿಗೆ ಮಾಹಿತಿ ನೀಡಿದರು. ಹಾಗೆಯೇ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಜನಾಂಗಕ್ಕೆ ನೀಡಲಾಗುತ್ತಿರುವ ಸೌಲಭ್ಯ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ಸಫಾಯಿ ಕರ್ಮಚಾರಿ ಸಮಿತಿ ಸದಸ್ಯ ರಂಗಸ್ವಾಮಿ ಮಾತನಾಡಿ, ಜಿಲ್ಲಾಧಿಕಾರಿ ವೆಂಕಟ್ ರಾಜಾ ಅಧ್ಯಕ್ಷತೆಯಲ್ಲಿ ಸಫಾಯಿ ಕರ್ಮಚಾರಿಗಳ ಸಭೆ ನಡೆಸಲಾಗಿದೆ. ಸ್ವಚ್ಛತಾಗಾರರನ್ನು ಕಾಯಂಗೊಳಿಸಲು, ನಿವೇಶನದ



ಹಕ್ಕುಪತ್ರ ಒದಗಿಸಲು, ಸಫಾಯಿ ಕರ್ಮಚಾರಿಗಳಿಗೆ ಭದ್ರತೆ ನೀಡುವಂತೆ ಜಿಲ್ಲಾಧಿಕಾರಿಗೆ ಮನವಿ ಮಾಡಿದರು.

ಸಫಾಯಿ ಕರ್ಮಚಾರಿಗಳಿಗೆ ಪಿಎಫ್ ಸೌಲಭ್ಯ ಹಾಗೂ ಅವರ ಮಕ್ಕಳಿಗೆ ಕೌಶಲ್ಯ ಆಧಾರಿತ ತರಬೇತಿಗೆ ಮನವಿ ಮಾಡಿದರು. ಈ ಎಲ್ಲಾ ಸಮಸ್ಯೆಗಳನ್ನು ಆಲಿಸಿದ ಜಿಲ್ಲಾಧಿಕಾರಿ, ಪ್ರತಿಯೊಂದು ಪ್ರಕರಣಗಳನ್ನು ಹಂತ–ಹಂತವಾಗಿ ಪರಿಹರಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಸಿಇಓ ವರ್ಣಿತ್ ನೇಗಿ, ಉಪವಿಭಾಗಾಧಿಕಾರಿ ವಿನಾಯಕ್ ನರ್ವಾಡೆ, ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರಾದ ಪಳನಿ ಪ್ರಕಾಶ್, ಪಿ.ಪಿ.ಸುಕುಮಾರ್, ಜಾಯ್ಸ್ ಮೇನೆಜಸ್, ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆಯ ಯೋಜನಾ ಸಮನ್ವಯಾಧಿಕಾರಿ ಎಸ್.ಹೊನ್ನೇಗೌಡ, ಡಿವೈಎಸ್‌ಪಿ ಜಗದೀಶ್, ಲೋಕೋಪಯೋಗಿ ಇಲಾಖೆಯ ಇಇ ಸಿದ್ದೇಗೌಡ, ಜಿಪಂ ಇಂಜಿನಿಯರ್ ಸುರೇಶ್ ಕುಮಾರ್, ಭೂದಾಖಲೆಗಳ ಉಪನಿರ್ದೇಶಕ ಪಿ.ಶ್ರೀನಿವಾಸ್, ಸೆಸ್ಕ್ ಇಇ ಅನಿತಾ ಬಾಯಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಎನ್.ಮಂಜುನಾಥ್, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ಪುಟ್ಟರಾಜು, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕಿ ಅನಿತಾ ಭಾಸ್ಕರ್, ಪಶುಪಾಲನಾ ಇಲಾಖೆಯ ಉಪನಿರ್ದೇಶಕ ಲಿಂಗರಾಜ ದೊಡ್ಡಮನಿ, ಕಾರ್ಮಿಕ ಇಲಾಖೆ ಅಧಿಕಾರಿ ಹರ್ಷವರ್ಧನ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ನಟರಾಜು, ತಹಶೀಲ್ದಾರ್‌ಗಳಾದ ಪ್ರವೀಣ್ ಕುಮಾರ್, ಎಸ್.ಎನ್.ನರಗುಂದ, ಪ್ರಶಾಂತ್, ಕಿರಣ್ ಗೌರಯ್ಯ, ರಾಮಚಂದ್ರ, ತಾಪಂ ಇಓಗಳಾದ ಅಪ್ಪಣ್ಣ ಜಯಣ್ಣ ವಿರಾಜಪೇಟೆ ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ಸೋಮವಾರಪೇಟೆ ಪಪಂ ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ ಕುಶಾಲನಗರ ಪುರಸಭೆ ಮುಖ್ಯಾಧಿಕಾರಿ ಕೃಷ್ಣಪ್ರಸಾದ್ ಇತರರು ಇದ್ದರು.

6 ಪ್ರಚಲಿತ ಕೋವಿಡ್ ಸಂಬಂಧಿಸಿದ ಮಾಹಿತಿಯನ್ನು ಜಿಲ್ಲಾಧಿಕಾರಿ ಅವರಿಗೆ ವಿವರಿಸಿದರು. ಕೋವಿಡ್ ಸಂಬಂಧಿಸಿದಂತೆ ಭಯಪಡುವ ಅಗತ್ಯ ಇಲ್ಲ ಮುನ್ನೆಚ್ಚರಿಕಾ ಕ್ರಮಗಳನ್ನು ಈಗಾಗಲೇ ತೆಗೆದುಕೊಳ್ಳಲಾಗಿದೆ.

-ಡಾ.ಸತೀಶ್ ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ

ಹೆದ್ದಾರಿ ಡಾಂಬರೀಕರಣಕ್ಕೆ ಪ್ರತಾಪ್ ಸಿಂಹ ಚಾಲನೆ



ಮಡಿಕೇರಿ, ಜ.1– ಸಂಪಾಜೆ–ಕಾಟಕೇರಿ 21.6 ಕಿ.ಮೀ.ನ ರಾಷ್ಟ್ರೀಯ ಹೆದ್ದಾರಿ ಡಾಂಬರೀಕರಣಕ್ಕೆ ಸಂಸದ ಪ್ರತಾಪ್ ಸಿಂಹ ಸೋಮವಾರ ಚಾಲನೆ ನೀಡಿದರು.

ಸಂಪಾಜೆಯ ಗೇಟ್ ಬಳಿ ಚಾಲನೆ ನೀಡಿ ಮಾತನಾಡಿದ ಅವರು, ಸುಮಾರು 14.16 ಕೋಟಿ ರೂ. ವೆಚ್ಚದಲ್ಲಿ ಡಾಂಬರೀಕರಣ ಮಾಡಲಾಗುತ್ತಿದೆ. 6 ತಿಂಗಳೊಳಗೆ ಪೂರ್ಣಗೊಳ್ಳಲಿದ್ದು, ಸಂಪಾಜೆಯಿಂದ ಸುಂಟಿಕೊಪ್ಪದವರೆಗೆ 21 ಕಡೆ ತಡೆಗೋಡೆ ನಿರ್ಮಾಣಕ್ಕೆ ಈಗಾಗಲೇ ಸರ್ಕಾರಕ್ಕೆ ಅಂದಾಜುಪಟ್ಟಿ ಸಲ್ಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ಹಾಗೆಯೇ ಕುಶಾಲನಗರದಿಂದ ಸಂಪಾಜೆವರೆಗೆ ಅಪಘಾತ ವಲಯವನ್ನು ಗುರುತಿಸಲಾಗಿದ್ದು, ಪ್ರಮುಖವಾಗಿ ಬೋಯಿಕೇರಿ ಮತ್ತು ಆನೆಕಾಡು ಬಳಿ ರಸ್ತೆ ಸರಿಪಡಿಸುವ ಕಾರ್ಯಕ್ಕೆ ಚಾಲನೆ ನೀಡಲಾಗುವುದು. ಇದಕ್ಕೆ 5 ಕೋಟಿ ರೂ. ಕಾಮಗಾರಿಗೆ ಸರ್ಕಾರದಿಂದ ಅನುಮೋದನೆ ದೊರೆತಿದೆ. ಕುಶಾಲನಗರದಿಂದ ಸಂಪಾಜೆವರೆಗೆ ಹೆದ್ದಾರಿ ಭಾಗದಲ್ಲಿ ಸುಮಾರು 1.3 ಕಿ.ಮೀ. ಮಳೆ ನೀರು ನಿಲ್ಲುವ ಪ್ರದೇಶವನ್ನು ಗುರುತಿಸಲಾಗಿದ್ದು, ಈ ಪ್ರದೇಶವನ್ನು ಅಗಲೀಕರಣ ಹಾಗೂ ಎತ್ತರಗೊಳಿಸಲಾಗುವುದು. ಈ ಕಾಮಗಾರಿಗೆ ಅನುಮೋದನೆ ದೊರೆತಿದೆ ಎಂದು ಹೇಳಿದರು.

ಹೆದ್ದಾರಿಯಲ್ಲಿ ಎರಡು ಕಡೆ ಸೇತುವೆ ನಿರ್ಮಾಣ ಮಾಡಲಾಗುವುದು, ಹಾಗೆಯೇ 8 ಕಡೆ ಸಣ್ಣಮಟ್ಟ ತಡೆಗೋಡೆ ನಿರ್ಮಿಸಲಾಗುವುದು. ಜೋಡುಪಾಲ ಬಳಿ ಹೊಸದಾಗಿ ಸೇತುವೆ ನಿರ್ಮಿಸಲಾಗುವುದು. 2018ರಲ್ಲಿ ಸಂಭವಿಸಿದ ಭೂಕುಸಿತದಿಂದ ರಾಷ್ಟ್ರೀಯ ಹೆದ್ದಾರಿ ವ್ಯಾಪ್ತಿಯಲ್ಲಿ 19 ತಡೆಗೋಡೆ ನಿರ್ಮಿಸಲು ಉದ್ದೇಶಿಸಲಾಗಿತ್ತು. ಅತಿವೃಷ್ಟಿ ಹಿನ್ನೆಲೆಯಲ್ಲಿ 21 ತಡೆಗೋಡೆ ನಿರ್ಮಿಸಲಾಗುವುದು ಎಂದರು.

ಸಂಪಾಜೆ ಗ್ರಾಪಂ ಅಧ್ಯಕ್ಷೆ ರಮಾದೇವಿ ಬಾಲಚಂದ್ರ ಕಳಗಿ, ಪ್ರಮುಖರಾದ ನಾಗೇಶ್ ಕುಂದಲ್ಪಾಡಿ, ರಾಷ್ಟ್ರೀಯ ಹೆದ್ದಾರಿ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಶಿವಪ್ರಸಾದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಜಿ.ಎಚ್.ಗಿರೀಶ್, ಸಹಾಯಕ ಇಂಜಿನಿಯರ್ ಹನುಮಂತ, ಸುಧಾಕರಶೆಟ್ಟಿ ಇತರರು ಇದ್ದರು.

ಇರ್ಪು ಜಲಪಾತ ವೀಕ್ಷಣೆಗೆ ಪ್ರವಾಸಿಗರ ದಂಡು



ಮಡಿಕೇರಿ, ಜ.1–ದಕ್ಷಿಣ ಕೊಡಗಿನ ಪ್ರಮುಖ ಪ್ರವಾಸಿ ತಾಣಗಳಲ್ಲೊಂದಾದ ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಸಮೀಪದ ಇರ್ಪು ಜಲಪಾತ ವೀಕ್ಷಣೆಗೆ ಹೊಸವರ್ಷದ ಸೋಮವಾರ ಪ್ರವಾಸಿಗರ ದಂಡು ಹರಿದು ಬಂದಿತ್ತು

ಹೊಸವರ್ಷ ಸ್ವಾಗತಿಸಲು ಇರ್ಪು ಜಲಪಾತ ವೀಕ್ಷಣೆಗೆ ಪ್ರವಾಸಿಗರು ಅಧಿಕ ಸಂಖ್ಯೆಯಲ್ಲಿ ಆಗಮಿಸಿದ್ದರು. ಹಚ್ಚ ಹಸಿರಿನ ಪ್ರಕೃತಿಯ ರಮಣೀಯ ತಾಣ ಬ್ರಹ್ಮಗಿರಿಯ ತಪ್ಪಲಿನಲ್ಲಿ ಲಕ್ಷ್ಮಣ ತೀರ್ಥ ನದಿಯಿಂದ ಸೃಷ್ಟಿಯಾಗಿ, ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದ್ದ ಇರ್ಪು ಜಲಪಾತ ಈ ಬಾರಿ ಮಳೆಯ ಕೊರತೆಯಿಂದ ತನ್ನ ಗತವೈಭವವನ್ನು ಕಳೆದುಕೊಂಡಿದೆ. ಇದರಿಂದ ಜಲಪಾತದ ಮೇಲಿನಿಂದ ಬೀಳುವ ನೀರಿನ ಪ್ರಮಾಣ ಕಡಿಮೆಯಾಗಿದ್ದರೂ ರಾಜ್ಯ, ಹೊರ ರಾಜ್ಯಗಳಿಂದ ಆಗಮಿಸಿದ್ದ ಪ್ರವಾಸಿಗರು ಇರ್ಪು ಜಲಕನ್ಯೆಯ ಸೌಂದರ್ಯವನ್ನು ಸವಿದರು. ಜಲಪಾತದ ನೀರಿನಲ್ಲಿ ಆಟವಾಡಿ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

ವಿಜೃಂಭಣೆಯ ಅಯ್ಯಪ್ಪಸ್ವಾಮಿ ಉತ್ಸವ



ವಿರಾಜಪೇಟೆ, ಜ.1–ಇಲ್ಲಿನ ಮಲೆತಿರಿಕೆ ಬೆಟ್ಟದ ಅಯ್ಯಪ್ಪಸ್ವಾಮಿ ದೇವಾಲಯದ ವಾರ್ಷಿಕ ಉತ್ಸವ ಮೂರು ದಿನ ವಿವಿಧ ಪೂಜೆ ಕಾರ್ಯಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಉತ್ಸವದ ಅಂಗವಾಗಿ ಸೋಮವಾರ ಮುಂಜಾನೆ 5.30ಕ್ಕೆ ಗಣಪತಿ ಹೋಮ, ಬಳಿಕ ದೇವರಿಗೆ ವಿಶೇಷ ಪೂಜೆ ಹಾಗೂ ಧಾರ್ಮಿಕ ವಿಧಿವಿಧಾನಗಳೊಂದಿಗೆ ದೇವಾಲಯದಲ್ಲಿ ತುಲಾಭಾರ ನಡೆಸಲಾಯಿತು. ನಂತರ 11 ಗಂಟೆಗೆ ಲಕ್ಷಾರ್ಚನೆ, ಪುಷ್ಪಾರ್ಚನೆಯಲ್ಲಿ ಅಯ್ಯಪ್ಪ ವ್ರತಧಾರಿಗಳು ಭಾಗವಹಿಸಿ, ಅಯ್ಯಪ್ಪಸ್ವಾಮಿಯ ಭಕ್ತಿಗೀತೆಗಳನ್ನು ಹಾಡಿದರು. ಮಧ್ಯಾಹ್ನ 12.30ಕ್ಕೆ ಪಡಿಪೂಜೆ ನಂತರ ದೇವರಿಗೆ ಮಹಾಪೂಜೆ, ಪ್ರಸಾದ ವಿನಿಯೋಗಿಸಲಾಯಿತು. ಬಳಿಕ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಮುಂಜಾನೆ 'ಶಬರಿ ಮಲೆಯ ನೇರಿ' ಎಂಬ ಕನ್ನಡ ಭಕ್ತಿಗೀತೆಗಳನ್ನು ದೇವಾಲಯದ ಆವರಣದಲ್ಲಿ ಬಿಡುಗಡೆಗೊಳಿಸಲಾಯಿತು. ಸಂಜೆ 7 ಗಂಟೆಯಿಂದ ಅಯ್ಯಪ್ಪಸ್ವಾಮಿಯ ಉತ್ಸವಮೂರ್ತಿ ಮತ್ತು ಅಯ್ಯಪ್ಪನ ಕಥಾ ಸಾರಾಂಶ ಸಾರುವ ಸ್ತಬ್ಧ ಚಿತ್ರಗಳ ಮೆರವಣಿಗೆ ನಡೆಯಿತು. ಉತ್ಸವದ ವೇಳೆ ದೇವಾಲಯದ ಆಡಳಿತ ಮಂಡಳಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಾಳೆಯಿಂದ ಬಾಲಕಿಯರ ಹಾಕಿ ಪಂದ್ಯಾವಳಿ

ಮಡಿಕೇರಿ, ಜ.1–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ರಾಷ್ಟ್ರಮಟ್ಟದ 17 ವರ್ಷದ ಬಾಲಕಿಯರ ಹಾಕಿ ಪಂದ್ಯಾವಳಿ ಜ.3 ರಿಂದ 8ರವರೆಗೆ ಕುಶಾಲನಗರ ತಾಲೂಕಿನ ಕೂಡಿಗೆ ಕ್ರೀಡಾ ಶಾಲೆ ಮೈದಾನದಲ್ಲಿ ನಡೆಯಲಿದೆ.

ಜ.3ರಂದು ಮಧ್ಯಾಹ್ನ 3 ಗಂಟೆಗೆ ಪಂದ್ಯಾವಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಚಾಲನೆ ನೀಡಲಿದ್ದು, ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪ ಧ್ವಜಾರೋಹಣ ನೆರವೇರಿಸಲಿದ್ದಾರೆ. ಕ್ರೀಡಾ ಸಚಿವ ಬಿ.ನಾಗೇಂದ್ರ ಗೌರವ ವಂದನೆ ಸ್ವೀಕರಿಸಲಿದ್ದು, ಶಾಸಕ ಡಾ. ಮಂತರ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಎ.ಎಸ್.ಪೊನ್ನಣ್ಣ, ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಶಾಸಕರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್. ಭೋಜೇಗೌಡ, ಕೂಡು ಮಂಗಳೂರು ಗ್ರಾಪಂ ಅಧ್ಯಕ್ಷ ಭಾಸ್ಕರ ನಾಯ್ಡು, ಕೂಡಿಗೆ ಗ್ರಾಪಂ ಅಧ್ಯಕ್ಷ ಗಿರೀಶ್ ಮತ್ತಿತರ ಇಲಾಖೆ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಶಬರಿಮಲೆಗೆ ತೆರಳಿದ ಅಯ್ಯಪ್ಪ ಭಕ್ತರು


ಸಿದ್ದಾಪುರ, ಜ.1– ಕರಡಿಗೋಡಿನ ಶ್ರೀ ಅಯ್ಯಪ್ಪ ಭಜನಾ ಮಂದಿರದ ನೇತೃತ್ವದಲ್ಲಿ 11ನೇ ವರ್ಷದ ಸಾಮೂಹಿಕ ಶಬರಿಮಲೆ ಯಾತ್ರೆ ಕಾರ್ಯಕ್ರಮ ಭಕ್ತಿಯಿಂದ ನೆರವೇರಿತು. ತಂದೆ–ತಾಯಿ, ಗುರುಹಿರಿಯರ ಆಶೀರ್ವಾದ ಪಡೆದು ಗುರುಸ್ವಾಮಿಗಳಾದ ಸಜನ್, ಸುದರ್ಶನ್, ನಾರಾಯಣ ನೇತೃತ್ವದಲ್ಲಿ 13 ಅಯ್ಯಪ್ಪ ಮಾಲಾಧಾರಿಗಳು, ತುಪ್ಪದ ತೆಂಗಿನಕಾಯಿ ತುಂಬಿಸಿ ವಿವಿಧ ಪೂಜಾ ವಿಧಿವಿಧಾನಗಳೊಂದಿಗೆ ಗ್ರಾಮದ ಬಸವೇಶ್ವರ ದೇವಾಲಯಕ್ಕೆ ತೆರಳಿ ಈಡುಗಾಯಿ ಒಡೆದು ಶಬರಿಮಲೆ ಯಾತ್ರೆಗೆ ತೆರಳಿದರು.


ಗುರುಸ್ವಾಮಿ ಸಜನ್ ಮಾತನಾಡಿ, ಅಯ್ಯಪ್ಪ ಭಜನಾ ಮಂದಿರದ ನೇತೃತ್ವದಲ್ಲಿ ವರ್ಷಪ್ರತಿ ಅಯ್ಯಪ್ಪ ಭಕ್ತರು 41 ದಿನದ ಮಾಲೆ ಧರಿಸಿ ಶಬರಿಮಲೆಗೆ ಯಾತ್ರೆ ತೆರಳುತ್ತಾರೆ. ಅದರಂತೆ ಈ ವರ್ಷವೂ ಶಬರಿಮಲೆಗೆ ತೆರಳುತ್ತಿರುವುದಾಗಿ ತಿಳಿಸಿದರು. ಇದೇ ವೇಳೆ ತೀರ್ಥಪ್ರಸಾದ ಹಾಗೂ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.



ಚಾ.ನಗರ ಜಿಲ್ಲಾದ್ಯಂತ ಸಂಭ್ರಮದ ಹೊಸ ವರ್ಷಾಚರಣೆ

ಪ್ರವಾಸಿ ತಾಣ, ಧಾರ್ಮಿಕ ಕೇಂದ್ರಗಳಲ್ಲಿ ಜನವೋ ಜನ





ಚಾಮರಾಜನಗರ, ಜ.1– ಜಿಲ್ಲಾದ್ಯಂತ ಜನತೆ ನೂತನ ವರ್ಷವನ್ನು ಸಂಭ್ರಮ, ಸಡಗರ, ಭಕ್ತಿಯಿಂದ ಬರಮಾಡಿಕೊಂಡರು.

ಭಾನುವಾರ ಮಧ್ಯರಾತ್ರಿ 12 ಗಂಟೆಯಾಗುತ್ತಿದ್ದಂತೆ ಜಿಲ್ಲೆಯ ಜನರು ಪರಸ್ಪರ ಹೊಸ ವರ್ಷದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ವಿದ್ಯಾರ್ಥಿಗಳು ಮತ್ತು ಯುವಜನರು ತಮ್ಮ ಸ್ನೇಹಿತರಿಗೆ ಮತ್ತು ಆಪ್ತರಿಗೆ ಮೊಬೈಲ್‌ನಲ್ಲಿ ಮೆಸೇಜ್, ವಿಡಿಯೋ ಕಳುಹಿಸುವ ಮೂಲಕ ಶುಭಾಶಯ ಕೋರಿದರು.

ಇನ್ನೂ ಕೆಲವರು ಸಿಹಿ ಹಂಚಿ ಮತ್ತು ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದರು. ಮಹಿಳೆಯರು ಮತ್ತು ಯುವತಿಯರು ಮನೆಗಳ ಮುಂಭಾಗ ಬಣ್ಣ– ಬಣ್ಣದ ರಂಗೋಲಿ ಚಿತ್ತಾರ ಬಿಡಿಸಿ, ಹೊಸ ವರ್ಷವನ್ನು ಸ್ವಾಗತಿಸಿದರು. ಹೊಸ ವರ್ಷದ ಮೊದಲ ದಿನವಾದ ಸೋಮವಾರ ಬೆಳಗ್ಗೆಯಿಂದಲೇ ಜನರು ಹೊಸಬಟ್ಟೆ ತೊಟ್ಟು ಸಮೀಪದ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿದರು. ಇನ್ನೂ ಕೆಲವರು ಕುಟುಂಬ ಸಮೇತ ಮಲೆ ಮಹದೇಶ್ವರಸ್ವಾಮಿ ಬೆಟ್ಟ, ಬಿಳಿಗಿರಿ ರಂಗನಾಥ ಸ್ವಾಮಿ ಬೆಟ್ಟ, ಹಿಮವದ್‌ಗೋಪಾಲಸ್ವಾಮಿ ಬೆಟ್ಟ, ಪಾರ್ವತಿ ಬೆಟ್ಟ, ಕುರುಬನಕಟ್ಟೆ ಕ್ಷೇತ್ರ, ಶಿವನ ಸಮುದ್ರದ ಸಮೂಹ ದೇವಾಲಯಗಳಿಗೆ ತೆರಳಿ ದೇವರ ದರ್ಶನ ಪಡೆದರು.

ಕ್ರೈಸ್ತರು ಚರ್ಚ್‌ಗಳಲ್ಲಿ ಹೊಸವರ್ಷ ಆಚರಣೆ ಮಾಡಿ ಸಂಭ್ರಮಿಸಿದರು. ಯುವಜನರು ಜಿಲ್ಲೆಯ ಪ್ರವಾಸಿ ತಾಣಗಳಾದ ಬಂಡೀಪುರ, ಶಿವನಸಮುದ್ರ, ಹೊಗೆನಕಲ್ ಫಾಲ್ಸ್ ಸೇರಿದಂತೆ ನಗರದ ಪ್ರಮುಖ ಹೊಟೇಲ್, ರೆಸಾರ್ಟ್, ಡಾಬಾಗಳಿಗೆ ತೆರಳಿ ಕುಣಿದು–ಕುಪ್ಪಳಿಸಿ, ಕೇಕ್‌ಗಳನ್ನು ಕತ್ತರಿಸುವ ಮೂಲಕ ನೂತನ ವರ್ಷವನ್ನು ಸಂಭ್ರಮದಿಂದ ಸ್ವಾಗತಿಸಿದರು.

ಪಟ್ಟಣದ ಜನರು ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಗ್ರಾಮೀಣ ಜನರು ಯಡಪುರ ಸಮೀಪದ ಮಹದೇಶ್ವರಸ್ವಾಮಿ ದೇವಸ್ಥಾನ, ಹರದನಹಳ್ಳಿ ದಿವ್ಯಲಿಂಗೇಶ್ವರ, ಸಂತೇಮರಹಳ್ಳಿಯ ಮಹದೇಶ್ವರ ದೇವಾಲಯ, ಮಂಗಲ ಗ್ರಾಮದ ಶಂಕರೇಶ್ವರಸ್ವಾಮಿ ಬೆಟ್ಟ, ಕೂಡ್ಲೂರು ಗ್ರಾಮದ ಮಂಟೇಸ್ವಾಮಿ ದೇವಸ್ಥಾನ, ಕುದೇರು ಗ್ರಾಮದ ಮಲ್ಲಿಕಾರ್ಜುನಸ್ವಾಮಿ, ಚಂದಕವಾಡಿಯ ಲಕ್ಷ್ಮೀದೇವಿ ದೇಗುಲಗಳಿಗೆ ತೆರಳಿ ಪೂಜೆ ಸಲ್ಲಿಸಿದರು.

ಗುಂಡ್ಲುಪೇಟೆ: ಹೊಸ ವರ್ಷದ ಮೊದಲ ದಿನವಾದ ಸೋಮವಾರ ಹಿಮವದ್ ಗೋಪಾಲ ಸ್ವಾಮಿ ಬೆಟ್ಟ, ಪಾರ್ವತಿ ಬೆಟ್ಟ, ಹುಲುಗಿನ ಮುರಡಿ ವೆಂಕಟರಮಣಸ್ವಾಮಿ ಬೆಟ್ಟ ಸೇರಿದಂತೆ ವಿವಿಧ ದೇವಸ್ಥಾನಗಳಿಗೆ ತೆರಳಿದ ಭಕ್ತರು ಪೂಜೆ ಸಲ್ಲಿಸುವುದರೊಂದಿಗೆ ನೂತನ ವರ್ಷವನ್ನು ಸ್ವಾಗತಿಸಿದರು.

ಮಾದಪ್ಪನ ಬೆಟ್ಟಕ್ಕೆ ಭಕ್ತರ ದಂಡು: ಜಿಲ್ಲೆಯ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಶ್ರೀಮಲೆ ಮಹದೇಶ್ವರ ಸ್ವಾಮಿ ಬೆಟ್ಟಕ್ಕೆ ಲಕ್ಷಾಂತರ ಭಕ್ತರು ತೆರಳಿ ಮಾದಪ್ಪನ ದರ್ಶನ ಪಡೆದು, ಪೂಜೆ ಸಲ್ಲಿಸಿದರು. ಶಕ್ತಿ ಯೋಜನೆ ಹಾಗೂ ಸೋಮವಾರ ಮಾದಪ್ಪನಿಗೆ ವಿಶೇಷ ಪೂಜೆ ಸಲ್ಲಿಸುವ ಹಿನ್ನೆಲೆಯಲ್ಲಿ ನೂತನ ವರ್ಷದ ಮೊದಲ ದಿನ ಬೆಟ್ಟಕ್ಕೆ ಜಿಲ್ಲೆಯಿಂದ ಮಾತ್ರವಲ್ಲದೇ ರಾಜ್ಯದ ಮಂಡ್ಯ, ಮೈಸೂರು, ಬೆಂಗಳೂರು, ರಾಮನಗರ, ಚನ್ನಪಟ್ಟಣ ಸೇರಿದಂತೆ ವಿವಿಧ ಜಿಲ್ಲೆಗಳು ಹಾಗೂ ಹೊರ ರಾಜ್ಯಗಳಿಂದ ಲಕ್ಷಾಂತರ ಭಕ್ತರು ಬೆಟ್ಟಕ್ಕೆ ಆಗಮಿಸಿದ್ದರು.

ಬಿಗಿ ಬಂದೋಬಸ್ತ್: ದೇವಾಲಯದ ಸುತ್ತ–ಮುತ್ತ ಯಾವುದೇ ರೀತಿಯಾದ ಅಹಿತಕರ ಘಟನೆಗಳು ಜರುಗದ ಹಾಗೆ ಪೊಲೀಸ್ ಬಂದೋಬಸ್ತ್ ವ್ಯವಸ್ಥೆಯ ಜೊತೆಗೆ ಕೊಳ್ಳೇಗಾಲ ಹಾಗೂ ತಮಿಳುನಾಡಿಗೆ ತೆರಳುವ ರಸ್ತೆಯಲ್ಲಿರುವ ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗಿತ್ತು.

ಜಿಲ್ಲೆಯ ಮತ್ತೊಂದು ಪ್ರಸಿದ್ಧ ಯಾತ್ರಾಸ್ಥಳ ಬಿಳಿಗಿರಿರಂಗನಬೆಟ್ಟದಲ್ಲಿ ಸೋಮವಾರ ಸಾಮಾನ್ಯ ದಿನಕ್ಕಿಂತ ಹೆಚ್ಚು ಪ್ರವಾಸಿಗರಿದ್ದರು. ವರ್ಷದ ಮೊದಲ ದಿನ ರಂಗಪ್ಪನ ಬೆಟ್ಟದಲ್ಲಿ ಭಕ್ತರ ಸಂಖ್ಯೆ ನಿರೀಕ್ಷೆ ಮೀರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.

ನಗರದಲ್ಲಿ ಭೀಮಕೋರೆಗಾಂವ್ ವಿಜಯೋತ್ಸವ ಆಚರಣೆ



ಚಾಮರಾಜನಗರ, ಜ.1– ದಲಿತ ಸಂಘರ್ಷ ಸಮಿತಿ(ಡಿ.ಜಿ.ಸಾಗರ್ ಬಣ)ದ ವತಿಯಿಂದ ನಗರದಲ್ಲಿ ಭೀಮಕೋರೆಗಾಂವ್ ವಿಜಯೋತ್ಸವ ಆಚರಿಸಲಾಯಿತು.

ನಗರದ ಭೀಮರಾವ್ ಹೆಬ್ಬಾಗಿಲಿನಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ಕಾರ್ಯಕರ್ತರು, ಪದಾಧಿಕಾರಿಗಳು ಕೋರೆಗಾಂವ್ ವಿಜಯೋತ್ಸವದ ಹಿನ್ನೆಲೆಯಲ್ಲಿ ವಿಜಯಘೋಷಗಳನ್ನು ಕೂಗಿದರು. ಇದೇ ವೇಳೆ ದಸಂಸ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ ಮಾತನಾಡಿ, 18 ನೇ ಶತಮಾನದಲ್ಲಿ ಬೇರೂರಿದ್ದ ಜಾತೀಯತೆ, ಅಸಮಾನತೆ ವಿರುದ್ಧ ಕೋರೆಗಾಂವ್ ಬಳಿಯ ಭೀಮಾ ತೀರದಲ್ಲಿ 30 ಸಾವಿರ ಸೈನಿಕರಿದ್ದ ಪೇಶ್ವೆಗಳ ವಿರುದ್ಧ 500 ಮಂದಿ ಮಹಾರ್ ಸೈನಿಕರು ಯುದ್ಧ ಮಾಡಿ, ಗೆಲುವು ಸಾಧಿಸಿದ ದಿನವನ್ನೇ ಕೋರೆಗಾಂವ್ ವಿಜಯೋತ್ಸವವಾಗಿ ಆಚರಿಸಲಾಗುತ್ತಿದೆ, 12 ಗಂಟೆಗಳ ಹೋರಾಟದಲ್ಲಿ 22 ಮಂದಿ ಹುತಾತ್ಮರಾದರು. ಅಂಬೇಡ್ಕರ್ ಅವರು ಈ ಯುದ್ಧವನ್ನು ಸ್ವದೇಶಿ ಗುಲಾಮಗಿರಿ ವಿರುದ್ಧ ಸ್ವಾಭಿಮಾನದ ಯುದ್ಧ ಎಂದು ಚರಿತ್ರೆಯಲ್ಲಿ ದಾಖಲಿಸಿದ್ದಾರೆ ಎಂದರು.

ಕೋರೆಗಾಂವ್‌ನಲ್ಲಿ ವಿಜಯಸಾಧಿಸಿದ ನೆನಪಿಗಾಗಿ ಶಿರೂರುಬಳಿಯ ಕೋರೆಗಾಂವ್‌ನಲ್ಲಿ ಅಡಿಗಲ್ಲು ಹಾಕಲಾಯಿತು. ಈಗಲೂ ಅದನ್ನು ಮಹಾನ್ ಸ್ತಂಭ, ವೀರಸ್ತಂಭ, ಸ್ಮರಣಸ್ತಂಭ ಎಂಬ ಹೆಸರಿನಿಂದ ಕರೆಯಲಾಗುತ್ತಿದೆ ಎಂದರು.

ಇದೇ ವೇಳೆ ಭಾಗವಹಿಸಿದ್ದವರಿಗೆ ಸಿಹಿ ವಿತರಣೆ ಮಾಡಲಾಯಿತು. ಜಿಲ್ಲಾ ಸಂಚಾಲಕ ರಂಗಸ್ವಾಮಿ, ಖಜಾಂಚಿ ರವಿಕುಮಾರ್, ಉಮೇಶ್, ಮಂಜೇಶ್, ಯ. ಮಹದೇವಯ್ಯ, ಗಾಡಿ ಶಿವಣ್ಣ, ಮಲ್ಲಿಕಾರ್ಜುನ್, ಆಟೋ ಉಮೇಶ್ ಉಮೇಶ್ ಕುಮಾರ್, ಶಿವಕುಮಾರ್, ಸಂಘದ ಸದಸ್ಯರು ಹಾಗೂ ಇತರರು ಹಾಜರಿದ್ದರು.

ಸಕಾಲದಲ್ಲಿ ಸಾಲ ಮರುಪಾವತಿಸಿ ಬ್ಯಾಂಕ್ ಅಭಿವೃದ್ಧಿಗೆ ಸಹಕರಿಸಿ

ಪುಣಜನೂರು ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಮುತ್ತುನಾಯಕ್ ಮನವಿ



ಚಾಮರಾಜನಗರ, ಜ.1– ತಾಲೂಕಿನ ಪುಣಜನೂರು ಪ್ರಾಥಮಿಕ ಪತ್ತಿನ ಸಹಕಾರ ಬ್ಯಾಂಕ್‌ನ 2024ನೇ ಸಾಲಿನ ವಾರ್ಷಿಕ ಕ್ಯಾಲೆಂಡರ್‌ನ್ನು ಸಂಘದ ಅಧ್ಯಕ್ಷ ಮುತ್ತುನಾಯಕ್ ಬಿಡುಗಡೆ ಮಾಡಿದರು.

ಸಂಘದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಬಿಡುಗಡೆಗೊಳಿಸಿದ ಮಾತನಾಡಿದ ಅವರು, ಬ್ಯಾಂಕ್‌ನಲ್ಲಿ ಕೃಷಿ ಸಾಲ, ವಾಹನ ಸಾಲ, ವ್ಯಾಪಾರ ಅಭಿವೃದ್ಧಿ ಸಾಲ, ಗೃಹ ಬಳಕೆ ಸಾಲ ದೊರೆಯುತ್ತದೆ ಸಂಘದ ಷೇರುದಾರರು, ರೈತರು ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಸುಬಲರಾಗಿ ಸಾಲವನ್ನು ಸಕಾಲದಲ್ಲಿ ಮರು ಪಾವತಿಸುವ ಮೂಲಕ ಬ್ಯಾಂಕ್ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ದೊರೆಸ್ವಾಮಿ ನಾಯಕ್ ನಿರ್ದೇಶಕರಾದ ಪಿ.ನಾಗನಾಯಕ್, ಪಿ.ಕುಮಾರ್‌ನಾಯಕ್, ಪಿ.ಗಣೇಶ್‌ನಾಯಕ್, ಗುರುನಾಯಕ್, ಎನ್.ಕೃಷ್ಣ, ಪುಟ್ಟಸ್ವಾಮಿಗೌಡ, ಜಯಬಾಯಿ, ಪ್ರವೀಣ್ ನಾಯಕ್, ಬೊಮ್ಮಮ್ಮ, ಗಂಗಾ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಎಸ್. ಜಯಶಂಕರಸ್ವಾಮಿ, ಕ್ಯಾಶಿಯರ್ ಮಾದೇಶ್, ಕಿರಿಯ ಸಹಾಯಕ ಚಂದ್ರು ನಾಯಕ್, ಪಿಗ್ಮಿ ಏಜೆಂಟ್ ಚಂದ್ರಶೇಖರ್, ಕೆಂಚ ಹಾಜರಿದ್ದರು.

ಫಿಯರ್‌ಲೆಸ್ ಫೈಟರ್ ತಂಡಕ್ಕೆ ಅಂಬೇಡ್ಕರ್ ಕ್ರಿಕೆಟ್ ಕಪ್



ಕೊಳ್ಳೇಗಾಲ, ಜ.1– ಕ್ರೀಡೆಯಲ್ಲಿ ಸೋಲು, ಗೆಲುವು ಸರ್ವೆ ಸಾಮಾನ್ಯವಾದುದು. ಆದರೆ ಪಾಲ್ಗೊಳ್ಳುವುದು ಮುಖ್ಯ. ಗೆದ್ದ ತಂಡ ಹಿಗ್ಗದೆ, ಸೋತ ತಂಡ ಕುಗ್ಗದೆ ಮುಂದಿನ ಕ್ರೀಡೆಗೆ ಸಜ್ಜಾಗುವುದು ಮುಖ್ಯ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ಅವರು ಪಟ್ಟಣದ ಎಂಜಿಎಸ್‌ವಿ ಮೈದಾನದಲ್ಲಿ 3 ದಿನಗಳ ಕಾಲ ಜರುಗಿದ ಅಂಬೇಡ್ಕರ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಜಯಗಳಿಸಿದ ಫಿಯರ್‌ಲೆಸ್ ಫೈಟರ್ ತಂಡಕ್ಕೆ ಟ್ರೋಫಿ ವಿತರಿಸಿ ಮಾತನಾಡಿ, ನಮ್ಮ ಜಿಲ್ಲೆ ಕ್ರೀಡೆ ಹಾಗೂ ಜಾನಪದ ಕಲೆಗೆ ಉತ್ತಮ ಹೆಸರುವಾಸಿಯಾಗಿದೆ. 1983ರಲ್ಲಿ ವರ್ಲ್ಡ್ ಕಪ್ ಗೆದ್ದ ಬಳಿಕ ನಮ್ಮ ದೇಶದಲ್ಲಿ ಯುವಕರು ಕ್ರಿಕೆಟ್ ಮೇಲೆ ಹೆಚ್ಚು ಆಸಕ್ತಿ ವಹಿಸಿದ್ದಾರೆ ಎಂದರು.

ಇದೇ ವೇಳೆ ಪಂದ್ಯಾವಳಿಯಲ್ಲಿ ವಿಜೇತ ಫಿಯರ್‌ಲೆಸ್ ಫೈಟರ್ ತಂಡಕ್ಕೆ 75 ಸಾವಿರ ನಗದು ಹಾಗೂ ಟ್ರೋಫಿ ಮತ್ತು ರನ್ನರ್ಸ್ ಸೂಪರ್ ಸ್ಟ್ರೈಕರ್ಸ್ ತಂಡಕ್ಕೆ 50 ಸಾವಿರ ನಗದು ಹಾಗೂ ಟ್ರೋಫಿಯನ್ನು ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ, ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಅವರು ವಿತರಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಎಸ್. ಜಯಣ್ಣ, ಜಿ.ಎನ್.ನಂಜುಂಡಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ತೋಟೇಶ್, ಕೆಎಂಎಫ್ ನಿರ್ದೇಶಕ ಮಧುವನಹಳ್ಳಿ ನಂಜುಂಡಸ್ವಾಮಿ, ಉಪ್ಪಾರ ನಿಗಮದ ರಾಜ್ಯ ಮಾಜಿ ಅಧ್ಯಕ್ಷ ಶಿವಕುಮಾರ್, ಪ್ರಥಮ ದರ್ಜೆ ಗುತ್ತಿಗೆದಾರ ಓಲೆ ಮಹದೇವ, ನಗರಸಭೆ ಮಾಜಿ ಅಧ್ಯಕ್ಷೆ ರೇಖಾ ರಮೇಶ್, ಭೀಮನಗರ ರಮೇಶ್ ಇನ್ನಿತರಿದ್ದರು.

ಆನಂದ ಬುದ್ಧಿ ನಿಧನ

ಚಾಮರಾಜನಗರ, ಜ.1– ತಾಲೂಕಿನ ಹರವೆ ಗ್ರಾಮದ ನಿವಾಸಿ ಮಹದೇಶ್ವರ ಬೆಟ್ಟದ ಸಾಲೂರು ಬೃಹನ್ಮಠದಲ್ಲಿ ಗದ್ದಿಗೆ ಪೂಜೆ ನೆರವೇರಿಸುತ್ತಿದ್ದ ಆನಂದ ಬುದ್ಧಿ (63) ಹರವೆ ಗ್ರಾಮದಲ್ಲಿ ಭಾನುವಾರ ರಾತ್ರಿ ನಿಧನರಾದರು. ಶ್ರೀಗಳ ನಿಧನದ ಹಿನ್ನೆಲೆಯಲ್ಲಿ ದೇವನೂರು ಮಠದ ಮಹಂತ ಸ್ವಾಮೀಜಿ, ಹರವೆ ವಿರಕ್ತ ಮಠದ ಸರ್ಪಭೂಷಣ ಸ್ವಾಮೀಜಿ, ಮರಿಯಾಲ ಮುರುಘರಾಜೇಂದ್ರ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಚಾಮರಾಜನಗರ ಸಿದ್ದಮಲ್ಲೇಶ್ವರ ವಿರಕ್ತಮಠದ ಚನ್ನಬಸವ ಸ್ವಾಮೀಜಿ, ಸೋಮಹಳ್ಳಿ ಮಠದ ಸಿದ್ದಮಲ್ಲಪ್ಪ ಸ್ವಾಮೀಜಿ, ಕುಂತೂರು ಮಠದ ಪ್ರಭು ಸ್ವಾಮೀಜಿ ಭೇಟಿ ನೀಡಿ, ಸಂತಾಪ ಸೂಚಿಸಿದರು.



ಶ್ರೀಗಳು ಸಹೋದರರು, ಸಹೋದರಿಯರು, ಬಂಧು ಬಳಗವನ್ನು ಅಗಲಿದ್ದಾರೆ. ಶ್ರೀಗಳ ಅಂತ್ಯಕ್ರಿಯೆ ಹರವೆ ಗ್ರಾಮದ ತೋಟದಲ್ಲಿ ಸೋಮವಾರ ಮಧ್ಯಾಹ್ನ ನಡೆಯಿತು.

ನಾದ ಧ್ಯಾನ ಯಜ್ಞ–2 ಕಾರ್ಯಕ್ರಮ

ಮೈಸೂರು, ಜ. 1–ಮೈಸೂರಿನ ಪಿರಮಿಡ್ ವರ್ಲ್ಡ್ ವತಿಯಿಂದ ಜ. 7 ರಂದು ಬೆಳಗ್ಗೆ 8.30 ರಿಂದ ಸಂಜೆ 5 ರವರೆಗೆ ಶ್ರೀ ಸುತ್ತೂರು ಮಠದಲ್ಲಿ ನಾದ ಧ್ಯಾನ ಯಜ್ಞ–2 ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 8.30ಕ್ಕೆ ಜ್ಯೋತಿ ಪ್ರಜ್ವಲನೆ, ಬೆಳಗ್ಗೆ 9 ರಿಂದ ಸಂಗೀತ ಧ್ಯಾನ (ನಾದ ಧ್ಯಾನ), ಮಧ್ಯಾಹ್ನ 12 ರಿಂದ ಪತ್ರೀಜಿಯವರ ಸಂದೇಶ, ಅಯ್ಯಪ್ಪ ಪಿಂಡಿಯವರ ಸಂದೇಶ ಮತ್ತು ಪುಸ್ತಕ ಬಿಡುಗಡೆ, ಮ. 2.30 ರಿಂದ ಹಿರಿಯ ಮಾಸ್ಟರ್ಸ್ ಸಂದೇಶಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಹೆಚ್ಚಿನ ಮಾಹಿತಿಗೆ ಮೊ. 89048 19169 ಸಂಪರ್ಕಿಸಬಹುದು.

ಒಂದನೇ ಪುಟದಿಂದ

ರಾಮಲಲ್ಲಾ ಪ್ರತಿಷ್ಠಾಪನೆ ಬಹುತೇಕ ಖಚಿತ

ಮೂರ್ತಿಗಳ ಪೈಕಿ ಈಗಾಗಲೇ ಒಂದನ್ನು ಆಯ್ಕೆ ಮಾಡಲಾಗಿದೆ ಎಂದು ಒಂದು ಮೂಲ ಹೇಳುತ್ತಿದ್ದರೆ, ಮತ್ತೊಂದು ಮೂಲದ ಪ್ರಕಾರ ಇನ್ನಷ್ಟೇ ಆಯ್ಕೆ ಪ್ರಕ್ರಿಯೆ ನಡೆಯಬೇಕಿದೆ ಎನ್ನುತ್ತಿದೆ. ಆದರೆ ಯಾವುದನ್ನೂ ರಾಮಮಂದಿರ ನಿರ್ಮಾಣ ಜವಾಬ್ದಾರಿ ಹೊಂದಿರುವ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಅಧಿಕೃತವಾಗಿ ಪ್ರಕಟಿಸಿಲ್ಲ. ಒಂದು ವೇಳೆ ಮೈಸೂರಿನ ಶಿಲ್ಪಿ ಅರುಣ್‌ಯೋಗಿರಾಜ್ ಅವರ ಕೆತ್ತನೆಯ ವಿಗ್ರಹ ಆಯ್ಕೆಯಾದರೆ ಸಾಂಸ್ಕೃತಿಕ ನಗರಿಯ ರಾಮನ ಭಕ್ತರ ಸಂತಸ ಇಮ್ಮಡಿಗೊಳ್ಳಲಿದೆ.



ವಿಶ್ವಾಸವಿದೆ: ಮೈಸೂರಿನ ಬಸವೇಶ್ವರ ವೃತ್ತದ ಬಳಿಯಿರುವ ತಮ್ಮ ನಿವಾಸದಲ್ಲಿ ಸೋಮವಾರ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅರುಣ್ ಯೋಗಿರಾಜ್ ಅವರ ತಾಯಿ ಸರಸ್ವತಿ, ಆಯ್ಕೆ ಸಂಬಂಧ ಇನ್ನೂ ಯಾವುದೇ ಖಚಿತ ಮಾಹಿತಿ ನಮಗೆ ಬಂದಿಲ್ಲ. ಆಯ್ಕೆಯಾದಲ್ಲಿ ಅತ್ಯಂತ ಸಂತಸ ಉಂಟಾಗಲಿದೆ. ಆಯ್ಕೆಯಾಗುವ ವಿಶ್ವಾಸವೂ ಇದೆ ಎಂದು ಹೇಳಿದರು.



ಅಧಿಕೃತ ಮಾಹಿತಿ ಇಲ್ಲ: ಇದೇ ವೇಳೆ ಅರುಣ್ ಯೋಗಿರಾಜ್ ಅವರ ಅಣ್ಣ ಶಿಲ್ಪಿ ವೈ.ಸೂರ್ಯಪ್ರಕಾಶ್ ಮಾತನಾಡಿ, ನನ್ನ ತಮ್ಮನ ಕೆತ್ತನೆಯ ವಿಗ್ರಹ ಆಯ್ಕೆ ಆಗಿರುವ ಬಗ್ಗೆ ಅಧೀಕೃತ ಮಾಹಿತಿ ಲಭ್ಯವಾಗಿಲ್ಲ. ಹಲವು ಮೂಲಗಳು ಹಾಗೆಂದು ಎಂದು ಹೇಳುತ್ತಿವೆ. ಒಟ್ಟಾರೆ ಆಯ್ಕೆ ಆಗುವ ವಿಶ್ವಾಸ ನಮಗೂ ಇದೆ ಎಂದು ತಿಳಿಸಿದರು.

ಗುಜ್ಜೆಗೌಡನಪುರದ ಶಿಲೆ: ತಮ್ಮನೊಂದಿಗೆ ಕರೆ ಮಾಡಿ ಮಾತನಾಡಿದ್ದೇನೆ. 'ಮೂರು ವಿಗ್ರಹಗಳ ಆಯ್ಕೆ ಸಂಬಂಧ ಓಟಿಂಗ್ ಪ್ರಕ್ರಿಯೆ ನಡೆದಿದೆ. ಆದರೆ ಇನ್ನೂ ಆಯ್ಕೆ ಪ್ರಕಟಿಸಿಲ್ಲ' ಎಂದು ತಿಳಿಸಿದ್ದಾರೆ. ಮೈಸೂರು ಸಮೀಪದ ಗುಜ್ಜೇಗೌಡನಪುರದಿಂದ ಅಯೋಧ್ಯೆಗೆ ಶಿಲೆಯನ್ನು ವಿಲೇವಾರಿ ಮಾಡಲಾಗಿತ್ತು. ರಾಮನ ದಶಾವತಾರ, ರಾಮನ ತಲೆ ಮೇಲೆ ಸೂರ್ಯ ಇರುವಂತೆ ಕೆತ್ತನೆ ಮಾಡಲಾಗಿದೆ. ಕಾರಣ ಶ್ರೀರಾಮ ಸೂರ್ಯವಂಶಸ್ಥ. ಪಕ್ಕದಲ್ಲಿ ಗರುಡಮೂರ್ತಿ, ಆಂಜನೇಯ ಇರುವಂತೆ ವಿನ್ಯಾಸ ಮಾಡಲಾಗಿದೆ. ಪೀಠದಲ್ಲಿ ನವಗ್ರಹ ಮೂಡಿಸಲಾಗಿದೆ. ಬಹಳ ಅದ್ಭುತವಾಗಿ ಮೂಡಿ ಬಂದಿದೆ. ಆಯ್ಕೆಯಾಗುವ ಅತೀವ ವಿಶ್ವಾಸವಿದೆ ಎಂದು ಹೇಳಿದರು.

ವಿಗ್ರಹದ ಕೆತ್ತನೆಯನ್ನು ಕೃಷ್ಣಶಿಲೆಯಲ್ಲಿ ಮಾಡಲಾಗಿದೆ. ಆಮ್ಲ ನಿರೋಧಕ, ಜಲನಿರೋಧಕ, ಅಗ್ನಿ ನಿರೋಧಕದ ಗುಣಲಕ್ಷಣ ಹೊಂದಿರುವುದು ಈ ಶಿಲೆಯ ವಿಶೇಷ. ಮಳೆ, ಗಾಳಿ, ಬಿಸಿಲಿನ ತಾಪಕ್ಕೆ ಸಿಕ್ಕರೂ ವಿಗ್ರಹ ಹಾನಿಗೆ ಒಳಗಾಗುವುದಿಲ್ಲ. ಅಂತಹ ವಿಶೇಷತೆ ಹೊಂದಿರುವ ಶಿಲೆಯಲ್ಲಿ ವಿಗ್ರಹದ ಕೆತ್ತನೆ ಮಾಡಲಾಗಿದೆ. ಅಯೋಧ್ಯೆಯಲ್ಲೇ 7 ತಿಂಗಳ ಕೆಲಸ ಮಾಡಿ ವಿಗ್ರಹದ ಕೆತ್ತನೆ ಮಾಡಲಾಗಿದೆ ಎಂದು ವಿವರಿಸಿದರು.

ಸಂತಸವಾಗಿದೆ: ಮೈಸೂರಿನಲ್ಲಿ ಇತ್ತೀಚೆಗಷ್ಟೇ ಮಾಧ್ಯಮದವರೊಂದಿಗೆ ಮಾತನಾಡಿದ್ದ ಶಿಲ್ಪಿ ಅರುಣ್ ಯೋಗಿರಾಜ್, ಅಯೋಧ್ಯೆಯಲ್ಲಿ ರಾಮಲಲ್ಲಾನ ಪ್ರಾಣ ಪ್ರತಿಷ್ಠಾಪನೆಗಾಗಿ ಇಡೀ ಭಾರತದ ಸುಮಾರು 500 ವರ್ಷಗಳಿಂದ ಕಾಯುತ್ತಿತ್ತು. ಜ.22ರಂದು ಅದು ಕೈಗೂಡುತ್ತಿದ್ದು, ಇದಕ್ಕಾಗಿ ಸಾಕಷ್ಟು ತ್ಯಾಗವಾಗಿದೆ. ಇದರಲ್ಲಿ ರಾಮಲಲ್ಲಾ ವಿಗ್ರಹ ಕೆತ್ತನೆಯ ಜವಾಬ್ದಾರಿ ಸಿಕ್ಕಿದ್ದು ಸಂತಸ ತಂದಿದೆ. ಇದೊಂದು ದೊಡ್ಡ ಜವಾಬ್ದಾರಿ ಎಂದು ಹೇಳಿದರು. ರಾಮಲಲ್ಲಾನ ವಿಗ್ರಹ ಕೆತ್ತನೆಗೆ ಮೂವರಲ್ಲಿ ನಾನೂ ಒಬ್ಬ ಆಗಿರುವುದು ನನಗೆ ಸಂತೋಷ ಉಂಟು ಮಾಡಿದೆ. ಈ ಹಿಂದೆ ನಾನು ಮಾಡಿದ ಕೆತ್ತನೆಯನ್ನು ಗುರುತಿಸಿ ಈ ಕಾರ್ಯ ವಹಿಸಲಾಯಿತು. ಕೇದಾರನಾಥ ದಲ್ಲಿ ಪ್ರತಿಷ್ಠಾಪಿಸಿರುವ ಆದಿ ಶಂಕರಾಚಾರ್ಯರ ಪ್ರತಿಮೆ, ಇಂಡಿಯಾ ಗೇಟ್‌ನಲ್ಲಿ ಪ್ರತಿಷ್ಠಾಪಿಸಿರುವ ಸುಭಾಷ್ ಚಂದ್ರ ಬೋಷ್ ಅವರ ಪತ್ರಿಮೆ ಕೆತ್ತನೆಯ ಕೆಲಸಗಳನ್ನು ಗುರುತಿಸಿ ಈ ದೊಡ್ಡ ಹೊಣೆಗಾರಿಕೆಯನ್ನು ನನಗೆ ನೀಡಲಾಯಿತು. 6ರಿಂದ 7 ಕಲಾವಿದರ ಪೈಕಿ ನಾನು ಸೇರಿದಂತೆ ಮೂವರು ರಾಮಲಲ್ಲಾನ ವಿಗ್ರಹ ಕೆತ್ತನೆಗೆ ಆಯ್ಕೆಯಾದೆವು ಎಂದರು.

ಅರುಣ್ ಸಂಕ್ಷಿಪ್ತ ಪರಿಚಯ: ಅರುಣ್ ಅವರ ತಂದೆ ಯೋಗಿರಾಜ್ ಅವರೂ ಶಿಲ್ಪಿ. ಅಲ್ಲದೆ, ಅರುಣ್ ಅವರ ತಾತನವರಾದ ಬಸವಣ್ಣ ಶಿಲ್ಪಿ (ಯೋಗಿರಾಜ್ ಅವರ ತಂದೆ) ಕೂಡ ಅದೇ ಕಾಯಕದಲ್ಲಿ ಖ್ಯಾತಿ ಹೊಂದಿದ್ದವರು. ಸುಮಾರು 5 ತಲೆಮಾರುಗಳಿಂದ ಶಿಲ್ಪ ಕೆತ್ತನೆಯಲ್ಲಿ ಅರುಣ್ ಕುಟುಂಬ ಹೆಸರುವಾಸಿಯಾಗಿದೆ. ಅರುಣ್ ಎಂಬಿಎ ವ್ಯಾಸಂಗ ಮಾಡಿದ ಬಳಿಕ ಬಹುರಾಷ್ಟ್ರೀಯ ಕಂಪನಿಗೆ ಉದ್ಯೋಗಕ್ಕೆ ಸೇರಿದ್ದರು. ಆದರೆ ಅವರ ಆಸಕ್ತಿ ಕುಲಕಸುಬಿನತ್ತ ಕರೆತಂದಿತು. ಬಳಿಕ ಶಿಲ್ಪಿ ಕೆತ್ತನೆಯನ್ನೇ ಉದ್ಯೋಗವಾಗಿ ಸ್ವೀಕರಿಸಿದರು. ತಮ್ಮ ಕೆತ್ತನೆ ಕೌಶಲ್ಯದಿಂದ ಹತ್ತು ಹಲವು ಪ್ರಶಸ್ತಿಗಳಿಗೆ ಭಾಜನವಾಗಿರುವ ಅರುಣ್, ರಾಷ್ಟ್ರಮಟ್ಟದಲ್ಲಿಯೂ ಗುರುತಿಸಿಕೊಂಡಿದ್ದಾರೆ.

ಡಿಸಿಎಂ ಡಿಕೆಶಿಗೆ ಮತ್ತೊಮ್ಮೆ ಸಂಕಷ್ಟ

'ಮೂಲದ ಜೈಹಿಂದ್ ಚಾನೆಲ್‌ನಲ್ಲಿ ಶಿವಕುಮಾರ್ ಅವರು ಮಾಡಿ ರುವ ಹೂಡಿಕೆ ವಿವರವನ್ನು ಸಲ್ಲಿಸುವಂತೆ ಸಂಸ್ಥೆಗೆ ನೋಟಿಸ್ ನೀಡಲಾಗಿದೆ. ಆದಾಯ ಮೀರಿ ಆಸ್ತಿ ಗಳಿಕೆ ಪ್ರಕರಣದಲ್ಲಿ ನೋಟಿಸ್ ಜಾರಿಯಾಗಿ ಜನವರಿ 11 ರಂದು ವಿಚಾರಣೆಗೆ ಹಾಜರಾಗುವಂತೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಆದೇಶಿಸಿದೆ. ಶಿವಕುಮಾರ್ ಮತ್ತು ಅವರ ಪತ್ನಿ ಉಷಾ ಅವರು ಚಾನೆಲ್‌ನಲ್ಲಿ ಮಾಡಿರುವ ಹೂಡಿಕೆ, ಪ್ರತಿಯಾಗಿ ಪಡೆದಿರುವ ಲಾಭಾಂಶ, ಷೇರು ವಹಿವಾಟು, ಹೊಂದಿರುವ ಆಸ್ತಿ ವಿವರಗಳು, ಇದಕ್ಕೆ ಸಂಬಂಧಪಟ್ಟಂತೆ ಸಂಪರ್ಕದಲ್ಲಿರುವವರ ವಿವರಗಳನ್ನು ನೀಡುವಂತೆ ಸೂಚಿಸಿದೆ. ಈ ಸಂಸ್ಥೆಯನ್ನು ಕೇರಳ ಮೂಲದ ಕಾಂಗ್ರೆಸ್ ನಾಯಕರು ನಡೆಸುತ್ತಿದ್ದು, ಶಿವಕುಮಾರ್ ವಿರುದ್ಧದ ಆದಾಯಕ್ಕೂ ಮೀರಿ ಆಸ್ತಿ ಗಳಿಕೆ ಪ್ರಕರಣವನ್ನು ಹಿಂದಿನ ಬಿಜೆಪಿ ಸರ್ಕಾರ ಸಿಬಿಐಗೆ ವಹಿಸಿತ್ತು. ಹಿಂದಿನ ಸರ್ಕಾರ ಕಾನೂನು ರೀತ್ಯಾ ಸಿಬಿಐಗೆ ವಹಿಸಿಲ್ಲ ಎಂಬ ಕಾರಣ ನೀಡಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪ್ರಕರಣವನ್ನು ಹಿಂದಕ್ಕೆ ಪಡೆದಿತ್ತು. ಇದೀಗ ಸಿಬಿಐ ಕೇರಳ ಕಂಪನಿಯ ಮೂಲಕ ಶಿವಕುಮಾರ್ ಅವರನ್ನು ಬಲೆಗೆ ಕೆಡವಲು ಮುಂದಾಗಿದೆ.

ನನ್ನನ್ನು ಒಳಗೆ ಹಾಕಿಕೊಳ್ಳಬೇಕು ಎಂದಿದ್ದರೆ, ಹಾಕಿಕೊಳ್ಳಲಿ...

ರೂಪಿಸುತ್ತಿದ್ದಾರೆ. ಸಿಬಿಐ ತನಿಖೆಯನ್ನು ರಾಜ್ಯ ಸರ್ಕಾರ ಲೋಕಾಯುಕ್ತಕ್ಕೆ ಹಸ್ತಾಂತರ ಮಾಡಿದೆ. ಕರ್ನಾಟಕ ಸರ್ಕಾರ ಸಿಬಿಐ ಪ್ರಕರಣವನ್ನು ಹಿಂಪಡೆದಿರುವುದನ್ನು ಹೈಕೋರ್ಟ್ ಒಪ್ಪಿದ್ದರೂ, ಸಿಬಿಐ ಯಾಕೆ ನೋಟಿಸ್ ನೀಡುತ್ತಿದೆ ಎಂಬುದು ಗೊತ್ತಿಲ್ಲ.

ಅವರ ಬಳಿ ನನ್ನ ಎಲ್ಲಾ ದಾಖಲೆಗಳು ಇವೆ. ಲೋಕಾಯುಕ್ತಕ್ಕೆ ಪ್ರಕರಣ ಹಸ್ತಾಂತರವಾಗಿರುವ ಹಿನ್ನೆಲೆಯಲ್ಲಿ ಈ ಎಲ್ಲಾ ದಾಖಲೆಗಳನ್ನು ಸಿಬಿಐ ಲೋಕಾಯುಕ್ತಕ್ಕೆ ನೀಡಬೇಕಾಗಿದೆ. ನನ್ನ ಸಂಸ್ಥೆ, ನನ್ನ ಹೆಂಡತಿ, ಮಕ್ಕಳು, ಕುಟುಂಬ ಸದಸ್ಯರು ಸೇರಿದಂತೆ ಹಲವರಿಂದ ಮಾಹಿತಿ ಕೇಳುತ್ತಿದ್ದಾರೆ. ಮೊದಲು ಈ ರೀತಿ ಮಾಡಿ ನಂತರ ಸಿಬಿಐ ನನಗೆ ನೋಟಿಸ್ ನೀಡುತ್ತಾರೆ. ಬಿಜೆಪಿಯವರು ನನ್ನನ್ನು ಜೈಲಿಗೆ ಕಳುಹಿಸುತ್ತೇವೆ ಎಂದು ಮೊದಲೇ ಹೇಳಿಕೊಳ್ಳುತ್ತಿದ್ದರು. ಇದೀಗ ಅದು ಸಾಬೀತಾಗುವ ಸಮಯ ಬಂದಿದೆ. ಅವರ ಆಸೆಗಳನ್ನು ಈಡೇರಿಸಿಕೊಳ್ಳಲಿ ನಾನು ಸಿದ್ಧನಿದ್ದೇನೆ. ಅಹಮದ್ ಪಟೇಲ್ ಇಂದಿಲ್ಲ. ಆದರೂ ನನಗೆ ರಾಜಕೀಯ ಕಿರುಕುಳ ಕೊಡುವುದನ್ನು ಮುಂದುವರೆಸಿದ್ದಾರೆ. ಇದರ ಹಿಂದೆ ಯಾರೆಲ್ಲಾ ಇದ್ದಾರೆ ಎಂಬುದು ಗೊತ್ತು. ಕಾನೂನು ಇದೆ, ನನ್ನ ಕೊನೆಯ ಉಸಿರು ಇರುವವರೆಗೂ ಹೋರಾಟ ಮಾಡುತ್ತೇನೆ ಎಂದರು.

ರಾಮಮಂದಿರ ನಿರ್ಮಾಣಕ್ಕೆ ನಮ್ಮ ಬೆಂಬಲವಿದೆ

ನೋಡೋಣ ಎಂದು ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಮತ ಗಳಿಸಲು ಕೇಂದ್ರದ ಬಿಜೆಪಿ ಸರ್ಕಾರ ರಾಮಮಂದಿರ ಉದ್ಘಾಟನೆಯನ್ನು ಬಳಸಿಕೊಂಡಿದೆ. ರಾಮ ಮಂದಿರ ಉದ್ಘಾಟನೆ ಒಂದು ಸ್ಟಂಟ್ ಅಷ್ಟೇ ಎಂದು ಸಿದ್ದರಾಮಯ್ಯ ಸಂಪುಟದ ಸಚಿವರೊಬ್ಬರು ಆರೋಪಿಸಿದ ಬೆನ್ನಲ್ಲೇ ಅವರು ರಾಮ ಮಂದಿರದ ಪರ ಹೇಳಿಕೆ ನೀಡಿದ್ದಾರೆ.

ಇನ್ನು ಪುಲ್ವಾಮಾ ಭಯೋತ್ಪಾದಕ ದಾಳಿ ಸಂದರ್ಭವನ್ನು ನೆನಪಿಸಿಕೊಂಡಿದ್ದ ಕರ್ನಾಟಕ ಸಚಿವ ಸುಧಾಕರ್, ಕಳೆದ ಲೋಕಸಭೆ ಚುನಾವಣೆಯಲ್ಲಿ ಮತ ಗಳಿಸಲು ಬಿಜೆಪಿ ಸರ್ಕಾರ ಪುಲ್ವಾಮಾ ಭಯೋತ್ಪಾದನಾ ದಾಳಿಯನ್ನು ಬಳಸಿಕೊಂಡಿತ್ತು. ಇದೀಗ ಭಗವಾನ್ ರಾಮನ ಮತ್ತು ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆಯನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಟೀಕಿಸಿದ್ದಾರೆ. ರಾಮಮಂದಿರ ಉದ್ಘಾಟನೆ ಒಂದು ಸ್ಟಂಟ್ ಆಗಿದ್ದು, ಜನರು ಮೂರ್ಖರಲ್ಲ. ನಮ್ಮನ್ನು ಎರಡು ಬಾರಿ ಮೂರ್ಖರನ್ನಾಗಿ ಮಾಡಲಾಗಿದೆ... ಮೂರನೇ ಬಾರಿಗೆ ನಾವು ಮೋಸ ಹೋಗುವುದಿಲ್ಲ ಎಂಬ ವಿಶ್ವಾಸವಿದೆ. ಲೋಕಸಭಾ ಚುನಾವಣೆಗೂ ಮುನ್ನ ರಾಮಮಂದಿರ ಉದ್ಘಾಟನೆಯಾಗುತ್ತಿದೆ. ರಾಮಮಂದಿರಕ್ಕೆ ನಾನು ಹಾಗೂ ಕಾಂಗ್ರೆಸ್ ಶಾಸಕ ರಘುಮೂರ್ತಿ ಕೊಡುಗೆ ನೀಡಿದ್ದೇವೆ. ನಾವೂ ಇಟ್ಟಿಗೆ ನೀಡಿದ್ದೇವೆ. ರಾಮ ಮಂದಿರ ಉದ್ಘಾಟನೆ ಚುನಾವಣೆಯ ಸಮಯದಲ್ಲಿ ಗಿಮಿಕ್ ಆಗಿದೆ ಎಂದು ಸುಧಾಕರ್ ಹೇಳಿದರು. ಮತ್ತೊಬ್ಬ ಸಚಿವ ಪ್ರಿಯಾಂಕ್ ಖರ್ಗೆ ಸಹ ರಾಮ ಮಂದಿರ ವಿಚಾರವಾಗಿ ಟೀಕೆ ಮಾಡಿದ್ದರು. ಕಳೆದ ಲೋಕಸಭೆ ಚುನಾವಣೆ ವೇಳೆ ರಾಮಮಂದಿರ ಎಲ್ಲಿತ್ತು? ಮತ ಸೆಳೆಯಲು ಬಿಜೆಪಿ ಧಾರ್ಮಿಕ ನಂಬಿಕೆಗಳನ್ನು ಬಳಸುತ್ತಿದೆ ಎಂದು ಕಿಡಿಕಾರಿದರು. ಈ ವಿಚಾರ ರಾಜಕೀಯವಾಗಿ ನಕಾರಾತ್ಮಕ ಪರಿಣಾಮ ಉಂಟು ಮಾಡುವ ಸಾಧ್ಯತೆ ಇದೆ ಎಂಬ ಸುಳಿವು ಸಿಕ್ಕ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾಗಿದ್ದಾರೆ.



ಬುಡಕಟ್ಟು ಸಮುದಾಯವನ್ನು ಮುಖ್ಯವಾಹಿನಿಗೆ ತರಲು ಕೇಂದ್ರದಿಂದ ಜನ್ಮನ್ ಯೋಜನೆ ಜಾರಿ

ಪರಿಣಾಮಕಾರಿ ಅನುಷ್ಠಾನಕ್ಕೆ ಅಧಿಕಾರಿಗಳಿಗೆ ಡಿಸಿ ಸಲಹೆ

ಮೈಸೂರು,ಜ.1(ಎಂಟಿವೈ)– ಬುಡಕಟ್ಟು ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಪಿಎಂ ಜನ್ಮನ್ ಯೋಜನೆ ಜಾರಿಗೊಳಿಸಿದ್ದು, ಮೈಸೂರು ಜಿಲ್ಲೆಯಲ್ಲಿ ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಅರ್ಹರಿಗೆ ಸೌಲಭ್ಯ ದೊರಕಿಸಿಕೊಡಲು ನೋಡಲ್ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ ನೀಡಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದ ಸಭಾಂಗಣದಲ್ಲಿ ಸೋಮವಾರ ಪಿಎಂ ಜನ್ಮನ್ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿರುವ ಬುಡಕಟ್ಟು ಸಮುದಾಯ ವಾಸಿಸುವ ಸ್ಥಳ, ಹಾಡಿ, ಗ್ರಾಮಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಬೇಕು. ಬುಡಕಟ್ಟು ಸಮುದಾಯದವರಿಗೆ ಸುರಕ್ಷಿತ ವಸತಿ ಸೌಲಭ್ಯ, ಶುದ್ಧ ಕುಡಿಯುವ ನೀರು ಪೂರೈಕೆ, ಸುಧಾರಿತ ಆರೋಗ್ಯ, ಶಿಕ್ಷಣ, ಪೋಷಣೆ, ರಸ್ತೆ ಮತ್ತು ದೂರ ಸಂಪರ್ಕ ವ್ಯವಸ್ಥೆ ಹಾಗೂ ಸುಸ್ಥಿರ ಜೀವನೋಪಾಯಕ್ಕಾಗಿ ಬೇಕಾದ ಅವಶ್ಯಕತೆಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಈ ಸೌಲಭ್ಯಗಳು ಬುಡಕಟ್ಟು ಸಮುದಾಯದ ಅರ್ಹ ಫಲಾನುಭವಿಗಳಿಗೆ ಸಿಗುವ ಕೆಲಸ ಆಗಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಸಮರ್ಪಕವಾಗಿ ಕೆಲಸ ನಿರ್ವಹಿಸಬೇಕು ಎಂದರು.

ಜಿಲ್ಲೆಯಲ್ಲಿ 153 ಹಾಡಿಗಳಲ್ಲಿ ಬುಡಕಟ್ಟು ಸಮುದಾಯದ ಜನ ವಾಸಿಸುತ್ತಿದ್ದಾರೆ. ಜೇನು ಕುರುಬ ಸಮುದಾಯದವರು ಇಂದಿಗೂ ಕಚ್ಚಾ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಪಕ್ಕಾ ಮನೆ ನಿರ್ಮಿಸಿ ಕೊಡಬೇಕಾಗಿದೆ. ಸೌಲಭ್ಯ ವಂಚಿತ ಬುಡಕಟ್ಟು ಸಮುದಾಯದ ಅರ್ಹ ಫಲಾನುಭವಿಗಳಿಗೆ ಪಿಎಂ ಜನ್ಮನ್ ಸೌಲಭ್ಯ ಒದಗಿಸಬೇಕು. 15 ವರ್ಷ ಹಳೆಯ ಮನೆಗಳು ಇದ್ದರೂ ಅಂತಹವರನ್ನು ಗುರುತಿಸಿ ಸೌಲಭ್ಯಗಳನ್ನು ನೀಡಲು ಅಗತ್ಯ ಕ್ರಮ ವಹಿಸಬೇಕು ಎಂದರು.

ಅರ್ಹರಿಗೆ ಈ ಯೋಜನೆಯ ಸೌಲಭ್ಯ ಒದಗಿಸಲು ತಾಲೂಕಿನ ತಹಶೀಲ್ದಾರರು ಪ್ರತಿದಿನ ಎರಡು ಗಂಟೆ ಮೀಸಲಿಟ್ಟು ಕೆಲಸ ಮಾಡಬೇಕು. ಯಾವುದೇ ಹಾಡಿಗಳಲ್ಲಿ ಮೂಲಸೌಕರ್ಯ ಕೊರತೆ ಆಗದಂತೆ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ಹಾಡಿಗಳಲ್ಲಿ ಅಧಿಕಾರಿಗಳು ಸಭೆ ನಡೆಸಿ ಸೂರು ಇಲ್ಲದವರ ಪಟ್ಟಿ ಮಾಡಬೇಕು. ಹಾಡಿಗಳಲ್ಲಿ ಕುಡಿಯುವ ನೀರು, ಗ್ರಾಮ ಸಡಕ್ ಯೋಜನೆಯಡಿ ರಸ್ತೆ ನಿರ್ಮಾಣ, ಆಧಾರ್ ನೋಂದಣಿ, ಜಾತಿ ಹಾಗೂ ಜನನ ಪ್ರಮಾಣ ಪತ್ರ ಮಾಡಿಸುವುದು, ಎಪಿಕ್ ಕಾರ್ಡ್ ಮಾಡಿಸುವ ಬಗ್ಗೆ ನೋಡಲ್ ಅಧಿಕಾರಿಗಳು ಗಮನಹರಿಸಬೇಕು ಎಂದು ತಿಳಿಸಿದರು.

ಹೆಚ್.ಡಿ.ಕೋಟೆ, ಹುಣಸೂರು ಹಾಗೂ ಪಿರಿಯಾಪಟ್ಟಣ ತಾಲೂಕುಗಳ ಹಾಡಿಗಳಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭೇಟಿ ನೀಡಿ ಅಲ್ಲಿ ಅವರಿಗೆ ಸರ್ಕಾರದ ಸೌಕರ್ಯಗಳನ್ನು ನೀಡುವುದು. ಸುರಕ್ಷಿತ ವಸತಿ, ಶುದ್ಧ ಕುಡಿಯುವ ನೀರು, ಆರೋಗ್ಯ ರಕ್ಷಣೆಗೆ ಸುಧಾರಿತ ಪ್ರವೇಶ, ಶಿಕ್ಷಣ, ಮತ್ತು ಪೋಷಣೆ, ರಸ್ತೆ ಮತ್ತು ದೂರಸಂಪರ್ಕ ಮತ್ತು ಸುಸ್ಥಿರ ಜೀವನೋಪಾಯಕ್ಕಾಗಿ ಅವಕಾಶಗಳ ಬಗ್ಗೆ ಅಧಿಕಾರಿಗಳು ಇಂದೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕೆಲಸ ಮಾಡಲು ಮುಂದಾಗಬೇಕು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಎಡಿಸಿ ಆರ್.ಲೋಕನಾಥ್, ಹುಣಸೂರು ಉಪ ವಿಭಾಗಾಧಿಕಾರಿ ಹ್ಯಾರಿಸ್ ಸುಮೈರ್, ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ ಯೋಜನಾ ಸಮನ್ವಯಾಧಿಕಾರಿ ಎನ್. ಮುನಿರಾಜು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು.

ಕರವೇ ಅಧ್ಯಕ್ಷ ನಾರಾಯಣಗೌಡ ಬಿಡುಗಡೆಗೆ ಸಿಪಿಕೆ ಒತ್ತಾಯ



ಮೈಸೂರು,ಜ.1(ಎಂಟಿವೈ)– ಮಾಲ್‌ಗಳಲ್ಲಿ ಕನ್ನಡ ನಾಮಫಲಕ ಅಳವಡಿಸುವಂತೆ ಪ್ರತಿಭಟನೆ ನಡೆಸಿ ಬಂಧನಕ್ಕೊಳಗಾಗಿರುವ ಕರವೇ ಅಧ್ಯಕ್ಷ ನಾರಾಯಣಗೌಡ ಅವರನ್ನು ಬಿಡುಗಡೆ ಮಾಡುವಂತೆ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕನ್ನಡ ಪರ ಸಂಘಟನೆಗಳ ವತಿಯಿಂದ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಕನ್ನಡವಿಲ್ಲದ ನಾಮಫಲಕಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಕನ್ನಡಪರ ಹೋರಾಟಗಾರ ನಾರಾಯಣಗೌಡ ಅವರನ್ನು ಸರ್ಕಾರ ಬಂಧಿಸಿರುವುದು ಸರಿಯಾದ ಕ್ರಮವಲ್ಲ. ಕೂಡಲೇ ಅವರನ್ನು ಬಿಡುಗಡೆ ಮಾಡಿ, ಕನ್ನಡಪರ ಹೋರಾಟಗಾರರ ಮೇಲಿನ ಎಲ್ಲ ಮೊಕದ್ದಮೆ ವಾಪಸು ಪಡೆಯಬೇಕು ಎಂದು ಆಗ್ರಹಿಸಿದರು.

ಕನ್ನಡದ ಕಥೆ ಹೋರಾಟದಿಂದ ಕೂಡಿದೆ. ಆದರೆ ಈಗ ಅದಕ್ಕೂ ಅಡ್ಡಿಪಡಿಸು ವುದು ಸರಿಯಲ್ಲ ನಾರಾಯಣಗೌಡ ಹಾಗೂ ಕನ್ನಡ ಕಾರ್ಯಕರ್ತರನ್ನು ಬಂಧಿಸಿ ಜೈಲಿಗಟ್ಟಿರುವುದು ಆತಂಕಕಾರಿ ಹಾಗೂ ಆಘಾತಕಾರಿ ಬೆಳವಣಿಗೆಯಾಗಿದೆ. ಅಲ್ಲದೆ, ನಾಮಫಲಕಗಳಲ್ಲಿ ಶೇ. 60 ರಷ್ಟು ಮಾತ್ರ ಕನ್ನಡ ಸೀಮಿತಗೊಳಿಸದೇ ಶೇ.100 ರಷ್ಟು ಕನ್ನಡದ ಕೆಲಸ ಆಗಬೇಕು ಎಂದರು.

ಕವಯಿತ್ರಿ ಡಾ. ಲತಾ ರಾಜಶೇಖರ್ ಮಾತನಾಡಿ, ಕನ್ನಡದ ಕೆಲಸ ಮಾಡುವವರ ಬಂಧನ ಸರಿಯಲ್ಲ. ಕನ್ನಡ ನೆಲ, ಜಲ, ನಾಡು ನುಡಿಗೆ ಪ್ರತಿಯೊಬ್ಬ ಕನ್ನಡಿಗರೂ ಹೋರಾಟ ನಡೆಸಬೇಕು. ರಾಜ್ಯದಲ್ಲಿ ಕನ್ನಡ ಭಾಷೆಯ ರಕ್ಷಣೆ ಎಲ್ಲರ ಹೊಣೆ. ಅದನ್ನು ಉಳಿಸುವ ಜವಾಬ್ದಾರಿ ಎಲ್ಲರದ್ದಾಗಿದೆ. ಹೋರಾಟಗಾರರನ್ನು ಹತ್ತಿಕ್ಕುವ ಕೆಲಸ ಸರಿಯಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಕಾವಲು ಪಡೆಯ ರಾಜ್ಯಾಧ್ಯಕ್ಷ ಎಂ.ಮೋಹನ್‌ಕುಮಾರ್‌ಗೌಡ, ಕನ್ನಡಪರ ಹೋರಾಟಗಾರರಾದ ಶಿವಶಂಕರ್, ಎಸ್.ಬಾಲಕೃಷ್ಣ, ಆಂಜನಪ್ಪ, ಪ್ರವೀಣ್‌ಕುಮಾರ್ ಇದ್ದರು.

ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳಲ್ಲೂ ಕೆಆರ್‌ಎಸ್ ಪಕ್ಷ ಸ್ಪರ್ಧೆ



ಮೈಸೂರು, ಜ.1(ಎಂಟಿವೈ)– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳಲ್ಲೂ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ(ಕೆಆರ್ ಎಸ್)ದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ನಿರ್ಧರಿಸಿದ್ದು, ಜ.6 ಮತ್ತು 7ರಂದು ಬೆಂಗಳೂರಿನ ಪಕ್ಷದ ಕಚೇರಿಯಲ್ಲಿ ಅಭ್ಯರ್ಥಿಗಳ ಸಂದರ್ಶನ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಉಪಾಧ್ಯಕ್ಷ ಡಿಪಿಕೆ ಪರಮೇಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳಲ್ಲಿ ಕೆಆರ್‌ಎಸ್ ಪಕ್ಷ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ. ಹೀಗಾಗಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸ ಬಯಸುವವರ ಸಂದರ್ಶನ ನಡೆಸಿ, ಸೂಕ್ತ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಪ್ರಯತ್ನ ಮಾಡಲಾಗುತ್ತಿದೆ. ಪಕ್ಷದ ಹಾಲಿ ಸದಸ್ಯರು 5 ಸಾವಿರ ರೂ. ಹಾಗೂ ಸದಸ್ಯರಲ್ಲದವರು 10 ಸಾವಿರ ಶುಲ್ಕ ನೀಡಿ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ. ಪರಿಶೀಲನೆ ನಂತರ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗೆ ದೂ. 96117 20802 ಅನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು.

ಕೆಆರ್‌ಎಸ್ ಪಕ್ಷವು ಆರಂಭದಿಂದಲೂ ಎಲ್ಲ ಚುನಾವಣೆಗಳಲ್ಲೂ ಸ್ಪರ್ಧಿಸಿ ನಿರಂತರವಾಗಿ ಜನರನ್ನು ತಲುಪುವ ಕೆಲಸ ಮಾಡುತ್ತಿದೆ. ಕಳೆದ ವಿಧಾನಸಭಾ ಚುನಾವಣೆ ವೇಳೆ 195 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ನಿರಂತರವಾಗಿ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತ ವ್ಯವಸ್ಥೆಯಲ್ಲಿನ ಅಕ್ರಮ, ಅನ್ಯಾಯ, ದುರಾಡಳಿತ, ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತಿದೆ. ಅಲ್ಲದೆ, ನಾಡಿನ ನೆಲ, ಜಲ, ಭಾಷೆ ಸಂರಕ್ಷಣೆ ಮತ್ತು ರಾಜ್ಯದ ಸಮಗ್ರ ಅಭಿವೃದ್ಧಿಗೆ ಕೆಲಸ ಮಾಡುತ್ತಿದೆ ಎಂದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಾ.ಸ. ಪ್ರವೀಣ್, ಸುಂದರ್ ಪ್ರೇಮ್‌ಕುಮಾರ್, ನಾಗೇಂದ್ರ, ರಾಜೇಂದ್ರ, ರಾಜೇಗೌಡ ಇದ್ದರು.

ಹೊಸ ವರ್ಷದಲ್ಲಿ ಎಲ್ಲರೂ ಆರೋಗ್ಯ ಕಾಪಾಡಿಕೊಳ್ಳುವ ಸಂಕಲ್ಪ ಮಾಡಿ

ಜಯದೇವ ಹೃದ್ರೋಗ ಸಂಸ್ಥೆ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್.ಸದಾನಂದ



ಮೈಸೂರು,ಜ.1(ಎಂಟಿವೈ)– ಹೊಸ ವರ್ಷ ಆರಂಭವಾಗಿದ್ದು, ಎಲ್ಲರೂ ತಮ್ಮ ಆರೋಗ್ಯ ಕಾಪಾಡಿಕೊಳ್ಳುವತ್ತ ಹೆಚ್ಚಿನ ಗಮನ ಹರಿಸಿ ಕೊರೊನಾ ಮುಕ್ತ ಭಾರತವಾಗಿಸಲು ಪಣ ತೊಡಬೇಕು ಎಂದು ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ. ಎಸ್. ಸದಾನಂದ ಸಲಹೆ ನೀಡಿದ್ದಾರೆ.

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಸಿಬ್ಬಂದಿಗಳು ಆಯೋಜಿಸಿದ್ದ ನೂತನ ವರ್ಷದ ಸ್ವಾಗತ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಸಿಬ್ಬಂದಿ ಹಾಗೂ ರೋಗಿಗಳಿಗೆ ಹೊಸ ವರ್ಷದ ಶುಭಾಶಯ ತಿಳಿಸಿ ಮಾತನಾಡಿದ ಅವರು, ದೇಶದೆಲ್ಲೆಡೆ ಇತ್ತೀಚೆಗೆ ಕೊರೊನಾ ಸೋಂಕು ಕಾಡಲಾರಂಭಿಸಿದೆ. ಕೆಲವೆಡೆ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹೊಸ ವರ್ಷದಲ್ಲಿ ತಮ್ಮ ಆರೋಗ್ಯ ಕಾಪಾಡಿಕೊಳ್ಳುವ ಸಂಕಲ್ಪ ಮಾಡಬೇಕು. ಆ ಮೂಲಕ ಎಲ್ಲರೂ ಆರೋಗ್ಯವಂತರಾಗಬೇಕು. ದೇಶದಲ್ಲಿ ಕೊರೊನಾ ಬರುವ ಲಕ್ಷಣಗಳಿದ್ದು ಸರ್ಕಾರ ಅಗತ್ಯ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ, ಜನರು ಭಯಪಡುವ ಅಗತ್ಯವಿಲ್ಲ, ಎಚ್ಚರಿಕೆಯಿಂದ ಇರಬೇಕು. ವಯಸ್ಸಾದವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಎಂದರು. ಭಾರತವನ್ನು ಕೊರೊನಾ ಮುಕ್ತ ದೇಶವಾಗಿಸಲು ಎಲ್ಲರ ಸಹಕಾರ ಅಗತ್ಯ ಎಂದರು.

ಜನರು ಎಷ್ಟೇ ಹಣವಂತರಾಗಿದ್ದರೂ, ಆರೋಗ್ಯವನ್ನು ಹಣ ನೀಡಿ ಖರೀದಿಸಲು ಸಾಧ್ಯವಿಲ್ಲ. ಅಂತಸ್ತು ಇದ್ದರೂ ಸಹ ಆರೋಗ್ಯ ಕೊಂಡುಕೊಳ್ಳಲು ಸಾಧ್ಯವಿಲ್ಲ. ಆರೋಗ್ಯ ಚೆನ್ನಾಗಿದ್ದರೆ ಏನು ಬೇಕಾದರೂ ಮಾಡಬಹುದು. ಈ ಹಿನ್ನೆಲೆಯಲ್ಲಿ ಆರೋಗ್ಯವಂತರಾಗಲು ಪ್ರತಿಯೊಬ್ಬರು ಪ್ರತಿದಿನ ಅರ್ಧಗಂಟೆ ವ್ಯಾಯಾಮ ಮಾಡಬೇಕು. ಕಡ್ಡಾಯವಾಗಿ 7 ಗಂಟೆ ನಿದ್ರೆ ಮಾಡಬೇಕು. ದುಶ್ಚಟಗಳಿಂದ ದೂರವಿದ್ದು, ಸಾಮಾಜಿಕ ಜಾಲತಾಣವನ್ನು ಹಿತಮಿತವಾಗಿ ಬಳಸಬೇಕು. ಉದ್ಯೋಗ ಸ್ಥಳ ಹಾಗೂ ಸಾಂಸಾರಿಕ ಜೀವನದಲ್ಲಿ ಒತ್ತಡ ಕಡಿಮೆ ಮಾಡಿಕೊಳ್ಳಬೇಕು. ಗುಣಮಟ್ಟದ ಆಹಾರವನ್ನು ಸೇವಿಸಬೇಕು. ಜಂಕ್‌ಫುಡ್‌ಗಳನ್ನು ಸೇವಿಸಬಾರದು. ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯ ವೈದ್ಯರಾದ ಡಾ.ಹೇಮಾ.ಎಸ್, ಡಾ.ವಿಶ್ವನಾಥ್, ಡಾ.ದೇವರಾಜ್, ನರ್ಸಿಂಗ್ ಅಧೀಕ್ಷಕ ಹರೀಶ್‌ಕುಮಾರ್ ಯೋಗಾನಂದ್, ರಮೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಭೀಮಾ ಕೋರೆಗಾಂವ್ ವಿಜಯೋತ್ಸವದ ಅಂಗವಾಗಿ ಮೈಸೂರಿನಲ್ಲಿ ಬೈಕ್ ರ್‍ಯಾಲಿ




ಮೈಸೂರು, ಜ.1(ಬಿಎಲ್‌ಯು)– ಭೀಮಾ ಕೋರೆಗಾಂವ್ 206 ನೇ ವಿಜಯೋತ್ಸವದ ಅಂಗವಾಗಿ ದಲಿತ ಸಂಘರ್ಷ ಸಮಿತಿಯವರು ಮೈಸೂರಿನಲ್ಲಿ ಇಂದು ಬೈಕ್ ರ್‍ಯಾಲಿ ನಡೆಸಿದರು.

ನಗರದ ಪುರಭವನದಲ್ಲಿರುವ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ರ್‍ಯಾಲಿ ಆರಂಭಿಸಿದರು. ರ್‍ಯಾಲಿಯು ಹಾರ್ಡಿಂಜ್ ವೃತ್ತ, ಗನ್‌ಹೌಸ್, ಬಸವೇಶ್ವರ ವೃತ್ತ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ, ಜೆಎಲ್‌ಬಿ ರಸ್ತೆ ಮೂಲಕ ಜಯನಗರದ ರೈಲ್ವೆ ಗೇಟ್ ಬಳಿ ಆಗಮಿಸಿತು.

ಅಲ್ಲಿರುವ ಕೋರೆಗಾಂವ್ ವಿಜಯಸ್ತಂಭಕ್ಕೆ ಪುಷ್ಪಾರ್ಚನೆ ಮಾಡಿ, ಕೋರೆಗಾಂವ್ ಯುದ್ಧದಲ್ಲಿ ಮಡಿದ ವೀರಯೋಧರು ಹಾಗೂ ಹುತಾತ್ಮರಾದ ಮಹರ್ ಸೈನಿಕರಿಗೆ ಗೌರವ ಸಲ್ಲಿಸಿದರು. ಯುದ್ಧ ಗೆದ್ದ ನಿಮಗೆ ಯಾವ ಬಳುವಳಿ ಬೇಕೆಂದು ಬ್ರಿಟನ್ ಮಹಾರಾಣಿ ಎಲಿಜಬೆತ್ ಕೇಳಿದಾಗ, ಸರ್ವ ಜನಾಂಗಕ್ಕೂ ಸಾರ್ವಜನಿಕ ಶಿಕ್ಷಣ ಕೊಡಿ ಎಂದು ಬೇಡಿಕೆ ಇಟ್ಟರು ಎಂದು 1818 ರಲ್ಲಿ ನಡೆದ ಕೋರೆಗಾಂವ್ ಚಳವಳಿಯನ್ನು ಈ ವೇಳೆ ನೆನಪು ಮಾಡಿಕೊಂಡರು.

ದಲಿತ ಸಂಘರ್ಷ ಸಮಿತಿ ಸಂಚಾಲಕ ಚೋರನಹಳ್ಳಿ ಶಿವಣ್ಣ, ಸಂಘಟನಾ ಸಂಚಾಲಕ ಕೆ.ವಿ.ದೇವೇಂದ್ರ, ನಟರಾಜ್ ಹಾರೋಹಳ್ಳಿ, ಶಿವಮೂರ್ತಿ ಶಂಕರಪುರ, ಪ್ರೊ.ನಂಜರಾಜೇ ಅರಸ್, ಪುಟ್ಟನಂಜಯ್ಯ, ಚಿಕ್ಕಳ್ಳಿ ದೇವರಾಜ್, ಭುಗತಗಳ್ಳಿ ಶಿವಮಾದು, ವರುಣ ಮಹೇಶ್, ವಿಕ್ರಾಂತ್ ಚಿಕ್ಕಲಿಂಗಯ್ಯ ಸೇರಿದಂತೆ ಹಲವರು ಈ ವೇಳೆ ಹಾಜರಿದ್ದರು.

ಮೈಸೂರಲ್ಲಿ ಸಾಹಿತಿ ಡಾ. ಚದುರಂಗ ಜನ್ಮ ದಿನಾಚರಣೆ



ಮೈಸೂರು,ಜ.1(ಎಂಟಿವೈ)– ರಾಷ್ಟ್ರಪಿತ ಮಹಾತ್ಮಗಾಂಧೀಜಿ ಅವರ ಪ್ರಭಾವಕ್ಕೆ ಒಳಗಾಗಿದ್ದ ಸಾಹಿತಿ ಡಾ.ಚದುರಂಗ(ಡಾ.ಸುಬ್ರಹ್ಮಣ್ಯ ರಾಜೇ ಅರಸ್) ಬರವಣಿಗೆಯನ್ನು ಹಿರಿಯ ಸಾಹಿತಿ ಬಿ.ಎಂ.ಶ್ರೀಕಂಠಯ್ಯ (ಬಿಎಂಶ್ರೀ) ಮೆಚ್ಚಿಕೊಂಡಿದ್ದರು ಎಂದು ವಿಮರ್ಶಕ ಡಾ.ಸಿ.ನಾಗಣ್ಣ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ ಆಯೋಜಿಸಿದ್ದ ಸಾಹಿತಿ ಡಾ.ಚದುರಂಗ(ಡಾ.ಸುಬ್ರಹ್ಮಣ್ಯ ರಾಜೇ ಅರಸ್) ಅವರ 109ನೇ ಜನ್ಮ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಸೂರು ರಾಜವಂಶದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರೊಂದಿಗೆ ಡಾ.ಸುಬ್ರಹ್ಮಣ್ಯ ರಾಜೇ ಅರಸ್ ಚದುರಂಗ ಆಡುತ್ತಿದ್ದ ಹಿನ್ನೆಲೆಯಲ್ಲಿ ಅವರ ಮನೆತನಕ್ಕೆ ಚದುರಂಗ ಎಂದು ಹೆಸರು ಬಂದಿದೆ. ಚದುರಂಗ ಅವರು ಒಂದೆಡೆ ಮಹಾತ್ಮಗಾಂಧೀಜಿ ಅವರ ಪ್ರಭಾವಕ್ಕೆ ಒಳಗಾಗಿದ್ದರು. ಅವರ ಬರವಣಿಗೆಯಲ್ಲಿ ಸೂಕ್ಷ್ಮತೆ ಹಾಗೂ ಅನೇಕ ವಿಚಾರಗಳು ಒಳಗೊಂಡಿದ್ದವು. ಆ ಕಾರಣದಿಂದಲೇ ಹಿರಿಯ ಸಾಹಿತಿ ಬಿ.ಎಂ.ಶ್ರೀ ಅವರಿಂದಲೂ ಪ್ರಶಂಸೆಗೆ ಒಳಗಾಗಿದ್ದರು ಎಂದು ತಿಳಿಸಿದರು.

ಬೆಂಗಳೂರಲ್ಲಿದ್ದ ಚದುರಂಗ ಅವರು ಅನಾರೋಗ್ಯದ ಕಾರಣ ಮೈಸೂರಿಗೆ ಹಿಂದಿರುಗಿದರು. 1942ರಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಪದವಿ ಶಿಕ್ಷಣ ಪೂರೈಸಿದರು. ಈ ವೇಳೆ ಅವರಿಗೆ ಪತ್ನಿ ವಿಯೋಗದ ನೋವು ಕಾಡುತ್ತಿದ್ದರೂ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದರು. ಸರ್ವಮಂಗಳ, ಉಯ್ಯಾಲೆ, ವೈಶಾಖ, ಹಿಜ್ವಾಲ, ಸ್ವಪ್ನ ಸುಂದರಿ ಕಾದಂಬರಿ ಬರೆದಿದ್ದಾರೆ. ಅಲ್ಲದೆ, ಮೂರು ನಾಟಕ ಹಾಗೂ ಇನ್ನಿತರ ಕೃತಿಯನ್ನು ಹೊರ ತಂದಿದ್ದಾರೆ. ಅವರ ಕಾದಂಬರಿಯಲ್ಲಿ ನವ್ಯ ಸಾಹಿತ್ಯ ಸೇರಿದಂತೆ ವಿವಿಧ ಆಯಾಮದ ವಿಚಾರ ಒಳಗೊಂಡಿದೆ ಎಂದು ಅವರು ವಿವರಿಸಿದರು.

ಇದೇ ವೇಳೆ ಚದುರಂಗ ಅವರ ಸೊಸೆ ವಿಜಯಲಕ್ಷ್ಮೀ ಮಾತನಾಡಿ, ಕನ್ನಡದ ಮಹತ್ವದ ಲೇಖಕರಲ್ಲಿ ಚದುರಂಗ ಅವರೂ ಒಬ್ಬರಾಗಿದ್ದಾರೆ. ಅವರು ಸಣ್ಣ ಕಥೆಗಾರರು, ಕಾದಂಬರಿಕಾರ ಹಾಗೂ ನಾಟಕಕಾರರೂ ಆಗಿದ್ದಾರೆ. ಅನೇಕ ಕೃತಿಗಳನ್ನು ಬರೆದು ಸಾಹಿತ್ಯ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿದ್ದಾರೆ. ನಮ್ಮ ಮಾವನವರು ಮಾನವೀಯ ಮೂರ್ತಿಯಾಗಿದ್ದರು. ಅವರ ಜೀವನದಲ್ಲಿ ಮಾನವೀಯತೆ ಗುಣಗಳು ಎದ್ದುಕಾಣುತ್ತಿದ್ದವು. ಮೃದು ಭಾಷಿಗರು. ಏರುಧ್ವನಿಯಲ್ಲಿ ಗಟ್ಟಿಯಾಗಿ ಯಾರೊಂದಿಗೂ ಮಾತನಾಡುತ್ತಿರಲಿಲ್ಲ. ಮಹಿಳೆಯರನ್ನು ಗೌರವದಿಂದ ಕಾಣುತ್ತಿದ್ದರು ಎಂದರು.

ಇದಕ್ಕೂ ಮುನ್ನ ಅರಸು ಮಂಡಳಿ ಅಧ್ಯಕ್ಷ ಹೆಚ್.ಎಂ.ಟಿ. ಲಿಂಗರಾಜೇಅರಸ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಡಾ.ಚದುರಂಗ ಅನೇಕ ಸವಾಲು ಎದುರಿಸಿದ ಮೇರು ಸಾಹಿತಿ. ಸರಳ–ಸಜ್ಜನ ವ್ಯಕ್ತಿಯಾಗಿದ್ದರು. ಇಂತಹ ಮಹಾನ್ ವ್ಯಕ್ತಿ ಅರಸು ಸಮುದಾಯದಲ್ಲಿ ಜನಿಸಿದ್ದೇ ನಮ್ಮ ಹೆಮ್ಮೆ ಎಂದರು.

ಐವರಿಗೆ ಡಾ.ಚದುರಂಗ ಪ್ರಶಸ್ತಿ : ಕಾರ್ಯಕ್ರಮದಲ್ಲಿ ಕರ್ನಾಟಕ ಪೊಲೀಸ್ ಅಕಾಡೆಮಿಯ ಸಹಾಯಕ ಆಡಳಿತಾಧಿಕಾರಿ ಪಿ.ಸರಳಾ, ಚಿಟ್ಟೆಗಳ ಸಂಶೋಧಕ ಅರುಣ್ ಕುಮಾರ್ ರಾಜೇ ಅರಸ್, ಉಪನ್ಯಾಸಕಿ, ಕವಿ ಲಕ್ಷ್ಮೀ ಕಿಶೋರ್ ಅರಸ್, ಬೆಟ್ಟದ ತುಂಗಾ ಗ್ರಾಪಂ ಅಧ್ಯಕ್ಷೆ ಪ್ರೀತಿ ಅರಸ್, ಮಂಡ್ಯದ ಅರಸು ಮಂಡಳಿ ಸಂಘದ ಅಧ್ಯಕ್ಷ ಜೆ.ಎಂ. ಮಾದರಾಜೇ ಅರಸ್ ಅವರಿಗೆ ಡಾ. ಚದುರಂಗ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್‌ನ ಗೌರವಾಧ್ಯಕ್ಷ ಬಿ.ವಿಜಯ ಅರಸ್, ಕೆಯುಎಂಸಿ ಟ್ರಸ್ಟ್‌ನ ಅಧ್ಯಕ್ಷ ಬಿ.ಎಸ್.ಶ್ರೀಧರ್ ರಾಜೇ ಅರಸ್, ಚುಟುಕು ಸಾಹಿತ್ಯ ಪರಿಷತ್ ರಾಜ್ಯ ಸಂಚಾಲಕ ಡಾ.ಎಂಜಿ. ಆರ್.ಅರಸ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಇದೇ ವೇಳೆ ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್‌ನ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಲಾಯಿತು.



ಭಾರತೀಯ ರಿಸರ್ವ್ ಬ್ಯಾಂಕ್ ನೋಟು ಮುದ್ರಣ ಘಟಕದ ಉದ್ಯೋಗಿಗಳ ವೇದಮಾತೆ ಶ್ರೀ ಗಾಯತ್ರಿ ವೃಂದದ ಹೊಸ ವರ್ಷದ ಕ್ಯಾಲೆಂಡರ್ ಅನ್ನು ಗೌರವಾಧ್ಯಕ್ಷ ಎಸ್.ಎ.ರಾಮದಾಸ್ ಬಿಡುಗಡೆ ಮಾಡಿದರು.



ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್‌ಗೌಡ ಸ್ನೇಹ ಬಳಗದ 2024ರ ಕ್ಯಾಲೆಂಡರ್ ಅನ್ನು ಮುಡಾ ಮಾಜಿ ಸದಸ್ಯ ನವೀನ್ ಕುಮಾರ್ ಅವರ ನೇತೃತ್ವದಲ್ಲಿ ಸುಬ್ಬರಾಯನ ಕೆರೆಯ 23ನೇ ವಾರ್ಡಿನ ನಿವಾಸಿಗಳ ಮನೆ ಮನೆಗೆ ವಿತರಿಸಿ ಹೊಸ ವರ್ಷದ ಶುಭ ಕೋರಲಾಯಿತು. ಇದೇ ಸಂದರ್ಭದಲ್ಲಿ ಸ್ಥಳೀಯ ಮುಖಂಡರಾದ ಮಂಜುನಾಥ್, ಮಹದೇವ್, ಸುಬ್ರಮಣ್ಯ, ಚೆಲುವರಾಜ್, ರಾಜೇಂದ್ರ, ರವೀಂದ್ರ, ಶಾಂತ, ನವೀನ ಇನ್ನಿತರರು ಹಾಜರಿದ್ದರು.



ಮೈಸೂರಿನ ಶಾರದಾವಿಲಾಸ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ನೂತನ ವರ್ಷದ ದಿನಚರಿಯನ್ನು (ಕ್ಯಾಲೆಂಡರ್) ಬಿಡುಗಡೆಗೊಳಿಸಲಾಯಿತು. ಸಂಸ್ಥೆಯ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್, ವಿ.ವಿ.ಪುರಂ ಸಂಚಾರ ಠಾಣೆಯ ಸಹಾಯಕ ಆರಕ್ಷಕ ನಿರೀಕ್ಷಕ ಎಲ್.ಸಿ.ಶ್ರೀಧರ್, ಆಡಳಿತ ಮಂಡಳಿ ಸದಸ್ಯರಾದ ಎಸ್.ನಾಗರಾಜು, ಸಂಸ್ಥೆಯ ಆಡಳಿತಾಧಿಕಾರಿ ಶ್ರೀಕಾಂತ್, ಪ್ರಾಂಶುಪಾಲ ಸಿ.ಕೆ.ಅಶೋಕ್ ಕುಮಾರ್, ಉಪನ್ಯಾಸಕ ಹೆಚ್.ಆರ್.ಪರಮೇಶ್, ಡಿ.ಶಿವಶಂಕರ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ವಿಷ್ಣುವರ್ಧನ್ ಸ್ಮಾರಕ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಹೆಚ್.ಡಿ.ಕೋಟೆ ಇವರು ಹೊರತಂದಿರುವ ದಿನದರ್ಶಿನಿಯನ್ನು ಜಿಲ್ಲಾ ಗವರ್ನರ್ ರೊ.ಹೆಚ್.ಆರ್.ಕೇಶವ್ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಹೆಚ್.ಡಿ.ಕೋಟೆ ರೋಟರಿ ಅಧ್ಯಕ್ಷ ರೊ.ಬಿ.ಜಿ.ಗಂಗಾಧರ, ಕಾರ್ಯದರ್ಶಿ ರೊ.ಸ್ವಾಮಿ ಹಾಗೂ ರೋಟರಿ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರಿನ ಸಿದ್ಧಾರ್ಥನಗರದ ಶ್ರೀ ಗಾಯತ್ರಿ ಎಜುಕೇಷನಲ್ ಕಲ್ಚರಲ್ ಅಂಡ್ ಚಾರಿಟಬಲ್ ಟ್ರಸ್ಟ್‌ನ ನೂತನ ದಿನದರ್ಶಿಕೆಯನ್ನು ಟ್ರಸ್ಟ್‌ನ ಅಧ್ಯಕ್ಷೆ ವನಜಾ ಬಿ.ಪಂಡಿತ್ ಬಿಡುಗಡೆ ಮಾಡಿದರು. ವಿದುಷಿ ಡಾ. ಜ್ಯೋತಿ ಶಂಕರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ ಶ್ರೀಕಂಠ ಕುಮಾರ್, ಟ್ರಸ್ಟ್‌ನ ಉಪಾಧ್ಯಕ್ಷ ಆರ್.ವಿ. ವೆಂಕಟರಾಮ್, ಕಾರ್ಯದರ್ಶಿ ಸಿ.ಕೆ.ಸುನಿಲ್ ಕುಮಾರ್, ವೀಣಾ ಡೋಂಗ್ರೆ, ಪದ್ಮಿನಿ, ಕೃಷ್ಣಮೂರ್ತಿ, ಶೇಷನಾರಾಯಣ, ಶಂಕರನಾರಾಯಣ ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ಸರ್ಕಾರಿ SC/ST ನೌಕರರ ಸಂಘ ಮೈಸೂರು ಜಿಲ್ಲಾ ಸಂಘದ ನೂತನ ವರ್ಷದ ಕ್ಯಾಲೆಂಡರ್ ಅನ್ನು ನಜರ್‌ಬಾದ್‌ನ ಲೋಕೋಪಯೋಗಿ ಇಲಾಖೆ ವಸತಿ ಗೃಹದಲ್ಲಿ ರಾಜ್ಯ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ಬಿಡುಗಡೆ ಮಾಡಿದರು. ನಿಕಟಪೂರ್ವ ಅಧ್ಯಕ್ಷ ಡಿ.ಹರೀಶ್ ಬಾಬು, ಉಪಾಧ್ಯಕ್ಷ ಕೆ.ಮಹದೇವನಾಯಕ, ಪ್ರಧಾನ ಕಾರ್ಯದರ್ಶಿ ಪಿ.ರಾಘವೇಂದ್ರ, ಉಪಾಧ್ಯಕ್ಷ ಮಹದೇವ್, ಖಜಾಂಚಿ ಹೆಚ್.ಪಿ.ಮಹದೇವ, ಮುಖಂಡರಾದ ಅಹಿಂದ ಜವರಪ್ಪ, ದ್ಯಾವಪ್ಪ ನಾಯಕ ಮತ್ತಿತರರು ಉಪಸ್ಥಿತರಿದ್ದರು.



ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ ನಡೆಸುತ್ತಿರುವ ಇನ್ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆಯಲ್ಲಿ ನೂತನ ವರ್ಷಕ್ಕೆ ಸ್ವಾಗತ ಕೋರಿ ತಾಯಿ ಮತ್ತು ಮಕ್ಕಳಿಗೆ ದಿನದ ಪ್ರಾಮುಖ್ಯತೆಯನ್ನು ವಿವರಿಸಲಾಯಿತು. ಚಿತ್ರದಲ್ಲಿ ಸಂಸ್ಥೆಯ ಪರಿಮಳ, ಉಮಾ, ದೇವಮ್ಮ, ಸ್ವಾತಿ, ಮಧು ಮಕ್ಕಳು ಹಾಗೂ ತಾಯಂದಿರಿದ್ದಾರೆ.

ಭಕ್ತರಿಗೆ ಮಂತ್ರಾಕ್ಷತೆ, ಶ್ರೀರಾಮರ ಚಿತ್ರ ವಿತರಣೆ



ಮೈಸೂರು, ಜ. 1–ಅಯೋಧ್ಯೆ ರಾಮ ಮಂದಿರದಿಂದ ಬಂದ ಶ್ರೀರಾಮ ದೇವರ ಮಂತ್ರಾಕ್ಷತೆ ಹಾಗೂ ಚಿತ್ರಗಳನ್ನು ಕ್ಯಾತನಹಳ್ಳಿ ಸಂಘ ಸಂಚಾಲಕ ಚಂದ್ರಶೇಖರ್ ಅವರು ಮನೆ ಮನೆಗೆ ತಲುಪಿಸಿ, ರಾಮ ಮಂದಿರ ಉದ್ಘಾಟನಾ ಕಾರ್ಯಕ್ರಮ ದಂದು ದೀಪ ಬೆಳಗಿಸುವಂತೆ ಮನವಿ ಮಾಡಿದರು. ಮೈಸೂರಿನ ಕ್ಯಾತನಹಳ್ಳಿ ವಿಭಾಗದ ರಾಮ ಧಾಮದಲ್ಲಿ ಅಯೋಧ್ಯೆ ರಾಮಮಂದಿರದಿಂದ ಬಂದ ಶ್ರೀ ರಾಮ ದೇವರ ಮಂತ್ರಾಕ್ಷತೆ ಹಾಗೂ ಚಿತ್ರಕ್ಕೆ ಸೋಮವಾರ ವಿಶೇಷ ಪೂಜೆ ಸಲ್ಲಿಸಿ ನೆರೆದ ಭಕ್ತರಿಗೆ ಮಂತ್ರಾಕ್ಷತೆ ನೀಡಿ ಅಯೋಧ್ಯೆಯಲ್ಲಿ ಜನವರಿ 22ರಂದು ನಡೆಯುವ ಶ್ರೀರಾಮದೇವರ ಪ್ರತಿಷ್ಠಾಪನೆ ದಿನದಂದು ಪ್ರತಿಯೊಬ್ಬರೂ ಮನೆಗಳಲ್ಲಿ ಪೂರ್ವಾಭಿಮುಖವಾಗಿ ಐದು ದೀಪಗಳನ್ನು ಹಚ್ಚಿ ಪೂಜೆ ಸಲ್ಲಿಸಲು ಮನವಿ ಮಾಡಿದರು. ಅಭಿಯಾನದ ಸಂಚಾಲಕ ಲೋಕೇಶ್, ಸಹ ಸಂಚಾಲಕ ಬಿ. ಆನಂದ್, ಪದ್ಮನಾಥ್, ಮಣಿರತ್ನಂ, ಪ್ರತಿಜ್ಞ ಇತರರು ಉಪಸ್ಥಿತರಿದ್ದರು.

ಎಂಎಸ್‌ಐಎಲ್ ಮದ್ಯ ಮಳಿಗೆಗಳಲ್ಲಿ ಇನ್ನು ಮುಂದೆ ವಿದೇಶಿ ಮದ್ಯವೂ ಲಭ್ಯ!

ರಾಜ್ಯಾದ್ಯಂತ 200 ಹೈಟೆಕ್ ಮದ್ಯ ಮಳಿಗೆ ಆರಂಭ

ಬೆಂಗಳೂರು, ಜ.1(ಕೆಎಂಶಿ)– ವಿಶ್ವ ದರ್ಜೆಯ ಮದ್ಯಗಳು ಇನ್ನು ಮುಂದೆ ಸರ್ಕಾರಿ ಸ್ವಾಮ್ಯದ ಎಂಎಸ್‌ಐಎಲ್‌ನ ಆಯ್ದ ಮಳಿಗೆಗಳಲ್ಲಿ ಲಭ್ಯವಾಗಲಿದೆ.

ಅಬಕಾರಿಯಿಂದ ವಾರ್ಷಿಕ ಆದಾಯವನ್ನು ಹೆಚ್ಚಿಸಲು ಸರ್ಕಾರ ದುಬಾರಿ ಬೆಲೆಯ ಮದ್ಯಗಳನ್ನು ಮಾರಾಟ ಮಾಡಲು ಮುಂದಾಗಿದೆ. ರಾಜ್ಯಾದ್ಯಂತ 200 ಹೈಟೆಕ್ ಮಳಿಗೆಗಳನ್ನು ಪ್ರಾರಂಭಿಸುತ್ತಿದೆ. ರಾಜಧಾನಿಯಲ್ಲಿರುವ ಎರಡು ಖಾಸಗಿ ಬೃಹತ್ ಮದ್ಯ ಮಾರಾಟ ಮಳಿಗೆಗಳ ಮಾದರಿಯಲ್ಲೇ ಈ ಮಳಿಗೆಗಳು ತಲೆ ಎತ್ತಲಿವೆ.

ರಾಜಧಾನಿಯಲ್ಲಿ 20, ಉಳಿದ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 4 ರಿಂದ 8 ಹಾಗೂ ಪ್ರತಿ ಜಿಲ್ಲಾ ಕೇಂದ್ರದಲ್ಲಿ ಒಂದು ಮಳಿಗೆ ಇರಲಿದೆ.

ಈ ವಿಶೇಷ ಮಳಿಗೆಗಳಲ್ಲಿ ಜಾಗತಿಕ ಮಟ್ಟದ ಮದ್ಯಗಳು ದೊರೆಯಲಿವೆ. ರಾಜಧಾನಿಯಲ್ಲಿಂದು ಇಂತಹ ಮಳಿಗೆಯನ್ನು ಪ್ರಾರಂಭಿಕವಾಗಿ ಉದ್ಘಾಟಿಸಿ ಮಾತನಾಡಿದ ಸರ್ಕಾರಿ ಸ್ವಾಮ್ಯದ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್, ಮಧ್ಯಮ ವರ್ಗದಿಂದ ಸಮಾಜದ ಪ್ರತಿಯೊಂದು ವರ್ಗದ ಗ್ರಾಹಕರನ್ನೂ ಸೆಳೆಯುವುದು ಎಂಎಸ್‌ಐಎಲ್‌ನ ಗುರಿಯಾಗಿದೆ. ಸಾಮಾನ್ಯ ಬೆಲೆಯಿಂದ ಅತ್ಯಂತ ದುಬಾರಿ ಬೆಲೆಯ ಬ್ರಾಂಡೆಡ್ ಮದ್ಯದ ಉತ್ಪನ್ನಗಳು ಸುಲಭವಾಗಿ ಸಿಗಲಿವೆ ಎಂದರು.



ಎಂಎಸ್‌ಐಎಲ್ ಅಧ್ಯಕ್ಷರೂ ಆದ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಸಲಹೆ ಮೇರೆಗೆ ಮದ್ಯ ಮಾರಾಟ ಮಳಿಗೆಗಳನ್ನು ಹೈಟೆಕ್ ರೀತಿ ವಿನ್ಯಾಸ ಮಾಡಲು ಆರಂಭಿಸಿದ್ದು ಹಂತ ಹಂತವಾಗಿ ಎಲ್ಲವನ್ನೂ ಬದಲಿಸಲಾಗುವುದು.

ಎಂಎಸ್‌ಐಎಲ್ ರಾಜ್ಯದಲ್ಲಿ ಒಟ್ಟು 1,029 ಮದ್ಯ ಮಾರಾಟ ಮಳಿಗೆಗಳನ್ನು ನಡೆಸುತ್ತಿದೆ. ಈ ಪೈಕಿ 200 ಮಳಿಗೆಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದ್ದು, ಇದರಲ್ಲಿ 20 ಮಳಿಗೆಗಳು ಬೆಂಗಳೂರಿನಲ್ಲೇ ಇರಲಿವೆ. ಈ ಎಲ್ಲ ಮಳಿಗೆಗಳಲ್ಲೂ ಚಿಲ್ಲರೆ ಮಾರಾಟ ದರದಲ್ಲಿ ಅತ್ಯುತ್ಕೃಷ್ಟ ಮದ್ಯಗಳು ಲಭ್ಯವಾಗಲಿವೆ ಎಂದರು.

ಇಂತಹ ಮಳಿಗೆಗಳಿಂದ ಸಂಸ್ಥೆಯ ವಹಿವಾಟು ಶೇಕಡ 30ರಿಂದ 40ರಷ್ಟು ಏರಿಕೆಯಾಗಲಿದೆ. ಇಲ್ಲಿ ಲಭ್ಯವಿರುವ ಬ್ರಾಂಡೆಡ್ ಮದ್ಯಗಳಿಗೆ ಗುಣಮಟ್ಟದ ಖಾತ್ರಿ ಇರಲಿದೆ. ಸಂಸ್ಥೆಯು ವಹಿವಾಟನ್ನು 4 ಸಾವಿರ ಕೋಟಿ ರೂ.ಗಳಿಗೆ ಹೆಚ್ಚಿಸಿಕೊಳ್ಳುವ ಗುರಿ ಇಟ್ಟುಕೊಂಡಿದೆ.

ವಾರ್ಷಿಕ 10 ಸಾವಿರ ಕೋಟಿ ರೂ. ಮೊತ್ತದ ಚಿಟ್ ಫಂಡ್ ವ್ಯವಹಾರ, ಲೇಖನ ಸಾಮಗ್ರಿಗಳ ಮಾರಾಟಕ್ಕೆ ಫ್ರಾಂಚೈಸಿಗಳ ಆರಂಭ, 10 ಮೆಗಾ ಮೆಡಿಕಲ್ ಶಾಪ್ ಆರಂಭ ಮುಂತಾದ ಉಪಕ್ರಮಗಳನ್ನು ಕೈಗೊಳ್ಳಲಿದ್ದು, ಪ್ರತಿಯೊಂದು ವಹಿವಾಟಿನಲ್ಲೂ ಕಾರ್ಪೊರೇಟ್ ಸ್ಪರ್ಶ ನೀಡಲಾಗುವುದು ಎಂದರು.

ಹೊಸ ವರ್ಷಾಚರಣೆ ವೇಳೆ ಎಣ್ಣೆಯಲ್ಲಿ ಮಿಂದೆದ್ದ ರಾಜ್ಯದ ಜನತೆ! 193 ಕೋಟಿ ರೂ. ಮೌಲ್ಯದ ಮದ್ಯ ಮಾರಾಟ!!



ಬೆಂಗಳೂರು: ಹೊಸ ವರ್ಷದ ಆಗಮನದ ಜೊತೆಗೆ ಮದ್ಯದ ಕಿಕ್ ಕೂಡ ಜೋರಾಗಿಯೇ ಇದೆ ಸರ್ಕಾರದ ಬೊಕ್ಕಸಕ್ಕೆ ಕೋಟಿ ಕೋಟಿ ಹಣ ಹರಿದು ಬಂದಿದೆ. 2023ರ ಕೊನೆಯ ದಿನವಾದ ಭಾನುವಾರದಂದು 193 ಕೋಟಿ ಮೌಲ್ಯದ ಮದ್ಯ ಮಾರಾಟವಾಗಿದೆ. ಈ ಮೂಲಕ ಒಂದೇ ದಿನ ಭರ್ಜರಿ ಲಿಕ್ಕರ್ ಸೇಲ್ ಆಗಿದೆ. ಡಿಸೆಂಬರ್ ತಿಂಗಳಲ್ಲಿ ಇಂಡಿಯನ್ ಮೇಡ್ ಲಿಕ್ಕರ್ 3,07,953 ಬಾಕ್ಸ್, ಬಿಯರ್ 1,95,005 ಬಾಕ್ಸ್ ಮಾರಾಟವಾಗಿದೆ. ಮದ್ಯದ ದರ ಹೆಚ್ಚಳವಾದರೂ ಚಿಂತೆಯಿಲ್ಲ ಎಂದು ಮದ್ಯ ಪ್ರಿಯರು ಹೊಸ ವರ್ಷಾಚರಣೆಗೆ ಮದ್ಯದ ಕಿಕ್ ಏರಿಸಿಕೊಂಡಿದ್ದಾರೆ.

ಕಳೆದ ವರ್ಷ ಡಿಸೆಂಬರ್ ತಿಂಗಳಲ್ಲಿ 2,611 ಕೋಟಿ ಆದಾಯ ಬಂದಿತ್ತು. ಈ ವರ್ಷ ಡಿಸೆಂಬರ್ ತಿಂಗಳಲ್ಲಿ 3 ಸಾವಿರ ಕೋಟಿ ಆದಾಯ ಸಂಗ್ರಹವಾಗಿದೆ. ಒಟ್ಟಿನಲ್ಲಿ ಎರಡು ವರ್ಷಕ್ಕೆ ಹೋಲಿಸಿದರೆ ಈ ವರ್ಷದಲ್ಲಿ ಮದ್ಯ ಮಾರಾಟದಿಂದ ಸರ್ಕಾರದ ಬೊಕ್ಕಸಕ್ಕೆ ಹೆಚ್ಚು ಆದಾಯ ಹರಿದುಬಂದಿದೆ. ನಗರ ಹಾಗೂ ಗ್ರಾಮೀಣ ಭಾಗದ ಮೂಲೆ ಮೂಲೆಯಲ್ಲಿಯೂ ಜನರು ಮದ್ಯದ ನಶೆಯ ಮೂಲಕ ಹೊಸ ವರ್ಷವನ್ನು ಅದ್ಧೂರಿಯಾಗಿ ಬರಮಾಡಿಕೊಂಡಿದ್ದಾರೆ.


ರಾಜ್ಯದ ಜನರು ಬಹಳ ಸಂಭ್ರಮದಿಂದ ಹೊಸ ವರ್ಷವನ್ನು ವೆಲ್ ಕಮ್ ಮಾಡಿದ್ದಾರೆ. ಬೆಂಗಳೂರಿನಲ್ಲಂತೂ 'ಎಣ್ಣೆಯ ಮತ್ತೇ ಗಮ್ಮತ್ತು' ಎಂಬಂತೆ ನಾರಿಯರು, ಯುವಕರು ಎಣ್ಣೆಯಲ್ಲಿ ಮಿಂದೆದಿದ್ದಾರೆ.

ರಾಜ್ಯದಲ್ಲಿ 48 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 35 ಸಾವಿರ ಕೋಟಿ ರೂ. ಬೆಳೆ ನಷ್ಟ

ಬೆಂಗಳೂರು, ಜ.1– ರಾಜ್ಯದಲ್ಲಿ 48 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 35 ಸಾವಿರ ಕೋಟಿ ರೂಪಾಯಿ ಬೆಳೆ ನಷ್ಟವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಹೇಳಿದ್ದಾರೆ.

ಇಂದು ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣದಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಹೊಸ ವರ್ಷದ ಶುಭಾಶಯಗಳನ್ನು ಕೋರಿ, ಮಾತನಾಡಿದ ಸಿಎಂ, ಪ್ರಕೃತಿ ಸಹಾಯವಿಲ್ಲದಿದ್ದರೆ, ಸರ್ಕಾರ ಏನು ಪರಿಹಾರ ಕೊಟ್ಟರು ಸಾಕಾಗುವುದಿಲ್ಲ. ಹವಾಮಾನ ಬದಲಾವಣೆಯಿಂದಾಗಿ ಈ ವೈಪರೀತ್ಯ ಕಾಣುತ್ತಿದ್ದೇವೆ. ಮುಂಗಾರಿನಲ್ಲಿ ಒಳ್ಳೆ ಮಳೆಯಾಗುವ ನಿರೀಕ್ಷೆ ಇದೆ. 2024 ರಲ್ಲಿ ಒಳ್ಳೆಯ ಮಳೆ ಬೆಳೆ ಆಗಲಿ ಎಂದು ಪ್ರಾರ್ಥನೆ ಮಾಡುತ್ತೇನೆ ಎಂದರು.

ಅಭಿವೃದ್ಧಿ ನಿರೀಕ್ಷಿತ ಫಲ ಕಾಣಲು ಸಮೃದ್ಧಿಯಾಗಿ ಮಳೆಯಾಗಲಿ. ಶೇ. 60ಕ್ಕೂ ಹೆಚ್ಚು ಜನ ವ್ಯವಸಾಯದ ಮೇಲೆ ಅವಲಂಬಿತರಾಗಿದ್ದಾರೆ. ಗ್ಯಾರಂಟಿಗಳನ್ನು ಕೊಟ್ಟಿದ್ದರಿಂದ ಬರದ ತೀವ್ರತೆ ಕಡಿಮೆಯಾಗಿದೆ. ಬಡವರ ಕುಟುಂಬಕ್ಕೆ ಹಣ ದೊರೆಯುತ್ತಿದ್ದು, ಕೊಳ್ಳುವ ಶಕ್ತಿ ಇದೆ. ಬರಗಾಲವಿದ್ದರೂ ಸ್ವಲ್ಪ ಮಟ್ಟಿಗೆ ಅದರ ತೀವ್ರತೆ ಕಡಿಮೆಯಾಗಿದೆ.



ಇಲ್ಲದಿದ್ದರೆ ಹಾಹಾಕಾರ ಶುರುವಾಗುತ್ತಿತ್ತು. ಸಾರ್ವತ್ರಿಕ ಮೂಲ ಆದಾಯದ ತತ್ವದ ತಳಹದಿಯ ಮೇಲೆ ಜನರ ಆದಾಯ ಹೆಚ್ಚಿಸಿ ಆರ್ಥಿಕ ಚಟುವಟಿಕೆಗಳಿಗೆ ಇಂಬು ದೊರೆತಿದೆ ಎಂದರು. ರಾಜ್ಯದ ಜನರ ಅಭಿವೃದ್ಧಿಗಾಗಿ ಜನ ನಮ್ಮನ್ನು ಆಯ್ಕೆ ಮಾಡಿದ್ದಾರೆ. ಸರ್ಕಾರ ಆಡಳಿತ ವರ್ಗವನ್ನು ಆಯ್ಕೆ ಮಾಡಿದೆ. ಜನಪರ, ಸಮಾಜಮುಖಿ ಧೋರಣೆ ಇದ್ದಾಗ ಮಾತ್ರ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯ ಮತ್ತು ಸಂವಿಧಾನದ ಆಶಯಗಳನ್ನು ಈಡೇರಿಸಲು ಸಾಧ್ಯವಾಗುತ್ತದೆ ಎಂದರು. ಸಂವಿಧಾನ ಅರಿತು ಅದರಂತೆ ನಡೆಯಬೇಕಿದೆ. ಈ ದಿಕ್ಕಿನಲ್ಲಿ ಪ್ರಯತ್ನ ಮಾಡೋಣ.

ಜನರ ನಿರೀಕ್ಷೆ ಹುಸಿಯಾಗದ ರೀತಿ ಕೆಲಸ ಮಾಡೋಣ. 2024ನೇ ವರ್ಷಕ್ಕೆ ನಾವೆಲ್ಲರೂ ಕಾಲಿಡುತ್ತಿದ್ದು, ಈ ವರ್ಷ ರಾಜ್ಯಕ್ಕೆ ಆಶಾದಾಯಕವಾಗಿದೆ ಎಂದು ಸಿಎಂ ಹೇಳಿದರು.

ರಾಮಜನ್ಮಭೂಮಿ ಹೋರಾಟದ ಕೇಸ್‌ಗೆ ಮರುಜೀವ: 31 ವರ್ಷದ ಬಳಿಕ ಹುಬ್ಬಳ್ಳಿ ಆರೋಪಿ ಬಂಧನ

ಹುಬ್ಬಳ್ಳಿ, ಜ.1– ರಾಜ್ಯದಲ್ಲಿ ಬರೋಬ್ಬರಿ 31 ವರ್ಷಗಳ ಬಳಿಕ ರಾಮಜನ್ಮಭೂಮಿ ಹೋರಾಟದ ಪ್ರಕರಣಕ್ಕೆ ಮರುಜೀವ ಸಿಕ್ಕಿರುವುದು ನಾನಾ ರೀತಿಯ ಚರ್ಚೆಗೆ ಆಸ್ಪದವಾಗಿದೆ.

ಅಯೋಧ್ಯೆ ಕರಸೇವೆಗೂ ಮುನ್ನ 1992ರ ಡಿಸೆಂಬರ್ 5ರಂದು ಹುಬ್ಬಳ್ಳಿ ನಗರದಲ್ಲಿ ಗಲಭೆ ಸಂಭವಿಸಿತ್ತು. ಒಂದು ಮಳಿಗೆಗೆ ಬೆಂಕಿ ಹಚ್ಚಿದ್ದ ಆರೋಪ ಸಂಬಂಧ 9 ಜನರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಇದೀಗ ಈ ಪ್ರಕರಣಕ್ಕೆ ಹುಬ್ಬಳ್ಳಿಯ ಶಹರ ಠಾಣೆ ಪೊಲೀಸರು ಮರುಜೀವ ನೀಡಿದ್ದಾರೆ. ಘಟನೆ ನಡೆದ 31 ವರ್ಷಗಳ ಬಳಿಕ, 52 ವರ್ಷದ ಆರೋಪಿ ಶ್ರೀಕಾಂತ್ ಪೂಜಾರಿಯನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತ ಶ್ರೀಕಾಂತ್ ಪೂಜಾರಿಯನ್ನು ಕಳೆದ ಶುಕ್ರವಾರವೇ ಕೋರ್ಟ್ ಮುಂದೆ ಹಾಜರುಪಡಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ಅಲ್ಲದೇ, ಪ್ರಕರಣದ ಉಳಿದ ಆರೋಪಿಗಳ ಪತ್ತೆಗೂ ಬಲೆ ಬೀಸಿದ್ದಾರೆ. ಗಲಭೆ ನಡೆದಾಗ ಈ ಆರೋಪಿಗಳೆಲ್ಲಾ 30 ವಯಸ್ಸಿನ ಆಸುಪಾಸಿನವರಾಗಿದ್ದರು. ಇದೀಗ ಇವರಿಗೆಲ್ಲಾ 65–70 ವರ್ಷ ವಯಸ್ಸಾಗಿದೆ ಆರೋಪಿಗಳ ಪೈಕಿ ಮೂವರು ಮೃತಪಟ್ಟಿದ್ದಾರೆ. ದಿಢೀರ್ ಎಂದು 31 ವರ್ಷದ ಹಿಂದಿನ ಕೇಸ್‌ಗೆ ಮರುಜೀವ ನೀಡಿದ ಬಗ್ಗೆ ಸಾಕಷ್ಟು ಆಕ್ರೋಶ ವ್ಯಕ್ತವಾಗ್ತಿದೆ. ಇದು ರಾಜಕೀಯ ಪ್ರೇರಿತ ಎಂದು ಕಾಂಗ್ರೆಸ್ ವಿರುದ್ಧ ಆರೋಪಿ ರಾಜು ಧರ್ಮಸಾ ಆಕ್ರೋಶ ಹೊರಹಾಕಿದ್ದಾರೆ.



ಕರ್ನಾಟಕ ಸೇನಾ ಪಡೆಯ 2024ನೇ ನೂತನ ವರ್ಷದ ದಿನದರ್ಶಿಕೆಯನ್ನು ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಆವರಣದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಬಿಡುಗಡೆ ಮಾಡಿದರು. ಈ ವೇಳೆ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್, ಯೋಗಾನರಸಿಂಹಸ್ವಾಮಿ ದೇವಸ್ಥಾನ ವ್ಯವಸ್ಥಾಪಕ ಶ್ರೀನಿವಾಸ್, ರಾಜ್ಯ ಒಕ್ಕಲಿಗರ ಸಂಘದ ಕಾಮಗಾರಿ ಅಧ್ಯಕ್ಷ ಸಿ ಜಿ ಗಂಗಾಧರ್, ಮೈಸೂರು–ಚಾ.ನಗರ ಸಹಕಾರಿ ಬ್ಯಾಂಕ್ ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡ, ಸುಯೋಗ ಆಸ್ಪತ್ರೆ ಸಂಸ್ಥಾಪಕ ಡಾ. ಎಸ್.ಪಿ.ಯೋಗಣ್ಣ, ಡಾ. ರಘುರಾಂ ಕೆ. ವಾಜಪೇಯಿ, ಎಂ.ಎನ್.ದೊರೆಸ್ವಾಮಿ, ಲಕ್ಷ್ಮೀ ನಾರಾಯಣ ಶೆಣೈ, ಸುರೇಶ್ ಗೋಲ್ಡ್, ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಡಾ. ಶಾಂತರಾಜೇ ಅರಸ್, ಜಯಣ್ಣ, ಪ್ರಭುಶಂಕರ್, ಕೃಷ್ಣಯ್ಯ, ವಿಜಯೇಂದ್ರ, ಲಕ್ಷ್ಮೀ, ನೇಹಾ, ಭಾಗ್ಯಮ್ಮ, ಶಿವಲಿಂಗಯ್ಯ, ಪ್ರಭಾಕರ, ರವಿ ಒಲಂಪಿಯಾ, ದಿನೇಶ್, ಆನಂದ್ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಕೊರೊನಾದಿಂದ ಒಬ್ಬರು ಸಾವು, 296 ಮಂದಿಗೆ ಪಾಸಿಟಿವ್

ಬೆಂಗಳೂರು, ಜ.1– ರಾಜ್ಯದಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಸೋಮವಾರ ಕೊರೊನಾದಿಂದ ಒಬ್ಬರು ಮೃತಪಟ್ಟಿದ್ದಾರೆ ಮತ್ತು 296 ಮಂದಿಗೆ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಒಂದು ಸಾವಿರದ ಗಡಿ ದಾಟಿದೆ.

ಕಳೆದ 24 ಗಂಟೆಗಳಲ್ಲಿ 296 ಹೊಸ ಕೋವಿಡ್–19 ಪಾಸಿಟಿವ್ ಪ್ರಕರಣಗಳು ವರದಿಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 1,245ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ. ಪಾಸಿಟಿವ್ ಪ್ರಮಾಣ ಶೇ. 5.89 ರಷ್ಟು ಇದೆ. ಬೆಂಗಳೂರಿನಲ್ಲಿ 131 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಇಂದು ಕೋವಿಡ್‌ನಿಂದ ಚೇತರಿಸಿಕೊಂಡು 50 ಮಂದಿ ಡಿಸ್ಚಾರ್ಜ್ ಆಗಿದ್ದು, ಸೋಂಕಿತರಲ್ಲಿ 1,179 ಮಂದಿ ಮನೆ ಆರೈಕೆಗೆ ಒಳಗಾದರೆ, 66 ಮಂದಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಮಲಬಾರ್ ಗೋಲ್ಡ್, ಡೈಮಂಡ್ಸ್‌ನಿಂದ 'ಡೈಮಂಡ್ ಶೋ'

ಮೈಸೂರು, ಜ.1–ವಿಶ್ವದ ಅತಿದೊಡ್ಡ ಆಭರಣ ವ್ಯಾಪಾರಿಗಳಲ್ಲಿ ಒಂದಾದ ಮಲಬಾರ್ ಗೋಲ್ಡ್ & ಡೈಮಂಡ್ಸ್, ಮೈಸೂರು ಶೋರೂಮ್‌ನಲ್ಲಿ ಡೈಮಂಡ್ ಶೋ ಜ.7ರವರೆಗೆ ಆಯೋಜಿಸಲಾಗಿದೆ.

ಇದರ ಜೊತೆಗೆ, ಉತ್ಸವವು ಆಭರಣ ಪ್ರಿಯರ ವಿಕಸನಗೊಂಡ ಅಭಿರುಚಿಗೆ ಅನುಗುಣವಾಗಿ ಆಧುನಿಕ, ಸೊಗಸಾದ, ಸಾಂಪ್ರದಾಯಿಕ ಮತ್ತು ಸಮಕಾಲೀನ ವಿನ್ಯಾಸಕ ಆಭರಣಗಳ ದೊಡ್ಡ ಸಂಗ್ರಹವನ್ನು ಅನಾವರಣಗೊಳಿಸಿದೆ.

ಮೈನ್ ಡೈಮಂಡ್, ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಅಡಿಯಲ್ಲಿ ಪ್ರದರ್ಶಿಸಲಾದ ಚಿನ್ನ, ಬಿಳಿ ಚಿನ್ನ ಮತ್ತು ಪ್ಲಾಟಿನಂನಲ್ಲಿ ರಚಿಸಲಾದ ವ್ಯಾಪಕ ಶ್ರೇಣಿಯ ಆಭರಣಗಳೊಂದಿಗೆ ಗ್ರಾಹಕರನ್ನು ಆಕರ್ಷಿಸುವುದರ ಜೊತೆಗೆ ಈ ಹಬ್ಬದ ಅವಧಿಯಲ್ಲಿ ವಜ್ರದ ಮೌಲ್ಯದ ಮೇಲೆ 25%ವರೆಗೆ ರಿಯಾಯಿತಿಯನ್ನು ನೀಡುತ್ತಿದೆ. ಡೈಮಂಡ್ ಶೋನಲ್ಲಿ ಗ್ರಾಹಕರಿಗೆ ವಜ್ರದ ಆಭರಣಗಳನ್ನು ಅತ್ಯಂತ ಕೈಗೆಟುಕುವ ಬೆಲೆಯಲ್ಲಿ ಖರೀದಿಸುವ ಅಪರೂಪದ ಅವಕಾಶವಿದೆ. ಗುಣಮಟ್ಟದ ಆಭರಣಗಳ ಅತ್ಯುನ್ನತ ಮಟ್ಟಗಳು ಮತ್ತು ಅಂತಾರಾಷ್ಟ್ರೀಯ ಗುಣಮಟ್ಟವನ್ನು ನೀಡಲು, ಮೈನ್ ವಜ್ರದ ಆಭರಣಗಳು 28–ಪಾಯಿಂಟ್ ಕಟ್ಟುನಿಟ್ಟಾದ ಆಂತರಿಕ ಗುಣಮಟ್ಟದ ಪರಿಶೀಲನೆಯ ಮೂಲಕ ಹಾದುಹೋಗುತ್ತವೆ. ಅಲ್ಲದೆ ಈ ವಜ್ರಗಳು ಅಂತರಾಷ್ಟ್ರೀಯ ಲ್ಯಾಬ್‌ಗಳಾದ GIA ಮತ್ತು IGIನಿಂದ ಪ್ರಮಾಣೀಕರಿಸಲ್ಪಟ್ಟಿವೆ. ಮಲಬಾರ್ ಗೋಲ್ಡ್ & ಡೈಮಂಡ್ಸ್ ತನ್ನ ಗ್ರಾಹಕರಿಗೆ ನ್ಯಾಯ ಬೆಲೆ ಭರವಸೆ, ನಿಖರವಾದ ಉತ್ಪಾದನಾ ವೆಚ್ಚವನ್ನು ಸೂಚಿಸುವ ಪಾರದರ್ಶಕ ಬೆಲೆ ಟ್ಯಾಗ್, ಕಲ್ಲಿನ ತೂಕ, ನಿವ್ವಳ ತೂಕ ಮತ್ತು ಆಭರಣದ ಕಲ್ಲಿನ ಶುಲ್ಕ, ಆಭರಣಗಳಿಗೆ ಜೀವಮಾನದ ಉಚಿತ ನಿರ್ವಹಣೆ, ಹಳೆಯ ಚಿನ್ನದ ಆಭರಣಗಳನ್ನು ಮರುಮಾರಾಟ ಮಾಡುವಾಗ ಚಿನ್ನಕ್ಕೆ 100 ಪ್ರತಿಶತ ಮೌಲ್ಯ ಮತ್ತು ಶೂನ್ಯ ಕಡಿತವನ್ನು ಒಳಗೊಂಡಿರುತ್ತದೆ. ವಿನಿಮಯ, 100 ಪ್ರತಿಶತ ಬಿಐಎಸ್ ಹಾಲ್‌ಮಾರ್ಕಿಂಗ್ ಚಿನ್ನದ ಶುದ್ಧತೆಯನ್ನು ಪ್ರಮಾಣೀಕರಿಸುತ್ತದೆ, ಐಜಿಐ ಮತ್ತು ಜಿಐಎ ಪ್ರಮಾಣೀಕೃತ ವಜ್ರಗಳು ಜಾಗತಿಕ ಮಾನದಂಡಗಳ 28–ಪಾಯಿಂಟ್ ಗುಣಮಟ್ಟದ ಪರಿಶೀಲನೆ, ಬೈಬ್ಯಾಕ್ ಗ್ಯಾರಂಟಿ, ಗುಣಮಟ್ಟ ಮತ್ತು ಜವಾಬ್ದಾರಿಯುತ ಸೋರ್ಸಿಂಗ್ ಅನ್ನು ಪರಿಶೀಲಿಸಲು ಕ್ಯಾರೆಟ್ ವಿಶ್ಲೇಷಕವನ್ನು ಖಚಿತಪಡಿಸುತ್ತದೆ.



ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ತನ್ನ ಗ್ರಾಹಕರಿಗೆ ಮುಂಗಡವಾಗಿ 10% ಮೌಲ್ಯವನ್ನು ಪಾವತಿಸುವ ಮೂಲಕ ಮದುವೆಯ ಖರೀದಿಗಳಿಗೆ ಮುಂಗಡ ಬುಕಿಂಗ್ ಸೌಲಭ್ಯವನ್ನು ನೀಡುತ್ತದೆ.

ಮಾನಸ ಗಂಗೋತ್ರಿ ಶಿಕ್ಷಣ ಸಂಸ್ಥೆಯಲ್ಲಿ ಕುವೆಂಪು ಜನ್ಮ ದಿನಾಚರಣೆ

ಮೈಸೂರು, ಜ.1–ಮೈಸೂರಿನ ಮಾನಸ ಗಂಗೋತ್ರಿ ಶಿಕ್ಷಣ ಸಂಸ್ಥೆಯ ವತಿಯಿಂದ ರಾಷ್ಟ್ರಕವಿ ಕುವೆಂಪು ಅವರ 119ನೇ ಜನ್ಮ ದಿನ ಆಚರಿಸಲಾಯಿತು.

ಈ ವೇಳೆ ಎಸ್‌ಡಿಎಂ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ಬಿ.ಎನ್. ಮಾರುತಿ ಪ್ರಸನ್ನ ಮಾತನಾಡಿ, ಕುವೆಂಪು ಅವರ ಸಾಹಿತ್ಯವು ಸಾರ್ವಕಾಲಿಕ ಮೌಲ್ಯಗಳನ್ನು ಸಮಾಜಕ್ಕೆ ನೀಡುತ್ತದೆ.

ಯುಗದ ಕವಿಯಾಗಿ ಜಗದ ನಮಸ್ಕಾರಗಳಿಗೆ ಅನು ದಿನವೂ ಒಳಗಾಗುವ ಕವಿ ಸಾಹಿತ್ಯದ ಮೂಲಕ ಸಮಾಜದ ಮೌಢ್ಯ ಕಂದಾಚಾರಗಳನ್ನು ವಿರೋಧಿಸಿದ ವರು. ವಿಶ್ವಮಾನವ ಪ್ರಜ್ಞೆ ಪಂಚ ಮಂತ್ರಗಳ ಮೂಲಕ ಪ್ರತಿಪಾದಿಸಿ, ವೈಚಾರಿಕ ಮತ್ತು ಜ್ಯಾತ್ಯಾತೀತ ಮನೋ ಭಾವನೆ ಗಳನ್ನು ಅನುಸರಿಸುವ ಅಗತ್ಯವನ್ನು ಅಭಿವ್ಯಕ್ತಿಸಿದ್ದಾರೆ.

ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೃತಿ ರಚಿಸಿ ಹೊಸಗನ್ನಡ ಸಾಹಿತ್ಯದಲ್ಲಿ ಮಹಾಕಾವ್ಯವನ್ನು, ಬೃಹತ್ ಕಾದಂಬರಿಗಳನ್ನು ರಚಿಸಿದ್ದರಲ್ಲದೆ ತಮ್ಮ ಕಾವ್ಯದಲ್ಲಿ ಪ್ರಕೃತಿ ವರ್ಣನೆ, ಆಧ್ಯಾತ್ಮಿಕತೆ, ದಾಂಪತ್ಯದ ಮಹೋನ್ನತೆಯ ಗುಣಗಳನ್ನು ವಿಶ್ವ ಪ್ರಜ್ಞೆಯನ್ನಾಗಿಸಿದರು. ರೈತನಿಗೆ ನೇಗಿಲಯೋಗಿ ಎಂದೂ, ರಾಮಾಯಣ ದರ್ಶನ ಮಹಾಕಾವ್ಯದ ಮೂಲಕ ರಾಮನ ಔನ್ನತ್ಯವನ್ನು ಉನ್ನತೀಕರಿಸಿ ಸೀತೆ ಅಹಲ್ಯೆ ಊರ್ಮಿಳಾ ಮಂಥರೆ ಮೊದಲಾದ ಕುವೆಂಪು ಅವರ ಬದುಕು ಕನ್ನಡ ಅಸ್ಮಿತೆಯ ಜೊತೆಗೆ ಮತ ಮೌಢ್ಯಗಳನ್ನು ಸಮಾಜದಿಂದ ದೂರವಾಗಿಸುವ ಕಾರ್ಯವನ್ನು ಸಾಧಿಸಿ ಜೀವಪರತೆಯನ್ನು ನೆಲೆಯಾಗಿಸಿ ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಬೇಕು ಕರೆ ನೀಡಿದವರು ಕುವೆಂಪು ಎಂದರು.



ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಪ್ರೊ.ಬಿ.ಕೆ.ಜಗದೀಶ್ ಮಾತನಾಡಿ, ಮಲೆನಾಡಿನಲ್ಲಿ ಜನಿಸಿ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿ ಕರ್ಮಭೂಮಿಯಾಗಿಸಿಕೊಂಡ ಕುವೆಂಪು ಅವರ ಬದುಕು ಒಂದು ವ್ರತದಂತೆ ವಿಶ್ವವಿದ್ಯಾನಿಲಯವನ್ನು ವಿಶ್ವಮಟ್ಟಕ್ಕೆ ವಿಸ್ತರಿಸಿ ಕನ್ನಡ, ವಿಜ್ಞಾನ, ತತ್ವಶಾಸ್ತ್ರ ಮಾನವಿಕ ವಿಷಯಗಳನ್ನು ಜನಪ್ರಿಯ ನೆಲೆಯಾಗಿಸಿ ವಿಜ್ಞಾನದಿಂದ ವೈಚಾರಿಕತೆ ಬೆಳೆದು ವೈಚಾರಿಕತೆಯಿಂದ ಸಮಾಜದ ಬದಲಾವಣೆ ಸಾಧ್ಯವೆಂದು ಕುವೆಂಪು ನಂಬಿದ್ದರು. ಮಾನಸ ಗಂಗೋತ್ರಿಯ ನಿವರ್ತೃಗಳಾಗಿ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದವರು ಅವರ ದರ್ಶನವೇ ತಪಸ್ವಿಯ ದರ್ಶನದಂತೆ ಭಾಸವಾಗುತ್ತಿತ್ತು ಎಂದು ತಿಳಿಸಿದರು.

ಪ್ರೌಢಶಾಲೆಯ ಮುಖ್ಯ ಶಿಕ್ಷಕ ಚಂದ್ರೇಗೌಡ, ಕಾರ್ಯದರ್ಶಿ ಪ್ರೊ.ರಂಗರಾಜನ್, ಮಾಧ್ಯಮಿಕ ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಪದ್ಮ, ಶಾಲೆಯ ಎಲ್ಲಾ ಅಧ್ಯಾಪಕ ವೃಂದದವರು ಉಪಸ್ಥಿತರಿದ್ದರು.

ನಾಳೆಯಿಂದ ಸಿಲ್ಕ್ ಇಂಡಿಯಾ–2024 ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ, ಮಾರಾಟ



ಮೈಸೂರು, ಜ. 1– ಮೈಸೂರಿನಲ್ಲಿ ಸಂಕ್ರಾಂತಿ ಹಬ್ಬವನ್ನು ಗಮನದಲ್ಲಿಟ್ಟುಕೊಂಡು "ಸಿಲ್ಕ್ ಇಂಡಿಯಾ –2024 ಮೇಳವನ್ನು ಜ. 3ರಿಂದ 8ವರೆಗೆ 6 ದಿನಗಳ ಕಾಲ ಮೈಸೂರಿನ ಹೋಟೆಲ್ ಸದರನ್ ಸ್ಟಾರ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಮೇಳದಲ್ಲಿ ಕಾಶ್ಮೀರದಿಂದ ಕಾಂಚಿಪುರಂವರೆಗಿನ ರೇಷ್ಮೆ ಸೀರೆ ಉತ್ಪಾದಕರು, ರೇಷ್ಮೆ ಸೀರೆ ವಿನ್ಯಾಸಗಾರರು ಮತ್ತು ರೇಷ್ಮೆ ಸಹಕಾರ ಸಂಘಗಳು 45ಕ್ಕೂ ಹೆಚ್ಚಿನ ಮಳಿಗೆಗಳಲ್ಲಿ ನಮ್ಮ ರಾಜ್ಯದ ಸಾಂಪ್ರದಾಯಿಕ ರೇಷ್ಮೆ ಸೀರೆ ಮತ್ತು ಉತ್ಪನ್ನಗಳನ್ನು ಪ್ರತಿದಿನ ಬೆಳಿಗ್ಗೆ 10.30 ರಿಂದ ರಾತ್ರಿ 8.30 ರವರೆಗೆ ಪ್ರದರ್ಶಿಸಿ ಮಾರಾಟ ಮಾಡುವರು.

ಮೇಳದಲ್ಲಿ ತಸ್ಸರ್ ರೇಷ್ಮೆ ಸೀರೆಗಳು, ಕ್ರೇಪ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಆರ್ನಿ ರೇಷ್ಮೆ ಸೀರೆಗಳು, ಧರ್ಮಾವರಂ ಸೀರೆಗಳು, ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಕಲ್ಕೊತ್ತಾ ಗಣಪತಿ ಸೀರೆಗಳು, ಢಾಕ ಸೀರೆಗಳು, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಬಲ್ಲೂರಿ ರೇಷ್ಮೆ, ಮಟ್ಕಾ ಸೀರೆಗಳು, ಪ್ರಿಂಟೆಡ್ ಸೀರೆಗಳು, ಪಶ್ಮೀನಾ ಸೀರೆಗಳು, ಡಿಸೈನರ್ ಡ್ರೆಸ್ ಮೇಟಿರಿಯಲ್ಸ್‌ಗಳು ಮತ್ತು ಸೀರೆಗಳು, ಬಾಗಲ್ಪುರ್ ರೇಷ್ಮೆ ಸೀರೆ ಮತ್ತು ಡ್ರೆಸ್, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಹೇಶ್ವರಿ ಮತ್ತು ಕೋಟಾ ಸಿಲ್ಕ್, ಟೆಂಪಲ್ ಬಾರ್ಡರ್‌ಉಳ್ಳ ಮುಲ್ಬಾರಿ ಸಿಲ್ಕ್, ಕಲ್ಕೊತ್ತಾ ರೇಷ್ಮೆ ಸೀರೆಗಳು, ಬನಾರಸ್ ಮತ್ತು ಜಮ್ದಾನಿ ರೇಷ್ಮೆ, ಶಿಫಾನ್ ಸೀರೆಗಳು, ಬುಟ್ಟಿ ಸೀರೆಗಳು, ಚಂದೇರಿ ಸಿಲ್ಕ್ ಮತ್ತು ಕೈ ಅಚ್ಚಿನ ಸೀರೆಗಳು ಪ್ರದರ್ಶನಗೊಳ್ಳಲಿದೆ. ಇದಲ್ಲದೆ ಕುರ್ತಾ, ಸ್ಟೋಲ್ಸ್, ಶಾಲುಗಳು, ಸಲ್ವಾರ್ ಕಮೀಜ್ ಮತ್ತು ಉಡುಪಿನ ಬಟ್ಟೆಗಳು, ಕುಶನ್ ಕವರ್‌ಗಳು ಮತ್ತು ಬೆಡ್ ಶೀಟ್‌ಗಳನ್ನು ಈ ವಸ್ತುಪ್ರದರ್ಶನದಲ್ಲಿ ಪ್ರದರ್ಶಿಸಿ, ಮಾರಾಟ ಮಾಡಲಾಗುತ್ತಿದೆ. ಉತ್ಪಾದಕರೆ ನೇರವಾಗಿ ಗ್ರಾಹಕರಿಗೆ ತಲುಪಿಸುತ್ತಿರುವುದರಿಂದ ವಸ್ತುಗಳು ನ್ಯಾಯಯುತ ಬೆಲೆಯಲ್ಲಿ ದೊರಕುತ್ತವೆ.

ಬನ್ನೂರು ಹಾಲಿನ ಡೇರಿ ಜೆಡಿಎಸ್ ತೆಕ್ಕೆಗೆ

● 13 ಸ್ಥಾನಗಳಲ್ಲೂ ಜೆಡಿಎಸ್ ಬೆಂಬಲಿತರ ಭರ್ಜರಿ ಗೆಲುವು ● ಕಾಂಗ್ರೆಸ್‌ಗೆ ತೀವ್ರ ಮುಖಭಂಗ

ತಿ.ನರಸೀಪುರ, ಜ.1– ತೀವ್ರ ಜಿದ್ದಾಜಿದ್ದಿಯಿಂದ ಕೂಡಿದ್ದ ತಾಲೂಕಿನ ಬನ್ನೂರು ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಭರ್ಜರಿ ಜಯ ಸಾಧಿಸಿದ್ದು, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಒಂದೇ ಒಂದು ಸ್ಥಾನ ಗೆಲ್ಲಲು ಸಾಧ್ಯವಾಗದೇ ಸೋಲು ಅನುಭವಿಸಿದ್ದಾರೆ.

ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಕೃಷ್ಣೇಗೌಡರ ಬಣದ ಎಲ್ಲಾ 13 ಮಂದಿ ಜಯ ಗಳಿಸಿದ್ದು, ಪ್ರತಿಸ್ಪರ್ಧಿ ಕಾಂಗ್ರೆಸ್ ಬೆಂಬಲಿತ ರಾಮಲಿಂಗೇಗೌಡರ ಬಣದ ಅಭ್ಯರ್ಥಿಗಳೆಲ್ಲಾ ಸೋಲು ಅನುಭವಿಸಿದ್ದಾರೆ.

ಬನ್ನೂರಿನ ಎನ್‌ಆರ್ ಕಲ್ಯಾಣ ಮಂಟಪದಲ್ಲಿ ನಡೆದ ನಿರ್ದೇಶಕರ ಚುನಾವಣೆಯಲ್ಲಿ 1104 ಮತಗಳ ಪೈಕಿ 1072 ಮತಗಳು ಚಲಾವಣೆಗೊಂಡವು. ಅದರಲ್ಲಿ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಿದ್ದ ಕೃಷ್ಣೇಗೌಡ ಬಣದ ಬಿ.ಉಮೇಶ್(644), ಬಿ.ಸಿ.ಉಮೇಶ್ ಕುಮಾರ್(713), ಬಿ.ಎನ್.ಕೃಷ್ಣೇಗೌಡ(754), ಎಂ.ಚಂದ್ರು(673), ನಿಂಗಪ್ಪ (689), ಮಹೇಶ್ (733), ಬಿ.ಎಸ್.ರಾಜೀವ(667), ರುದ್ರ(563), ವೆಂಕಟೇಶ(711), ವೆಂಕಟೇಶ(711), ಬಿ.ಕೆ.ಶೋಭಾ(627), ಶ್ರೀಧರ(706) ಹಾಗೂ ಸುಶೀಲಾ (624) ಮತಗಳನ್ನು ಪಡೆದು ಗೆಲುವಿನ ನಗೆ ಬೀರಿದರು. ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಡೇರಿ ಎದುರು ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ರಾಜಣ್ಣ ಕರ್ತವ್ಯ ನಿರ್ವಹಿಸಿದರು.



ಸೋಲಿನ ಭೀತಿಯಿಂದ ಚುನಾವಣೆ ಮುಂದೂಡಲು ಹುನ್ನಾರ!: ಡೇರಿ ಚುನಾವಣೆ ಡಿ.24ಕ್ಕೆ ನಿಗದಿಯಾಗಿತ್ತಾದರೂ, ಬಿಗಿ ಬಂದೋಬಸ್ತ್ ನೆಪವೊಡ್ಡಿ ಹಾಗೂ ಜೆಡಿಎಸ್ ಅಭ್ಯರ್ಥಿಗಳ ಗೆಲುವಿನ ಮುನ್ಸೂಚನೆ ಇದ್ದ ಕಾಂಗ್ರೆಸ್ ಮುಖಂಡರು ಸಚಿವರ ಮೂಲಕ ಚುನಾವಣೆ ಮುಂದೂಡಲು ಪ್ರಯತ್ನಿಸಿದ್ದರು. ಚುನಾವಣೆಗೆ ಬಂದೋಬಸ್ತ್ ನೀಡುವಂತೆ ಡೈರಿ ಕಾರ್ಯದರ್ಶಿ ಬನ್ನೂರು ಠಾಣೆಗೆ ಪತ್ರ ಬರೆದಿದ್ದರಾದರೂ, ಪತ್ರಕ್ಕೆ ಪ್ರತಿಕ್ರಿಯೆ ನೀಡಿದ್ದ ಆರಕ್ಷಕ ನಿರೀಕ್ಷಕ ಮನೋಜ್‌ಕುಮಾರ್ ಹುಣಸೂರು, ಶ್ರೀರಂಗಪಟ್ಟಣ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಹನುಮ ಜಯಂತಿ ಕಾರ್ಯಕ್ರಮ ಇರುವ ಕಾರಣ ಬಂದೋಬಸ್ತ್ ನೀಡಲು ಸಾಧ್ಯವಿಲ್ಲ ಎಂದು ತಿಳಿಸಿದ್ದರು. ಇದಕ್ಕೆ ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಟೀಕೆ ವ್ಯಕ್ತಪಡಿಸಿದ್ದರು. ಆದರೆ ಚುನಾವಣೆಗೆ ಅನುಮತಿ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿತ್ತು. ಅರ್ಜಿ ಪರಿಶೀಲಿಸಿದ ನ್ಯಾಯಾಲಯ ಚುನಾವಣೆ ನಡೆಸುವಂತೆ ಆದೇಶ ನೀಡಿದ ಹಿನ್ನೆಲೆಯಲ್ಲಿ ಚುನಾವಣೆ ಮುಂದೂಡುವ ಪ್ರಯತ್ನದಲ್ಲಿದ್ದ ಕಾಂಗ್ರೆಸ್ ಮುಖಂಡರ ಆಸೆಗೆ ತಣ್ಣೀರೆರಚಿದಂತಾಯಿತು.

ಅಪ್ಪ ಮಕ್ಕಳು ತೊಂದರೆ ಕೊಟ್ರು...!: ಡೈರಿ ನೂತನ ನಿರ್ದೇಶಕ ಹಾಗೂ ಜೆಡಿಎಸ್ ಮುಖಂಡ ಬಿ.ಎನ್.ಕೃಷ್ಣೇಗೌಡ ಮಾತನಾಡಿ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಅವರ ಪುತ್ರ ಸುನೀಲ್ ಬೋಸ್ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಸಚಿವರು ಜವಾಬ್ದಾರಿಯುತ ಸ್ಥಾನದಲ್ಲಿದ್ದು ಚುನಾವಣೆ ಮುಂದೂಡಿ ತೊಂದರೆ ಕೊಡುವುದು ಸಮಂಜಸವೇ ಎಂದು ಪ್ರಶ್ನಿಸಿದ ಅವರು, ಚುನಾವಣೆಯಲ್ಲಿ ಸೋಲುತ್ತೇವೆ ಎಂಬ ಕಾರಣಕ್ಕೆ ತಂದೆ, ಮಕ್ಕಳಿಬ್ಬರೂ ಚುನಾವಣೆ ಮುಂದೂಡಿಸಲು ಪೊಲೀಸ್ ಇಲಾಖೆ ಮೂಲಕ ಹಿಂಬರಹ ಕೊಡಿಸುವುದು ಅವರಿಗೆ ಶೋಭೆ ತರುವುದಿಲ್ಲ. ಈಗಾಗಲೇ ಕ್ಷೇತ್ರದ ಜನತೆಗೆ ಅಪ್ಪ–ಮಕ್ಕಳ ಆಟ ಗೊತ್ತಾಗಿದೆ. ಸಣ್ಣಪುಟ್ಟ ಚುನಾವಣೆಗೆ ಅವರು ಮೂಗು ತೂರಿಸುವುದೇನಿದೆ. ಹಾಲು ಉತ್ಪಾದಕರ ಸಂಘ ರೈತಪರ ಸಂಸ್ಥೆ, ರೈತರಿಗೆ, ಅವರ ಪರ ಕೆಲಸ ಮಾಡುವ ಅಭ್ಯರ್ಥಿಗಳು ಬೇಕಾಗಿತ್ತು. ಅದಕ್ಕೆ ನಾವು ಅರ್ಹರಾಗಿದ್ದೆವು. ನಮ್ಮ ಆಯ್ಕೆ ಮಾಡಿದ್ದಾರೆ. ಆದರೆ ತಮ್ಮ ಅಭ್ಯರ್ಥಿಗಳು ಸೋಲುತ್ತಾರೆಂದು ಚುನಾವಣೆ ಮುಂದೂಡಿಸುತ್ತಾರೆಂದರೆ ವ್ಯವಸ್ಥೆ ಎಲ್ಲಿ ಹೋಗಿದೆ ಎಂದು ಬೇಸರಿಸಿದ ಕೃಷ್ಣೇಗೌಡ,ನ್ಯಾಯಾಲಯ ಇಲ್ಲದಿದ್ದರೆ ನಾವು ಏನು ಮಾಡಬೇಕಿತ್ತು? ನಮಗೆ ಶಕ್ತಿ ಇತ್ತು ನ್ಯಾಯಾಲಯಕ್ಕೆ ಹೋದೆವು, ಬೇರೆಯವರಾಗಿದ್ದರೆ ಏನು ಮಾಡಲಾಗುತ್ತಿತ್ತು. ಸಚಿವರು ಮತ್ತು ಅವರ ಪುತ್ರನಿಂದ ತೊಂದರೆಯಾಯಿತು. ಆದರೂ ಅದನ್ನೆಲ್ಲಾ ಸಹಿಸಿಕೊಂಡು ನಾವು ಗೆಲುವು ಸಾಧಿಸಿದ್ದೇವೆ ಎಂದು ತಿಳಿಸಿದರು.

45 ವರ್ಷಗಳ ನಂತರ ಚುನಾವಣೆ!

ಬನ್ನೂರು ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ 1977 ರಿಂದಲೂ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗುತ್ತಿತ್ತು. ಆದರೆ ಇದೇ ಮೊದಲ ಬಾರಿಗೆ 45 ವರ್ಷಗಳ ನಂತರ ಚುನಾವಣೆ ನಡೆದು ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸಿದ್ದಾರೆ. ಆ ಮೂಲಕ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ತವರು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ನೆಲ ಕಚ್ಚಿದ್ದು, ಚುನಾವಣೆ ನಡೆದು ವರ್ಷದೊಳಗೆ ಬನ್ನೂರಿನಲ್ಲಿ ಕಾಂಗ್ರೆಸ್ ವರ್ಚಸ್ಸು ಕುಂದುತ್ತಿದೆಯೇ ಎಂಬ ಅನುಮಾನ ಸಾರ್ವಜನಿಕರದ್ದಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಡೆವಿಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನಿಮಲ್ (ಹಿಂ)	2 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಟೇರ (ಕ)	4 ಪ್ರದರ್ಶನಗಳು
ಸಂಗಂ	
ಸಲಾರ್ (ಕ) 3 ಪ್ರದರ್ಶನಗಳು ಸಲಾರ್ (ಹಿಂ)	1 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಲಾರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಸಲಾರ್– 1 (ತೆ):** ಬೆ.9.15ಕ್ಕೆ, ಮ.3.50ಕ್ಕೆ, ರಾ.10.20ಕ್ಕೆ, **ಡಂಕಿ (ಹಿಂ):** ಮ.12.50ಕ್ಕೆ, ರಾ.7.14ಕ್ಕೆ.
ಸ್ಕ್ರೀನ್ 2	**ಸಲಾರ್–1 (ಕ):** ಬೆ.9ಕ್ಕೆ, ಸಂ.6.50ಕ್ಕೆ, **ಅನಿಮಲ್ (ಹಿಂ):** ಮ.12.20ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಸಂ.4.05ಕ್ಕೆ, **ನೆರು (ಮ):** ರಾ.10.15ಕ್ಕೆ.
ಸ್ಕ್ರೀನ್ 3	**ಸಲಾರ್–1 (ತೆ):** ಬೆ.7ಕ್ಕೆ, **ಡಂಕಿ (ಹಿಂ):** ಬೆ.10.30ಕ್ಕೆ, **ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ):** ಮ.1.45ಕ್ಕೆ, ಸಂ.4.50ಕ್ಕೆ, ರಾ.7.15ಕ್ಕೆ, **ಸಲಾರ್ (ಕ):** ರಾ.9.55ಕ್ಕೆ.
ಸ್ಕ್ರೀನ್ 4	**ಸಲಾರ್–1(ತೆ):** ಬೆ.7.15ಕ್ಕೆ, ಮ.12.30ಕ್ಕೆ, ರಾ.7ಕ್ಕೆ, **ಡಂಕಿ (ಹಿಂ):** ಮ.3.55ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಡಂಕಿ (ಹಿಂ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	**ಸಲಾರ್ –1 (ತೆ):** ಬೆ.8.10ಕ್ಕೆ, ಬೆ.11.45ಕ್ಕೆ, ಮ.3.20ಕ್ಕೆ, ಸಂ.6.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	**ಡಂಕಿ (ಹಿಂ):** ಬೆ.11.30ಕ್ಕೆ, ಸಂ.6.25ಕ್ಕೆ, **ಸಲಾರ್–1 (ಹಿಂ):** ಮ.2.50ಕ್ಕೆ, **ಸಲಾರ್ –1 (ಕ):** ರಾ.9.45ಕ್ಕೆ.
ಸ್ಕ್ರೀನ್ 4	**ಸಲಾರ್–1 (ತೆ):** ಬೆ.8.40ಕ್ಕೆ, **ಸಲಾರ್–1 (ಕ):** ಮ.12.15ಕ್ಕೆ, ಸಂ.6.35ಕ್ಕೆ, **ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ):** ಮ.3.50ಕ್ಕೆ, ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಪಾರ್ಕಿಂಗ್ (ಕ):** ಬೆ.10.35ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.1.10ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ಸಂ.4ಕ್ಕೆ, **ಅರ್ಧಂಬರ್ಧ ಪ್ರೇಮ ಕಥೆ (ಕ):** ಸಂ.6.35ಕ್ಕೆ, **ಅನ್ನಪೂರ್ಣಿ (ತ):** ರಾ.9.15ಕ್ಕೆ.
ಸ್ಕ್ರೀನ್ 2	**ಅನಿಮಲ್ (ಹಿಂ):** ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಮ.1.45ಕ್ಕೆ.
ಸ್ಕ್ರೀನ್ 3	**ಸ್ಯಾಮ್ ಬಹದ್ದೂರ್ (ಹಿಂ):** ಬೆ.10.10ಕ್ಕೆ, ಸಂ.4.50ಕ್ಕೆ, **ಅನಿಮಲ್ (ಹಿಂ):** ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.45ಕ್ಕೆ, **ಅನಿಮಲ್ (ಹಿಂ):** ಮ.2.40ಕ್ಕೆ, **ನೆಪೋಲಿಯನ್ (ಇಂ):** ಸಂ.6.25ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, **ಡಂಕಿ (ಹಿಂ):** ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, **ನೆರು (ಮ):** ರಾ.10.10ಕ್ಕೆ, **ಸಲಾರ್ –1 (ಮ):** ಸಂ.6.35ಕ್ಕೆ, **ಸಲಾರ್–1 (ಹಿಂ):** ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, **ಸಲಾರ್–1 (ಕ):** ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, **ಸಲಾರ್– 1(ತೆ):** ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹೊಸ ವರ್ಷ: ಸಾವಿರಾರು ಭಕ್ತರಿಂದ ವಿಶೇಷ ಪೂಜೆ



ಮೂಗೂರು: ಹೊಸ ವರ್ಷ ಹಿನ್ನೆಲೆಯಲ್ಲಿ ಗ್ರಾಮದ ಶ್ರೀತ್ರಿಪುರ ಸುಂದರಿ ಅಮ್ಮನವರ ದೇಗುಲಕ್ಕೆ ಸಾವಿರಾರು ಭಕ್ತರು ಆಗಮಿಸಿ ವಿಶೇಷ ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದರು.

ಧನುರ್ಮಾಸ ಹಾಗೂ ಹೊಸ ವರ್ಷದ ಅಂಗವಾಗಿ ಅಮ್ಮನವರಿಗೆ ಹೂವಿನ ಸೇರೆ ಅಲಂಕಾರ ಮಾಡಲಾಗಿತ್ತು. ಮುಂಜಾನೆಯಿಂದಲೇ ದೇವರಿಗೆ ಅಭಿಷೇಕ ಸೇರಿದಂತೆ ವಿಶೇಷ ಪೂಜೆಗಳು ನಡೆದವು. ರಾಜ್ಯದ ವಿವಿಧೆಡೆಗಳಿಂದ ಭಕ್ತರು ಆಗಮಿಸಿದ್ದರಿಂದ ದೇವರ ದರ್ಶನ ಪಡೆಯಲು ನೂಕು ನುಗ್ಗಲು ಉಂಟಾಗಿತ್ತು. ದೇವಾಲಯದ ಆವರಣದಲ್ಲಿ ಭಕ್ತರ ವಾಹನ ನಿಲುಗಡೆಗೆ ಸೂಕ್ತ ವ್ಯವಸ್ಥೆ ಮಾಡದ ಪರಿಣಾಮ ಭಕ್ತರು ಕಿರಿಕಿರಿ ಅನುಭವಿಸುವಂತಾಗಿತ್ತು. ಹೊಸ ವರ್ಷದ ಹಿನ್ನೆಲೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ದಂಪತಿ ಸಮೇತರಾಗಿ ದೇಗುಲಕ್ಕೆ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು.


ಬಾಲ್ ಬ್ಯಾಡ್ಮಿಂಟನ್: ರಾಷ್ಟ್ರಮಟ್ಟಕ್ಕೆ ಆಯ್ಕೆ



ಹೆಚ್.ಡಿ.ಕೋಟೆ: ವಿಜಯನಗರ ಜಿಲ್ಲೆ, ಹೊಸಪೇಟೆಯಲ್ಲಿ ನಡೆದ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ರಾಜ್ಯಮಟ್ಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ತಾಲೂಕಿನ ತುಂಬಸೋಗೆ ಗ್ರಾಮದ ಎಂಎಂಕೆ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಹೊಸಪೇಟೆಯಲ್ಲಿ ನಡೆದ ಪಂದ್ಯಾವಳಿಯಲ್ಲಿ ವಿದ್ಯಾರ್ಥಿಗಳಾದ ರಂಜಿತಾ, ದಿವ್ಯಶ್ರೀ ಜಯಗಳಿಸಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ತರಬೇತುದಾರರಾದ ಮಹದೇವ್, ಅನಿಲ್ ಕುಮಾರ್, ಪ್ರಸನ್ನಕುಮಾರ್ ಹಾಗೂ ವಿದ್ಯಾರ್ಥಿಗಳಾದ ರಂಜಿತಾ, ದಿವ್ಯಶ್ರೀ, ನಿಸರ್ಗ, ಸಿಂಚನ, ಮಾತಾಲಾಂಬಿಕೆ, ಐಶ್ವರ್ಯ, ಉಮಾ, ಭಾಗ್ಯಲಕ್ಷ್ಮಿ, ವೆರೋನಿಕಾ ಅವರನ್ನು ಕಾಲೇಜು ವತಿಯಿಂದ ಅಭಿನಂದಿಸಲಾಯಿತು.

ಈ ವೇಳೆ ತುಂಬಸೋಗೆ ಗ್ರಾಪಂ ಅಧ್ಯಕ್ಷೆ ಕುಮಾರಿ, ಕಾಲೇಜಿನ ಅಧ್ಯಕ್ಷ ಮೋಹನ್, ಕಾರ್ಯದರ್ಶಿ ಕೆ.ಎಸ್.ಅಶೋಕ್, ಪ್ರಾಂಶುಪಾಲ ಎಸ್.ಪಿ. ಪ್ರಕಾಶ್, ದೈಹಿಕ ಶಿಕ್ಷಣ ಶಿಕ್ಷಕ ಮಹದೇವ್, ಉಪನ್ಯಾಸಕರಾದ ಪ್ರಸನ್ನ ಕುಮಾರ್, ವಿಜಯಲಕ್ಷ್ಮಿ, ನಾಗೇಶ್, ಸುಷ್ಮಾ, ಸಿದ್ದಾರ್ಥ, ಸಿದ್ದರಾಜು, ಮಹದೇವಿ, ಮೋಹನ್, ತನುಜಾ, ಕನ್ಯಾಕುಮಾರಿ, ನೀಲಮಣಿ, ಮನೋಜ್, ಅರ್ಪಿತ, ರಂಜು ಇತರರಿದ್ದರು.



ಕಂಪಲಾಪುರ ಗ್ರಾಮದ ಹಾಲಿನ ಡೇರಿಯಲ್ಲಿ ಸೋಮವಾರ 2024ನೇ ಸಾಲಿನ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸಲಾಯಿತು. ಈ ವೇಳೆ ಅಧ್ಯಕ್ಷ ಸ್ವಾಮಿ, ಉಪಾಧ್ಯಕ್ಷ ಶಿವಣ್ಣ, ನಿರ್ದೇಶಕರಾದ ಕೃಷ್ಣೇಗೌಡ, ಸ್ವಾಮಿಗೌಡ, ಶಿವರಾಮೇಗೌಡ, ಸಾಕಮ್ಮ, ಜಯಮ್ಮ, ಸಿಇಓ ಕಿಶೋರ್, ಲೋಕೇಶ್, ಮಂಜು ಹಾಜರಿದ್ದರು.

ಭೀಮಾ ಕೋರೆಗಾಂವ್ ವಿಜಯೋತ್ಸವ

ಶೋಷಿತ ಸಮುದಾಯಗಳ ಸ್ವಾಭಿಮಾನದ ಸಂಕೇತ

ರಾಜನಹಳ್ಳಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ

ನಂಜನಗೂಡು, ಜ.1– ಭೀಮಾ ಕೋರೆಗಾಂವ್ ವಿಜಯೋತ್ಸವ ಶೋಷಿತ ಸಮುದಾಯಗಳ ಸ್ವಾಭಿಮಾನದ ಸಂಕೇತ ಎಂದು ರಾಜನಹಳ್ಳಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿ ದಲಿತ ಸಂಘರ್ಷ ಸಮಿತಿಯಿಂದ ಆಯೋಜಿಸಿರುವ ಭೀಮಾ ಕೋರೆಗಾಂವ್ ಸಮಾರಂಭದ ಪ್ರಚಾರ ಸ್ತಬ್ಧಚಿತ್ರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.



ಜಾತಿ ಕಾರಣಕ್ಕಾಗಿ ಇಂದಿಗೂ ಜಾತಿ, ಸಮುದಾಯಗಳನ್ನು ಅಗೌರದಿಂದ ಕಾಣುವ ಕೆಟ್ಟ ಪದ್ಧತಿ ದೇಶದಲ್ಲಿರುವುದು ವಿಪರ್ಯಾಸ. ಅಸ್ಪೃಶ್ಯತೆ ನೋವನ್ನು ಅನುಭವಿಸಿ ಸಂವಿಧಾನದ ಮೂಲಕ ಶೋಷಿತ ಸಮಾಜಗಳಿಗೆ ಸ್ವಾಭಿಮಾನದ ಬದುಕು ಕಟ್ಟಿಕೊಟ್ಟವರು ಡಾ.ಬಿ.ಆರ್.ಅಂಬೇಡ್ಕರ್. ಅಂತೆಯೇ ಭೀಮಾ ಕೋರೆಗಾಂವ್ ಯುದ್ಧದಲ್ಲಿ 500 ಮಹರ್ ಸೈನಿಕರು ಜಾತಿ ವ್ಯವಸ್ಥೆ, ರಾಜ್ಯಾಡಳಿತದಿಂದ ಬೆಂದು ಪೇಶ್ವೆಗಳ ವಿರುದ್ಧ ತಮ್ಮ ಪ್ರಾಣ ಪಣಕ್ಕಿಟ್ಟು ಹೋರಾಡಿದ್ದನ್ನು ಶೌರ್ಯ ಸ್ವಾಭಿಮಾನದ ವಿಜಯ ದಿನವನ್ನಾಗಿ ಆಚರಿಸಲಾಗುತ್ತಿದ್ದೇವೆ. ದಸಂಸ ಸಂಘಟನೆಗಳು ಈ ವಿಜಯ ದಿನದ ಮಹತ್ವವನ್ನು ಜನರಿಗೆ ತಿಳಿಸುವ ಸಲುವಾಗಿ ಭೀಮಾ ಕೊರೆಂಗಾವ್ ಸಮಾರಂಭ ಏರ್ಪಡಿಸಿರುವುದು ಸಂತಸ ತಂದಿದೆ ಎಂದರು.

ಕಾರ್ಯ ಬಸವಣ್ಣ ಮಾತನಾಡಿ, ದಲಿತ ಸಂಘಟನೆಗಳ ಒಕ್ಕೂಟದಿಂದ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜ.7ರಂದು ಭೀಮಾ ಕೋರೆಗಾಂವ್ ವಿಜಯೋತ್ಸವದ ಜನಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದ್ದು, ಈ ಸ್ತಬ್ಧಚಿತ್ರ ತಾಲೂಕಿನಾದ್ಯಂತ ಸಂಚರಿಸಿ ಜನ ಜಾಗೃತಿ ಮೂಡಿಸುವ ಜೊತೆಗೆ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುತ್ತದೆ ಎಂದರು.

ಈ ಸಂದರ್ಭ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ.ಬಸವರಾಜು, ಪ್ರಗತಿಪರ ಹೋರಾಟಗಾರ ಉಗ್ರನರಸಿಂಹೇಗೌಡ, ಸಾಮೂಹಿಕ ನಾಯತ್ವದ ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್, ರಘು, ಸತೀಶ್‌ರಾವ್, ನಂಜುಂಡಸ್ವಾಮಿ, ತ್ರಿನೇಶ್ ಸೋಮಶೇಖರ್, ಮಲ್ಲೇಶ್, ಸುರೇಶ್, ಅಭಿ ನಾಗಭೂಷಣ ಸೇರಿದಂತೆ ಹಲವರಿದ್ದರು.

ವಾಸ್ತುಶಿಲ್ಪಕ್ಕೆ ಅಮರಶಿಲ್ಪಿ ಜಕಣಾಚಾರಿ ಕೊಡುಗೆ ಅಪಾರ



ನಂಜನಗೂಡು, ಜ.1– ನಾಡಿನ ವಾಸ್ತುಶಿಲ್ಪ, ಪರಂಪರೆಗೆ ಅಮರಶಿಲ್ಪಿ ಜಕಣಾಚಾರಿ ಕೊಡುಗೆ ಅಪಾರ. ಅವರ ಕಲಾ ನೈಪುಣ್ಯತೆಗೆ ಬೇಲೂರು, ಹಳೇಬೀಡು ದೇವಾಲಯಗಳೇ ಸಾಕ್ಷಿ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ಅಮರಶಿಲ್ಪಿ ಜಕಣಾಚಾರಿ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ಶಿಲ್ಪಿ, ಕಲಾಕಾರ ತಾನು ನಿರ್ಮಿಸಿದ ಕಲಾಕೃತಿಯನ್ನು ತನ್ನದೆಂದು ಹೇಳಿಕೊಳ್ಳಲು ಸಂಕೋಚ ಪಡುತ್ತಾನೆ. ಆದರೆ ನಾವು ಅವರ ಕಲೆ ಗುರ್ತಿಸಿ ಗೌರವಿಸಬೇಕು. ಅಂತೆಯೇ ಜಕಣಾಚಾರಿ ಕೂಡ ಎಂದಿಗೂ ಬೇಲೂರಿನ ಚೆನ್ನಕೇಶವ ದೇವಾಲಯ, ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯವನ್ನು ತಾನು ನಿರ್ಮಿಸಿರುವುದೆಂದು ಎಲ್ಲಿಯೂ ಹೇಳಿಕೊಂಡಿಲ್ಲ. ಆದರೆ ಅವರು ನಾಡಿಗೆ ನೀಡಿದ ವಾಸ್ತುಶಿಲ್ಪ ಶ್ರೀಮಂತಿಕೆಗೆ 2 ದೇವಾಲಯಗಳು ಸಾಕ್ಷಿಯಾಗಿದೆ. ಅವುಗಳನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಲಾಗಿದೆ ಎಂದರು.

ಶ್ರಮಜೀವಿ ಕಾಯಕ ಸಮಾಜಗಳಲ್ಲಿ ವಿಶ್ವಕರ್ಮ ಸಮಾಜವೂ ಒಂದು. ಆ ಸಮಾಜಕ್ಕೆ ರಾಜಕೀಯ ಸ್ಥಾನಮಾನ ದೊರಕಿಸಲು ಕ್ರಮವಹಿಸುವ ಜೊತೆಗೆ ನಗರದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ನಿವೇಶನ ಮಂಜೂರು ಮಾಡಲು ಕ್ರಮವಹಿಸುತ್ತೇನೆ ಎಂದು ಭರವಸೆ ನೀಡಿದರು.

ವಿಶ್ವಕರ್ಮ ಸಮಾಜದ ತಾಲೂಕು ಅಧ್ಯಕ್ಷ ಚಂದ್ರು ಮಾತನಾಡಿ, ವಿಶ್ವಕರ್ಮ ಸಮಾಜ ಎಲ್ಲಾ ಸಮಾಜಗಳೊಡನೆ ಬೆರತು ಕೊಡುಗೆಗಳನ್ನು ನೀಡುತ್ತಿದೆ. ಆದರೆ ಎಲ್ಲಾ ರಾಜಕೀಯ ಪಕ್ಷಗಳೂ ಸಮಾಜವನ್ನು ವೋಟ್ ಬ್ಯಾಂಕ್ ಆಗಿ ಉಪಯೋಗಿಸಿಕೊಳ್ಳುತ್ತಿದೆ. ಆದ್ದರಿಂದ ಸಮಾಜಕ್ಕೆ ಯಾವುದೇ ಸ್ಥಾನಮಾನ ಸಿಕ್ಕಿಲ್ಲ. ಆದ್ದರಿಂದ ಸಮಾಜಕ್ಕೆ ರಾಜಕೀಯ ಸ್ಥಾನಮಾನ ದೊರಕಿಸಿಕೊಡಬೇಕೆಂದು ಮನವಿ ಮಾಡಿದರು. ಸಮಾರಂಭದಲ್ಲಿ ತಹಸೀಲ್ದಾರ್ ಶಿವಪ್ರಸಾದ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಮುಖಂಡರಾದ ಅಬ್ದುಲ್ ಖಾದರ್, ನಾಗರಾಜು, ನಗರಸಭಾ ಸದಸ್ಯೆ ಗಾಯತ್ರಿ, ರಾಜು, ವೀರಭದ್ರಾಚಾರಿ, ಶ್ರೀಕಂಠಾಚಾರಿ, ಗುರು, ಗಿರೀಶ್ ಪುಟ್ಟಣ್ಣ, ನಾಗರಾಜು, ಸಿದ್ದಪ್ಪಾಜಿ, ರಾಜಣ್ಣ, ರಾಜು ರಮೇಶ್, ಲಯನ್ಸ್ ಕ್ಲಬ್ ಅಧ್ಯಕ್ಷ ಗೋಪಾಲ್ ಕೃಷ್ಣ ಸೇರಿದಂತೆ ಇತರರಿದ್ದರು.

ಸಕಾಲಕ್ಕೆ ಸಾಲ ಮರು ಪಾವತಿಸಲು ಮನವಿ



ತಿ.ನರಸೀಪುರ, ಜ.1– ಸಹಕಾರ ಸಂಘಕ್ಕೆ ರೈತರೇ ಜೀವನಾಡಿ. ಸಂಘದಿಂದ ಪಡೆದ ಸಾಲವನ್ನು ಸದಸ್ಯರು ಸುಸ್ತಿದಾರರಾಗದೇ ಸಕಾಲಕ್ಕೆ ಪಾವತಿಸಿದಾಗ ಮಾತ್ರ ಸಹಕಾರ ಸಂಘದ ಬೆಳವಣಿಗೆ ಸಾಧ್ಯ. ಹೀಗಾಗಿ ರೈತರು ಪಡೆದ ಸಾಲವನ್ನು ಸಕಾಲಕ್ಕೆ ಮರು ಪಾವತಿಸಿ ಸಂಘವು ನೀಡುವ ಇತರೆ ಸವಲತ್ತುಗಳನ್ನು ಬಳಸಿಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದುವಂತೆ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ ಕರೆ ನೀಡಿದರು.

ಪಟ್ಟಣದ ಭಗವಾನ್ ವೃತ್ತದಲ್ಲಿರುವ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ 2024ನೇ ಸಾಲಿನ ದಿನದರ್ಶಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ನಮ್ಮ ಸಂಘದಲ್ಲಿ ಸಾಕಷ್ಟು ಸಾಲ ಸೌಲಭ್ಯ ನೀಡಿದ್ದು ರೈತರು ಹಾಗೂ ಮಹಿಳಾ ಸಂಘದ ಸದಸ್ಯರು ಕಾಲ ಕಾಲಕ್ಕೆ ಹಣವನ್ನ ಪಾವತಿಸುವ ಮೂಲಕ ಸಂಘಕ್ಕೆ ಕೈ ಜೋಡಿಸಿ ಎಂದರು.

ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಎನ್.ಎಂ.ರಮೇಶ್, ಪ್ರಭಾರ ಕಾರ್ಯ ನಿರ್ವಾಹಕ ಅಧಿಕಾರಿ ಡಿ.ಎಂ.ಶಿವಕುಮಾರ್, ಟಿಎಪಿಸಿಎಂಎಸ್ ಕಾರ್ಯದರ್ಶಿ ರಘುನಂದನ್, ಸಂಘದ ಉಪಾಧ್ಯಕ್ಷೆ ನಾಗಮ್ಮ, ನಿರ್ದೇಶಕರಾದ ನಾಗರತ್ನಮ್ಮ, ಚಂದ್ರಮ್ಮ, ಎನ್.ಶೇಖರ್, ಚೌಡೇಶ್ವರಿ ದೇವಸ್ಥಾನ ಅರ್ಚಕ ಪಣೇಶ್ ಕುಮಾರ್, ಪರಶಿವ, ದೊಡ್ಡ ಬಸವಯ್ಯ, ನಂಜುಂಡಸ್ವಾಮಿ, ಮಹಾಲಿಂಗಪ್ಪ, ಟಿ.ಎನ್.ಗುರುಪ್ರಸಾದ್, ಸಾವಿತ್ರಮ್ಮ, ನೌಕರರಾದ ದಿವ್ಯಶ್ರೀ, ಮಹದೇವ ಪ್ರಸಾದ್, ಫ್ರಾನ್ಸಿ ಮೋಹನ್, ಸ್ವಾಮಿ, ಶೇಖರಪ್ಪ, ಮಹದೇವಸ್ವಾಮಿ ಮತ್ತಿತರಿದ್ದರು.

ಕುವೆಂಪು ಅವರಿಂದ ಕನ್ನಡ ಸಾಹಿತ್ಯ ಶ್ರೀಮಂತ

ಹುಣಸೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಕೆ.ಮಹದೇವ್

ಹುಣಸೂರು, ಜ.1– ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕೀರ್ತಿ ಕುವೆಂಪು ಅವರಿಗೆ ಸಲ್ಲುತ್ತದೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಕೆ.ಮಹದೇವ್ ತಿಳಿಸಿದರು.

ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ತಾಲೂಕು ಕಸಾಪ ಹಾಗೂ ಮಹಿಳಾ ಕಾಲೇಜು ಸಹಯೋಗದಲ್ಲಿ ನಡೆದ ಕುವೆಂಪು ಜನ್ಮ ದಿನಾಚರಣೆ ಹಾಗೂ ಗೀತ ಗಾಯನ ಸಮಾರಂಭದಲ್ಲಿ ಮಾತನಾಡಿದ ಅವರು, ಕುವೆಂಪು ಅವರು ಕನ್ನಡ ಭಾಷೆಗೆ ತನ್ನದೇ ಆದ ಕೊಡುಗೆ ನೀಡಿದ್ದಾರೆ. ಕನ್ನಡ ಭಾಷೆಯನ್ನು ಉತ್ತುಂಗಕ್ಕೆ ಕೊಂಡೊಯ್ದವರಲ್ಲಿ ಕುವೆಂಪು ಒಬ್ಬರು. ಭಾಷೆಗೆ ತನ್ನದೇ ಆದ ಕೊಡುಗೆ ನೀಡಿ ವಿಶ್ವ ಮಾನವರಾಗಿ ಆದರ್ಶ ಪುರುಷರಾಗಿ ಸಾಹಿತ್ಯದ ಮೂಲಕ ಎಲ್ಲರ ಮನಸ್ಸನ್ನು ಗೆದ್ದರು ಎಂದರು.



ಮೈಸೂರು ಉಪ ನಿರ್ದೇಶಕರ ಕಚೇರಿ ಸಹಾಯಕ ಯೋಜನಾ ಸಮನ್ವಯಾಧಿಕಾರಿ ಜಿ.ವೆಂಕಟಾಚಲ ಮಾತನಾಡಿ, ಕುವೆಂಪು ಅವರು ಕನ್ನಡದ ಎಲ್ಲಾ ಪ್ರಕಾರದ ಸಾಹಿತ್ಯದಲ್ಲಿ ಕೃಷಿ ಮಾಡಿದ್ದಾರೆ. ಮನುಜಮತ ವಿಶ್ವಪಥ ಎಂದು ಸಾರಿ ಇಡೀ ವಿಶ್ವಕ್ಕೆ ಸಂದೇಶ ನೀಡಿದ್ದಾರೆ. ಕೇವಲ 30 ವರ್ಷಕ್ಕೆ ಇಡೀ ವಿಶ್ವವೇ ನೋಡುವಂತೆ ಮಾಡಿದ ಸ್ವಾಮಿ ವಿವೇಕಾನಂದರ ಬಗ್ಗೆ ಬರೆದು ವಿಶ್ವ ಮಾನವರಾದರು. ತಮ್ಮ ಸಾಹಿತ್ಯದ ಮೂಲಕ ರೈತ ಗೀತೆ ಬರೆದು ರೈತರ ಬಗ್ಗೆ ತಿಳಿಸಿದರು. ಕನ್ನಡ ಭಾಷೆಯಲ್ಲಿರುವಷ್ಟು ಕವಿಗಳು ದೇಶದ ಬೇರೆ ಯಾವುದೇ ಭಾಷೆಯಲ್ಲಿ ಇಲ್ಲ. 12 ಮಹಾನ್ ಕವಿಗಳನ್ನು ನಮ್ಮ ಕನ್ನಡ ಭಾಷೆ ಹೊಂದಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕಾಲೇಜಿನ ಸಿಡಿಸಿ ಉಪಾಧ್ಯಕ್ಷ ತಟ್ಟೆಕೆರೆ ಶ್ರೀನಿವಾಸ್, ಈ ಹಿಂದೆ ಸಾಹಿತಿಗಳಿಗೆ ಅಪಾರ ಗೌರವ ಇತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಸಾಹಿತಿಗಳಿಗೆ ಗೌರವ ಕಡಿಮೆಯಾಗುತ್ತಿದೆ. ಅಲ್ಲದೇ ಪುಸ್ತಕಗಳನ್ನು ಓದುವವರು ಕಡಿಮೆಯಾಗಿದ್ದಾರೆ. ವಿದ್ಯಾರ್ಥಿಗಳು ಸಾಹಿತಿಗಳ ಬರವಣಿಗೆಯ ಅರ್ಥವನ್ನು ಓದಿ ತಿಳಿದುಕೊಳ್ಳಬೇಕಿದೆ ಎಂದರು.

ಇದೇ ವೇಳೆ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಹೆಚ್.ಎಸ್.ಲೋಕೇಶ್, ಹಿರಿಯ ಕಲಾವಿದೆ ಕೃಷ್ಣಕುಮಾರಿ, ನಾಣ್ಯ, ನೋಟು ಸಂಗ್ರಹಕಾರ ಹಾಗೂ ಪ್ರದರ್ಶಕ ಪಿ.ಕೆ.ಕೇಶವಮೂರ್ತಿ ಅವರನ್ನು ಅಭಿನಂದಿಸಲಾಯಿತು.

ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಮಾತನಾಡಿದರು. ಅಧ್ಯಕ್ಷತೆಯನ್ನು ಪ್ರಾಂಶುಪಾಲ ಎ.ರಾಮೇಗೌಡ ವಹಿಸಿದ್ದರು. ತಾಲೂಕು ಕಸಾಪ ಅಧ್ಯಕ್ಷ ಹೆಚ್.ಕೆ.ಮಹದೇವ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ರೇವಣ್ಣ, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಸ್.ಗೋವಿಂದೇಗೌಡ, ಸಹಾಯಕ ಗ್ರಂಥಪಾಲಕ ಸತೀಶ್, ಕಸಾಪ ಗೌರವ ಕಾರ್ಯದರ್ಶಿ ಟಿ.ಲೋಕೇಶ್, ಗೌರವ ಸಲಹೆಗಾರ, ನಟ ಕುಮಾರ್ ಅರಸೇಗೌಡ, ಪದಾಧಿಕಾರಿಗಳಾದ ಡಿ.ವಿಜಯಕುಮಾರ್, ಎಸ್.ಗಂಗಾಧರ, ಎ.ಎನ್.ತ್ರಿನೇಶ್, ವಿಜಯ, ಎ.ಲೋಕೇಶ್, ಮಹದೇವಮ್ಮ, ವಾಸುಕಿ, ವಿ.ವೆಂಕಟಯ್ಯ, ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಜಗದೀಶ್ ಉಪಸ್ಥಿತರಿದ್ದರು.

ಗಾಯಕರಾದ ಸಿಂಗೇಶ್ ಹಾಗೂ ಗಾಯಕಿ ಅರ್ಚನ ಕುವೆಂಪು ರಚನೆಯ ಗೀತೆಗಳನ್ನು ಹಾಡಿದರು. ಕುವೆಂಪು ಅವರ ರಚನೆಯ ಗೀತೆಗಳು ಹಾಗೂ ಪ್ರಬಂಧ ರಚನೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿನಿಯರಿಗೆ ಬಹುಮಾನ ನೀಡಲಾಯಿತು. ಉಪನ್ಯಾಸಕ ವಾಸು ಕಾರ್ಯಕ್ರಮ ನಿರೂಪಿಸಿದರು.

ಟೈಲರ್ ಬಾಬು ನಿಧನ



ಹುಣಸೂರು, ಜ.1– ನಗರದ ಕಲ್ಕುಣಿಕೆ ಹೌಸಿಂಗ್ ಬೋರ್ಡ್ ನಿವಾಸಿ, ಪ್ರೆಸ್ಟೀಜ್ ಟೈಲರ್ ಅಂಗಡಿ ಮಾಲೀಕ ಟೈಲರ್ ಬಾಬು ಅಲಿಯಾಸ್ ಶಿವಕುಮಾರ್(53) ಸೋಮವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಸಹೋದರ, ಸಹೋದರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ತಾಲೂಕು ಕಚೇರಿ ಪಕ್ಕದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

(ಕರ್ನಾಟಕ ಸರ್ಕಾರ)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:08/2023-24 ದಿನಾಂಕ:30.12.2023

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಬೇಲೂರು, ಹಾಗೂ ಸಕಲೇಶಪುರ ಉಪ ವಿಭಾಗ ವ್ಯಾಪ್ತಿಯಲ್ಲಿ ಕೃಷಿ ಇಲಾಖೆ ಯೋಜನೆ, 2022-23ನೇ ಸಾಲಿನ ವಿವೇಕ ಯೋಜನೆ, 2022-23ನೇ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆ ಯೋಜನೆಯಡಿಯ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಕೆ.ಪಿ.ಪಿ.ಪಿ ಅಡಿ kw-1 Kw-2 ರ ರೀತ್ಯಾ ಅಂತರ್ಜಾಲದಲ್ಲಿ ದಿ: 30.12.2023 ರಿಂದ ದಿ:08.01.2024ರ ಸಂಜೆ 4.00 ಘಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 08.01.2024 ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:06.01.2024 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿ:10.01.2024 ರಂದು ಸಂಜೆ 4.00 ಗಂಟೆಯ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನಿಯರ್,
ಪ.ರಾಜ್.ಇಂ.ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/606/ಕೆಎಸ್‌ಎಂಸಿಎ/615/2023-24

ಪುರಸಭಾ ಕಾರ್ಯಾಲಯ, ತಿ.ನರಸೀಪುರ
ಮೈಸೂರು ಜಿಲ್ಲೆ - 571124 ದೂರವಾಣಿ: 08227-261232
ವೆಬ್‌ಸೈಟ್:www.tnarasipuratown.mrc.gov.in, ಇಮೇಲ್:itstaff_ulb_tnarasipura@yahoo.com

ಸಂಖ್ಯೆ:ಪು/ತಿನಸು/ಕಿ.ಇಂ/02/2023-24 ದಿನಾಂಕ:30.12.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999-2000ರ ನಿಯಮದಂತೆ, ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ತಿ.ನರಸೀಪುರ ಪುರಸಭೆಗೆ ಅವಶ್ಯಕವಿರುವ ಈ ಕೆಳಗಿನ ಕೆಲಸಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ಟೆಂಡರ್ ಷೆಡ್ಯೂಲ್ ದಿನಾಂಕಗಳ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ನೋಡಬಹುದು ಮತ್ತು ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 08227-261232 ಅನ್ನು ಸಂಪರ್ಕಿಸಿ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಕ್ರ. ಸಂ.	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1.	ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ಎಸ್.ಡಬ್ಲ್ಯೂ.ಎಂ ಪ್ಲಾಂಟ್‌ನಲ್ಲಿ ಶೆಡ್ ನಿರ್ಮಾಣ	7,50,000/-	18,750/-
2.	ತಿ.ನರಸೀಪುರ ಪುರಸಭಾ ವ್ಯಾಪ್ತಿಯ DWCC ರಲ್ಲಿ SBM 1.0 ರಡಿ 60 ಟನ್ ಮೆಟ್ರಿಕ್ ಟನ್ ಸಾಮರ್ಥ್ಯದ ವೇ ಬ್ರಿಡ್ಜ್ ಕಾಮಗಾರಿ	5,00,000/-	12,500/-

ಸಹಿ/- ಮುಖ್ಯಾಧಿಕಾರಿ
ಪುರಸಭೆ, ತಿ.ನರಸೀಪುರ

DIPR/MYS/KAVITA/829/23-24

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು